ಸಂಪುಟ: 13 Volume ಸಂಚಿಕೆ: 345 Issue ಪುಟಗಳು 08 Pages ಸೋಮವಾರ 09 ಮಾರ್ಚ್ 2026 ₹6 PRGINO.120927 (RNINO: KARKAN/2011/48371) BDR/054/2026-2027 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ನಿಷ್ಪ್ರಯೋಜಕ ವ್ಯಕ್ತಿಗಳು ಕೇವಲ ತಿನ್ನುವುದಕ್ಕಾಗಿ ಮತ್ತು ಕುಡಿಯುವುದಕ್ಕಾಗಿ ಬದುಕುತ್ತಾರೆ. ಪ್ರಯೋಜನಕಾರಿ ವ್ಯಕ್ತಿ ಗಳು ಬದುಕುವುದಕ್ಕಾಗಿ ತಿನ್ನುತ್ತಾರೆ ಮತ್ತು ಕುಡಿಯುತ್ತಾರೆ.

–ಸಾಕ್ರೆಟಿಸ್

ಶ್ರೀಶರಣಬಸವೇಶ್ವರ ಮಹಾರಥೋತ್ಸವ 6
ದ್ವಾರಬಾಗಿಲು ಕಟ್ಟಡ ಕಾಮಗಾರಿ ಭೂಮಿ ಪೂಜೆ 7
ಪುಟ್ಟರಾಜ ಕವಿ ಗವಾಯಿಗಳ ಕವಿಗೋಷ್ಠಿ 8

ಮಲ್ಲಮ್ಮ ನುಡಿ

**ಯುಗಾದಿ ವಿಶೇಷಾಂಕ- 2026**

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.


**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com




ಶಾಸಕ ಹನುಮಂತ ನಿರಾಣಿ ಮಲ್ಲಮ ನುಡಿ ಪತ್ರಿಕೆಗೆ ಶುಭಹಾರೈಸಿದರು...



ಬಸವಕಲ್ಯಾಣ: ತಾಲೂಕಿನ ಸುಕ್ಷೇತ್ರ ಹಾರಕೂಡ ಶ್ರೀಮಠದ ದಾಸೋಹ ಮನೆಯಲ್ಲಿ ಶ್ರೀ ಶರಣಬಸವೇಶ್ವರರ 204ನೇ ಜಾತ್ರಾ ಮಹೋತ್ಸವ ನಿಮಿತ್ಯ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಶ್ರೀ ಶರಣಬಸವೇಶ್ವರ ಭಾವಚಿತ್ರಕ್ಕೆ ಗೌರವ ಸಮರ್ಪಿಸಿದರು. ಈ ಸಂದರ್ಭದಲ್ಲಿ ಮಲ್ಲಿನಾಥ ಹಿರೇಮಠ ಹಾರಕೂಡ. ಡಾ. ದೇವಿಂದ್ರಪ್ಪ ಚಿಂಚೋಳಿಕರ್. ಡಾ. ಶ್ರೀನಿವಾಸ ಚಿಂಚೋಳಿಕರ್ ಹಾಗೂ ಹೇಮಲತಾ ಎಂ. ಹಿರೇಮಠ, ಅಲ್ಲಮಪ್ರಭು ಹಿರೇಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಕ್ರಿಕೆಟ್ ಗೆದ್ದು–ಸೋತವರಿಗೆ ಹಣ ಎಷ್ಟು..?

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಈ ಬಾರಿಯ ಟಿ20 ವಿಶ್ವಕಪ್ ಫೈನಲ್ ಪಂದ್ಯವು ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ನಡುವೆ ನಡೆಯಲಿದೆ. (ಪತ್ರಿಕೆ ಪ್ರಿಂಟ್‌ಗೆ ಹೋಗಿದೆ) ಪಂದ್ಯದ ವಿಜೇತರು ಟ್ರೋಫಿ ಗೆಲ್ಲುವುದರೊಂದಿಗೆ ದೊಡ್ಡ ಪ್ರಮಾಣದ ನಗದು ಬಹುಮಾನವನ್ನು ಪಡೆ–ಯುತ್ತದೆ. ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) 2026ನೇ ಆವೃತ್ತಿಯ ಟೂರ್ನಮೆಂಟ್‌ಗಾಗಿ $13.5 ಮಿಲಿಯನ್ (120 ಕೋಟಿಗೂ ಹೆಚ್ಚು) ಬಹುಮಾನ ಮೊತ್ತವನ್ನು ಘೋಷಿಸಿದೆ. ಈ ಮೊತ್ತವು ಹಿಂದಿನ 2024ರ ಟಿ20 ವಿಶ್ವಕಪ್ ಆವೃತ್ತಿಗಿಂತ ಶೇ.20 ರಷ್ಟು ಹೆಚ್ಚಳವಾಗಿದೆ. ಭಾರತವು ಹಿಂದಿನ ಆವೃತ್ತಿಯಲ್ಲಿ ವಿಶ್ವಕಪ್ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಇದೀಗ



ಗೆಲ್ಲುವ ಮೂಲಕ ಟಿ20 ಕಿರೀಟವನ್ನು ಉಳಿಸಿಕೊಂಡ ಮೊದಲ ತಂಡ ಎನಿಸಿಕೊಳ್ಳುವ ಸುವರ್ಣಾವಕಾಶವನ್ನು ಭಾರತ ಹೊಂದಿದೆ. ಅಹಮದಾಬಾದ್‌ನಲ್ಲಿ ನಡೆಯುವ ಫೈನಲ್‌ನಲ್ಲಿ ಗೆಲ್ಲುವ ತಂಡವು $3 ಮಿಲಿಯನ್, ಅಂದರೆ 27.48 ಕೋಟಿ ಹಣ ಪಡೆಯುತ್ತದೆ. ರನ್ನರ್ ಅಪ್ ತಂಡವು ಗಮನಾರ್ಹ ಮೊತ್ತ $1.6 ಮಿಲಿಯನ್ (14.65 ಕೋಟಿ) ಗಳಿಸುತ್ತದೆ.

## ಕಲಬುರ್ಗಿಯಲ್ಲಿ ಮಿಲೆಟ್ ಹಬ್..?

- ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ರಾಜ್ಯ ಸರ್ಕಾರ ಘೋಷಿಸಿರುವ ಮಿಲೆಟ್ ಹಬ್ ಯಾವ ಸ್ಥಳದಲ್ಲಿ ಸ್ಥಾಪನೆಗೊಳ್ಳಬೇಕು ಎಂಬುದು ಇನ್ನೂ ಅಂತಿಮವಾಗಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಜಿಲ್ಲಾ ಮಟ್ಟದ 'ಸಿರಿ ಧಾನ್ಯ ಮೇಳ 2026' ಉದ್ಘಾಟನೆ ಹಾಗೂ ಬೆಳೆ ವಿಮೆ ಯೋಜನೆಯಡಿ ನೇರ ಹಣ ವರ್ಗಾವಣೆ ಮೂಲಕ ಜಿಲ್ಲೆಯ 2.90 ಲಕ್ಷ ರೈತರಿಗೆ ಮಧ್ಯಂತರ ಪರಿಹಾರ ಹಣ ಬಿಡುಗಡೆ ಮಾಡಿದ ಬಳಿಕ ಮಾತನಾಡಿದ ಅವರು,



ಕಲಬುರಗಿ ಜಿಲ್ಲೆಯಲ್ಲಿ ಮಿಲೆಟ್ ಹಬ್ ಸ್ಥಾಪನೆಗೆ ಕೃಷಿ ಇಲಾಖೆ ಸಮಗ್ರ ಯೋಜನಾ ವರದಿ ಹಾಗೂ ಬ್ಲೂಪ್ರಿಂಟ್ ಸಿದ್ಧಪಡಿಸಿ ಸಲ್ಲಿಸಿದರೆ, ಜಿಲ್ಲೆಯಲ್ಲಿ ಮಿಲೆಟ್ ಹಬ್ ಸ್ಥಾಪಿಸಲು ಸರ್ವ ಪ್ರಯತ್ನಗಳನ್ನು ಮಾಡಲಾಗುತ್ತದೆ ಎಂದು ಅಭಯ ನೀಡಿದ್ದಾರೆ.

'ಸಿರಿ ಧಾನ್ಯ' ಯೋಜನೆಯ ಉದ್ದೇಶವು ಸಿರಿಧಾನ್ಯಗಳ ಬಳಕೆಯನ್ನು ಉತ್ತೇಜಿಸುವುದು. 'ಕಲಬುರಗಿ ರೊಟ್ಟಿ'ಗೆ ನೀಡಿರುವ ಬ್ರ್ಯಾಂಡ್‌ನಂತೆ, ಸಿರಿಧಾನ್ಯಗಳಿಗೆ ಡಿಜಿಟಲ್ ಮಾರುಕಟ್ಟೆ ವೇದಿಕೆ ನಿರ್ಮಿಸುವ ಮೂಲಕ ಅವುಗಳಿಗೆ ಉತ್ತೇಜನ ನೀಡಲಾಗುವುದು ಎಂದಿದ್ದಾರೆ.

# ಹೈಗೆ ಒತ್ತಡದ ಓಲ್ಟೇಜ್

## ರಾಜ್ಯ ಕಾಂಗ್ರೆಸ್‌ನಲ್ಲಿ ಮತ್ತೆ ಕುರ್ಚಿ ಕದನ | ದಿನಕ್ಕೊಂದು ಟ್ವಿಸ್ಟ್ | ಡಿಸಿಎಂ ಶಿವಕುಮಾರ್ ದೆಹಲಿಗೆ

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ಕಾಂಗ್ರೆಸ್ ಪಕ್ಷದಲ್ಲಿ ಮತ್ತೆ ಕುರ್ಚಿ ಕದನ ಜೀವಂತವಾಗಿದೆ. ಅಭಿವೃದ್ಧಿಯ ಕಾರ್ಯಗಳ ಜೊತೆ ಜೊತೆಗೇ ದಿನಕ್ಕೊಂದು ಹೇಳಿಕೆಗಳ ಟ್ವಿಸ್ಟ್ ಜಾರಿಯಲ್ಲಿದೆ..!

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಹೈಕಮಾಂಡ್ ಮೇಲೆ ವಿಶ್ವಾಸವಿದೆ. ಅವಕಾಶ ಕೊಟ್ಟರೆ ಭವಿಷ್ಯದ ಎರಡೂ ಬಜೆಟ್‌ಗಳನ್ನು ಮಂಡಿಸುವೆ ಎಂದು ಹೇಳಿದ್ದು ಚರ್ಚೆಗೆ ಗ್ರಾಸವಾಗಿದೆ. ಏತನ್ಮಧ್ಯೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿ ಪ್ರಯಾಣ ಕೈಗೊಂಡಿರುವುದು ರಾಜಕೀಯ ತೀವ್ರ ಸಂಚಲನಕ್ಕೆ ಕಾರಣವಾಗಿದೆ.

**ಖರ್ಗೆ ಜೊತೆ ಪ್ರಯಾಣ:** ಕಲಬುರಗಿ ಜಿಲ್ಲೆಯ ಚಿತ್ತಾಪುರ ವಿಧಾನಸಭಾ ಕ್ಷೇತ್ರದಲ್ಲಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಳಿಕ ಡಿ.ಕೆ.ಶಿ ಅವರು ಅಲ್ಲಿಂದ ವಿಶೇಷ ವಿಮಾನದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜೊತೆಗೆ ದೆಹಲಿಗೆ ಪ್ರಯಾಣಿಸುತ್ತಿರುವುದು ಕುತೂಹಲ ಹೆಚ್ಚಿಸಿದೆ.

**ರಾಜಕೀಯ ಚರ್ಚೆಗೆ ಕಾರಣ:** ಖಾಸಗಿ ಕಾರ್ಯಕ್ರಮದ ನಿಮಿತ್ತ ದೆಹಲಿಗೆ ತೆರಳುತ್ತಿರುವುದಾಗಿ ಡಿ.ಕೆ.ಶಿವಕುಮಾರ್ ಕಚೇರಿ ಮಾಹಿತಿ ನೀಡಿದೆ. ಆದರೆ ಇದು ರಾಜಕೀಯವಾಗಿ ನಾನಾ ರೀತಿಯ ಚರ್ಚೆಗಳಿಗೂ ಕಾರಣವಾಗಿದೆ. ನಿರೀಕ್ಷೆಯಂತೆ ಸಿದ್ದರಾಮಯ್ಯ ಬಜೆಟ್ ಮಂಡಿಸಿ ಆಗಿದೆ. ಸಿಎಂ ಅಧಿಕಾರ ಬಿಟ್ಟುಕೊಡಬೇಕು. ಹೈಕಮಾಂಡ್ ಸ್ಪಷ್ಟ ಸೂಚನೆ ಕೊಡಬೇಕು ಎಂಬುದು ಡಿ.ಕೆ.ಶಿ ಪ್ರತಿಪಾದನೆಯಾಗಿದೆ.

### ಹೈಗೆ ಬಿಸಿ ತುಪ್ಪ

ಸದ್ಯ ಕುರ್ಚಿ ವಿಚಾರ ಬಿಡಿ, ಪಂಚರಾಜ್ಯಗಳ ವಿಧಾನಸಭೆ ಚುನಾವಣೆ ಮುಗಿಯುವವರೆಗೂ ಸಹನೆಯಿಂದ ಇರಿ ಎಂದು ವರಿಷ್ಠ ನಾಯಕರು ಅನೇಕ ಬಾರಿ ಡಿಕೆಶಿ ಅವರಿಗೆ ಸೂಚನೆ ನೀಡಿದ್ದಾರೆ. ಇದಕ್ಕೆ ಡಿ.ಕೆ.ಶಿ ಒಪ್ಪುತ್ತಿಲ್ಲ. ಎರಡು ಮುಕ್ಕಾಲು ವರ್ಷ ಕಳೆದಿದೆ. ಇರುವ ಅವಧಿಗೆ ತಮಗೇ ಅವಕಾಶ ಕೊಡಬೇಕು. ಇಲ್ಲವಾದರೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭವಿಷ್ಯದಲ್ಲಿ ಹಾನಿಯಾಗಲಿದೆ ಎಂದು ಎಚ್ಚರಿಸಿರುವುದು ಹೈಗೆ ಬಿಸಿ ತುಪ್ಪವಾಗಿದೆ.

### ಹೈಕಮಾಂಡ್ ಹೇಳಿದರೆ..!

ಸಿದ್ದರಾಮಯ್ಯ ಅವರು ಪದೇ ಪದೆ ಹೈಕಮಾಂಡ್ ಹೇಳಿದಂತೆ ಕೇಳುತ್ತೇನೆ. ಹೈಕಮಾಂಡ್ ಬಿಡು ಎಂದರೆ ಬಿಡುತ್ತೇನೆ, ಇರು ಎಂದರೆ ಇರುತ್ತೇನೆ ಎಂದು ಹೇಳುತ್ತಲೇ ಇದ್ದಾರೆ. ಅಧಿಕಾರ ಹಂಚಿಕೆ ದೆಹಲಿಯಲ್ಲೇ ವಿಶೇಷವಾಗಿ ಹೈಕಮಾಂಡ್ ಸಮ್ಮುಖದಲ್ಲೇ ಇತ್ಯರ್ಥವಾಗಬೇಕೆಂಬುದು ಖಚಿತ. ಇದರಿಂದ ಹೈಕಮಾಂಡ್ ಮೇಲೆ ಒತ್ತಡ ಹೇರಲು ಡಿ.ಕೆ.ಶಿವಕುಮಾರ್ ನಾನಾ ರೀತಿಯ ಪ್ರಯತ್ನ ಮುಂದುವರಿಸಿದ್ದಾರೆ.




### ರಾಗಾ ಹೇಳಲ್ಲ, ಮುಖ್ಯಮಂತ್ರಿ ಬಿಡಲ್ಲ

ಒಂದು ಮೂಲದ ಪ್ರಕಾರ ಡಿ.ಕೆ.ಶಿ ಅವರಿಗೆ ರಾಹುಲ್‌ಗಾಂಧಿ ಭೇಟಿಯಾಗಲು ಅವಕಾಶ ಕೊಟ್ಟಿಲ್ಲ. ರಾಹುಲ್ ಹೇಳಿದರೆ ನಾಯಕತ್ವ ತ್ಯಜಿಸುವೆ ಎನ್ನುವುದು ಸಿದ್ದರಾಮಯ್ಯವಾದ. ಆದರೆ ರಾಹುಲ್ ಅವರು ಸಿಎಂಗೆ ಸೂಚನೆ ನೀಡುವ ಲಕ್ಷಣಗಳು ಕಂಡುಬರುತ್ತಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ, ಡಿ.ಕೆ.ಶಿವಕುಮಾರ್ ನಾನಾ ರೀತಿಯ ಒತ್ತಡ ಹೇರಲು ಪ್ರಯತ್ನಿಸುತ್ತಿದ್ದಾರೆ.

### ಹಠ, ಪಟ್ಟು ಬಿಡದ ಛಲ..!

ರಾಹುಲ್–ಡಿಕೆಶಿ ಭೇಟಿ ಆಗದೆ ಸಮಸ್ಯೆ ಇತ್ಯಾರ್ಥ ಕಷ್ಟ. ಇದರಿಂದಾಗ ಸಮಸ್ಯೆ ಮಲ್ಲಿಕಾರ್ಜುನ್ ಖರ್ಗೆ ಅವರ ಕೈಮೀರಿ ಹೋಗಿದ್ದು, ಹೈಕಮಾಂಡ್ ಕೂಡ ಸಂಕಷ್ಟಕ್ಕೆ ಸಿಲುಕಿದೆ. ಪಟ್ಟು ಬಿಡದ ಡಿ.ಕೆ.ಶಿವಕುಮಾರ್ ಶತಾಯಗತಾಯ ಅಧಿಕಾರ ದಕ್ಕಿಸಿಕೊಳ್ಳಲೇ ಬೇಕೆಂಬ ಛಲದಂಕರಾಗಿದ್ದಾರೆ.

### ಸಕ್ಸಸ್ ಆಗದ ಈ ಪ್ಲಾನ್

ಜಿಬಿಎಯ ವ್ಯಾಪ್ತಿಯ 5 ಮಹಾನಗರ ಪಾಲಿಕೆ, ಜಿ.ಪಂ, ತಾ.ಪಂ. ಚುನಾವಣೆ ನಡೆಯಬೇಕಿದೆ. ಈ ವೇಳೆ ಪಕ್ಷವನ್ನು ಗೆಲ್ಲಿಸಬೇಕಾದರೆ ಸಮರ್ಥ ನಾಯಕತ್ವ ಬೇಕು ಎನ್ನುವವಾದ ಡಿ.ಕೆ.ಶಿವಕುಮಾರ್ ಅವರದು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ, ಸಂಸದೀಯ ಮಂಡಳಿ ಅಧ್ಯಕ್ಷೆ ಸೋನಿಯಾ ಸೇರಿ ಅನೇಕರನ್ನು ಭೇಟಿ ಮಾಡಿ ಈ ಬಗ್ಗೆ ಗಮನ ಸೆಳೆದದ್ದೂ ಇದೆ. ಇದಾವುದೂ ವರ್ಕೌಟ್ ಆಗಿಲ್ಲ.

## ವಿದ್ಯಾರ್ಥಿಗೆ ಚಾಕು ಇರಿದು ಕೊಲೆ..!

- ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ವಿದ್ಯಾರ್ಥಿಯೊಬ್ಬ ತನ್ನ ಸಹಪಾಠಿಗಳ ಮೇಲೆ ಕಬ್ಬಿಣದ ಸರಳು, ಸ್ಕ್ರೂಡ್ರೈವರ್, ಚಾಕುವಿನಿಂದ ದಾಳಿ ಮಾಡಿದ್ದು, ಘಟನೆಯಲ್ಲಿ ಓರ್ವ ವಿದ್ಯಾರ್ಥಿ ಸಾವನ್ನಪ್ಪಿ, 7 ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡಿರುವ ಘಟನೆ ಬಳ್ಳಾರಿ ನಗರದ ಖಾಸಗಿ ವಸತಿ ಶಾಲೆಯಲ್ಲಿ ನಡೆದಿದೆ.

ಆಂಧ್ರ ಪ್ರದೇಶದ ಅದವಾನಿಯ ಹೇಮಂತ್ ಮೃತ ಬಾಲಕ. ಮೃತದೇಹವನ್ನು ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರಕ್ಕೆ (ವಿಮ್ಸ್) ಮರಣೋತ್ತರ ಪರೀಕ್ಷೆಗಾಗಿ ಕೊಂಡೊಯ್ಯಲಾಗಿದೆ. ಇವರೆಲ್ಲರೂ 9ನೆ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು ಎನ್ನಲಾಗಿದೆ. ರಾತ್ರಿ ಊಟದ ಬಳಿಕ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಮಲಗಿದ್ದರು. ಈ ವೇಳೆ ಆರೋಪಿತ ವಿದ್ಯಾರ್ಥಿ ಮಂಚದ ರಾಡ್, ಸ್ಕ್ರೂ ಡ್ರೈವರ್ ಹಾಗೂ ರೇಡಿಯಮ್ ಕಟರ್, ಚಾಕುವಿನಿಂದ ಸಹಪಾಠಿಗಳ ಮೇಲೆ ದಾಳಿ ನಡೆಸಿದ್ದಾನೆ ಎಂದು ತಿಳಿದು ಬಂದಿದೆ. ಪ್ರಕರಣ ದಾಖಲಾಗಿದ್ದು, ತನಿಖೆ ಮುಂದು ವರಿದಿದೆ.

## ಸಂಸತ್ ಹೆಗ್ಗಳಿಕೆ ಹೆಚ್ಚಿಸುವ ಶೇ.33% ಮೀಸಲು

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ನೀಡಿರುವ ಶೇ.33% ಮೀಸಲು ಭವಿಷ್ಯದಲ್ಲಿ ಸಂಸದೀಯ ವ್ಯವಸ್ಥೆಯ ಹೆಗ್ಗಳಿಕೆಯನ್ನು ಹೆಚ್ಚಿಸಲಿದೆ. ನನಗೆ ಇರುವ ಮಾಹಿತಿ ಪ್ರಕಾರ 2032–33ರಲ್ಲಿ ಮಹಿಳಾ ಮೀಸಲಾತಿ ಅನುಷ್ಠಾನಕ್ಕೆ ಬರಬಹುದು ಎಂದು ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.



ನಗರದ ಡಾ. ಬಾಬು ಜಗಜೀವನ ರಾಮ್ ಭವನದಲ್ಲಿ ಜೆಡಿಎಸ್ ಮಹಿಳಾ ಘಟಕ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಷಣ ಮಾಡಿ, ಶೇ. 33% ಮಹಿಳಾ ಮೀಸಲಾತಿ ಜಾರಿಗೆ ಬಂದರೆ ವಿಧಾನಸಭೆಯಲ್ಲಿ 75 ಜನ ಮಹಿಳೆಯರೇ ಶಾಸಕಿಯರು ಇರುತ್ತಾರೆ. ಎಲ್ಲ ಪಕ್ಷಗಳ ಮಹಿಳೆಯರು ಮನಸು ಮಾಡಿದರೆ ಮಹಿಳಾ ಮುಖ್ಯಮಂತ್ರಿಯೇ ಆಗಬಹುದು. ಅಂಥ ಅವಕಾಶ ಮೀಸಲಾತಿಯಿಂದ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

## ಬತ್ತಿದ ಪ್ರಗತಿ ಜನರ ಖುಷಿ ಎಲ್ಲೋತ್ರಿ?

- ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ತಾಲೂಕು ಒಮ್ಮೆ ಅಭಿವೃದ್ಧಿ ಮತ್ತು ಜನರ ಚೈತನ್ಯಕ್ಕೆ ಹೆಸರುವಾಸಿಯಾಗಿತ್ತು. ಆದರೆ ಇತ್ತೀಚೆಗೆ ಜನರಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳು ಸರಿಯಾಗಿ ದೊರೆಯದ ಕಾರಣ ಜನರಲ್ಲಿ ಅಸಮಾಧಾನ ಹೆಚ್ಚುತ್ತಿದೆ. ಅಭಿವೃದ್ಧಿಯ ನಿರೀಕ್ಷೆಯಲ್ಲಿ ಇದ್ದ ಹುಮನಾಬಾದ್ ಜನತೆ ಇಂದು ತಮ್ಮ ಖುಷಿಯನ್ನು ಕಳೆದುಕೊಂಡಂತಾಗಿದೆ. ರಸ್ತೆಗಳು, ಕುಡಿಯುವ ನೀರು, ಆರೋಗ್ಯ ಸೇವೆ, ಶಿಕ್ಷಣ ಹಾಗೂ ಉದ್ಯೋಗದಂತಹ ಮೂಲಭೂತ ಅಗತ್ಯಗಳು ಸಮರ್ಪಕವಾಗಿ ಲಭ್ಯವಾಗದಿರುವುದು ಜನರಿಗೆ ದೊಡ್ಡ ಸಮಸ್ಯೆಯಾಗಿದೆ. ಗ್ರಾಮೀಣ ಭಾಗಗಳಲ್ಲಿ ರೈತರು ಮತ್ತು ಬಡವರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಅಧಿಕಾರಿಗಳ ಬಳಿ ಹೋಗಬೇಕಾದರೆ ಸರಿಯಾದ ಸ್ಪಂದನೆ ದೊರೆಯದಿರುವುದು ನೋವುಂಟು ಮಾಡುತ್ತಿದೆ. ಇದರಿಂದ ಜನರಲ್ಲಿ ನಿರಾಶೆಯ ಭಾವನೆ ಹೆಚ್ಚುತ್ತಿದೆ. ಜನಪ್ರತಿನಿಧಿಗಳು ಚುನಾವಣೆ ಸಮಯದಲ್ಲಿ ಅನೇಕ ಭರವಸೆಗಳನ್ನು ನೀಡುತ್ತಾರೆ. ಆದರೆ ಚುನಾವಣೆ ಮುಗಿದ ಬಳಿಕ ಜನರ ಸಮಸ್ಯೆಗಳನ್ನು ಕಡೆಗಣಿಸುವುದು ಸರಿಯಲ್ಲ. ಹುಮನಾಬಾದ್ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಯೋಜನೆಗಳು ಇನ್ನೂ ನನೆಗುದಿಗೆ ಬಿದ್ದಿವೆ. ಇವುಗಳನ್ನು ತಕ್ಷಣ ಜಾರಿಗೆ ತರುವ ಅಗತ್ಯವಿದೆ. ಜನರಿಗೆ ಮೂಲ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರ ಮತ್ತು ಆಡಳಿತದ ಪ್ರಮುಖ ಕರ್ತವ್ಯವಾಗಿದೆ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಜನರ ನೋವುಗಳನ್ನು ಅರ್ಥಮಾಡಿಕೊಂಡು ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಬೇಕು. ಹುಮನಾಬಾದ್ ಜನರ ಮುಖದಲ್ಲಿ ಮತ್ತೆ ಸಂತೋಷ ಮೂಡಿಸುವಂತೆ ಕೆಲಸ ಮಾಡುವ ಸಮಯ ಬಂದಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸಿ ಅಭಿವೃದ್ಧಿಯ ದಾರಿಯಲ್ಲಿ ಹುಮನಾಬಾದ್ ಅನ್ನು ಮುನ್ನಡೆಸಿದಾಗ ಮಾತ್ರ ಜನರು ಮತ್ತೆ ಖುಷಿಯಿಂದ ಬದುಕುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

## ಸರ್ಕಾರಿ ಶಾಲೆ ಮಕ್ಕಳಿಗಿಲ್ಲ ಶೌಚಾಲಯ..!

- ಮಲ್ಲಮ್ಮ ನುಡಿ ವಾರ್ತೆ ವೀರೇಶ್ ಹೊಸಳ್ಳಿ, ಸಿಂಧನೂರು

ಶೈಕ್ಷಣಿಕ ಸುಧಾರಣೆಗಾಗಿ ಮಕ್ಕಳ ಕಲಿಕಾ ಹೆಸರಿನಲ್ಲಿ ಸರ್ಕಾರ ಶಿಕ್ಷಣ ಇಲಾಖೆಯಿಂದ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತದೆ. ಆದರೆ ಗ್ರಾಮೀಣ ಪ್ರದೇಶಗಳ ಶಾಲೆಗಳಲ್ಲಿ ಒಂದೊಂದು ಕಡೆ ಶೌಚಾಲಯವೇ ಇಲ್ಲ..! ಮೂಲಭೂತ ಸೌಕರ್ಯಗಳ ಇಲ್ಲದೆ ವಿದ್ಯಾರ್ಥಿಗಳೇ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಪೋಷಕರ ಆರೋಪ..?: ಸೋಮಲಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಸರಿಯಾದ ಶೌಚಾಲಯ ಹಾಗೂ ಮೂಲಭೂತ ಸೌಕರ್ಯಗಳ ಇಲ್ಲದೆ ಮಕ್ಕಳ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ಶಾಲೆಯ ಎಸ್. ಡಿ.ಎಮ್. ಸಿ ಅಧ್ಯಕ್ಷರು ಹಾಗೂ ಪೋಷಕರು ಗ್ರಾ.ಪಂ. ಮುಂದೆ ಪ್ರತಿಭಟಿಸಿದ್ದು ಪ್ರಯೋಜನವಾಗಿಲ್ಲ ಎಂದು ಪೋಷಕರು ಆರೋಪಿಸಿದ್ದಾರೆ.

ಕ್ಯಾರೇ ಎನ್ನದ ಅಧಿಕಾರಿಗಳು: ಈಗಾಗಲೇ ಹಲವು ಬಾರಿ ಮೌಖಿಕ ಮತ್ತು ಮನವಿ ಸಲ್ಲಿಸಿದರೂ ಅಧಿಕಾರಿಗಳು ಕ್ಯಾರೇ ಎನ್ನುತ್ತಿಲ್ಲ. ಆದರೆ ಇಲ್ಲಿನ ಗ್ರಾ.ಪಂ. ಅಧ್ಯಕ್ಷರು ಮತ್ತು ಪಿಡಿಒ ಅಧಿಕಾರಿಗಳ ಸೋಲಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ನಮಗೆ ಸಂಬಂಧಿಸಿದ್ದಲ್ಲ ಎನ್ನುವ ಮೂಲಕ ಹಾರಿಕೆ ಉತ್ತರ ನೀಡುತ್ತಿದ್ದಾರೆ. ನಮಗೆ ಹೊಸ ಕಟ್ಟಡ ಕೊಡದೇ ಇದ್ದರೆ ಪರವಾಗಿಲ್ಲ ಕೊನೆಗೆ ಮೂಲಭೂತ ಸೌಕರ್ಯ ಒದಗಿಸಿ ಎಂದು ಪೋಷಕರು ಮನವಿ ಮಾಡುತ್ತಿದ್ದಾರೆ.

ಮುಖ್ಯಮಂತ್ರಿಗಳೇ ಒಮ್ಮೆ ಇತ್ತ ಗಮನಿಸಿ..!



### ಅಧಿಕಾರಿಗಳೇ ಇತ್ತ ಗಮನ ಹರಿಸಿ..!

ಮಕ್ಕಳಿಗೆ ಶೌಚಾಲಯ ಇಲ್ಲದೆ ತೀವ್ರ ತೊಮದರೆ ಆಗಿದೆ. ಹೊಸ ಕಟ್ಟಡ ಕಟ್ಟಿಸಿ ಕೊಡದೆ ಹೋದರೆ ಪರವಾಗಿಲ್ಲ. ಕೊನೆಗೆ ಸುಣ್ಣ ಬಣ್ಣ ಹಚ್ಚಿ ಸುರಕ್ಷತೆಗಾಗಿ ಶಾಲಾ ಸಿಸಿ ಟಿವಿ ಕ್ಯಾಮೆರಾ ಅಳವಡಿಸಿ ಎಂದು ತಮ್ಮಲ್ಲಿ ಮನವಿ ಮಾಡುತ್ತೇವೆ. ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದರೆ ಮುಂದೆ ಆಗುಹೋಗುಗಳಿಗೆ ನೀವೇ ಹೊಣೆ ಎಂದು ಜೈ ಭೀಮ್ ಸಂಘಟನೆ ಉಪಾಧ್ಯಕ್ಷ ಸಿದ್ದಪ್ಪ ಸೋಮಲಾಪುರು ಎಚ್ಚರಿಸಿದ್ದಾರೆ.

### ನೂರೆಂಟು ಸಮಸ್ಯೆ ಎಂದರು ಶಾಸಕ..!

ಶೌಚಾಲಯ ಸಮಸ್ಯೆ ಬಗ್ಗೆ ಪತ್ರಿಕೆ ಶಾಸಕರನ್ನು ಸಂಪರ್ಕಿಸಿದಾಗ, ಸಮಸ್ಯೆಗಳು ನೂರೆಂಟು ರೀ.. ಎಲ್ಲಾ ಸಮಸ್ಯೆಗಳನ್ನು ನಿಭಾಯಿಸುವುದಕ್ಕೆ ಸಾಧ್ಯನಾ..? ಹಂತಹಂತವಾಗಿ ಬಗೆಹರಿಸುತ್ತೇವೆ. ಎಲ್ಲದನ್ನು ನಾನೊಬ್ಬನೇ ಮಾಡುವುದಕ್ಕಾಗುತ್ತೆ? ಎಂದು ಶಾಸಕರು ಹಂಪನಗೌಡ ಬಾದರ್ಲಿ ಉತ್ತರಿಸಿದ್ದಾರೆ. ನೂರಾರು ಮಕ್ಕಳು ಇರುವ ಸರ್ಕಾರಿ ಶಾಲೆಯ ಬಗ್ಗೆ ಜವಾಬ್ದಾರಿ ಇರುವ ತಾಲೂಕಿನ ಶಾಸಕರೇ, ಹಗುರವಾಗಿ ಉತ್ತರಿಸಿದರೆ ಕ್ಷೇತ್ರದ ಪೋಷಕರು ಯಾರನ್ನು ಕೇಳಬೇಕು..?

ಕುಟುಂಬ, ಸಮಾಜ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಅಪಾರ. ಮಹಿಳಾ ಸಬಲೀಕರಣಕ್ಕೆ ಇನ್ನಷ್ಟು ಬಲ ನೀಡಿ, ನಾರಿಶಕ್ತಿಯ ಗೌರವ ಮತ್ತು ಸರ್ವಾಂಗೀಣ ಪ್ರಗತಿಗೆ ಎಲ್ಲರೂ ಸೇರಿ ಶ್ರಮಿಸೋಣ: ಬೊಮ್ಮಾಯಿ, ಮಾಜಿ ಸಿಎಂ

## ಶಿಕ್ಷಣಜೊತೆಗೆ ಸಂಸ್ಕಾರ ಮೈಗೂಡಿಸಿಕೊಳ್ಳುವುದು ಅಗತ್ಯ



**ಮಲ್ಲಮ್ಮನುಡಿ ವಾರ್ತೆ ಭಾಲ್ಕಿ**

ವಿದ್ಯಾರ್ಥಿಗಳು ಗುಣಾತ್ಮಕ ಶಿಕ್ಷಣವನ್ನು ಪಡೆದುಕೊಳ್ಳುವುದರ ಜೊತೆಗೆ ಉತ್ತಮ ಸಂಸ್ಕಾರವನ್ನು ಸಹ ಮೈಗೂಡಿಸಿಕೊಳ್ಳಬೇಕು ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಪ್ರತಾಪಸಿಂಗ್ ತಿವಾರಿ ಹೇಳಿದರು. ತಾಲ್ಲೂಕಿನ ಚಾಳಕಾಪೂರ ಗ್ರಾಮದ ಬಸವ ಸಂದೇಶ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ 13ನೇ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ಅದ್ಭುತ ಪ್ರತಿಭೆ ಅಡಗಿದೆ. ಅವರಿಗೆ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣವನ್ನು ನೀಡುವುದರ ಜೊತೆಗೆ ಸಕಾಲಕ್ಕೆ ಸೂಕ್ತ ಮಾರ್ಗದರ್ಶನ, ಸಲಹೆ ನೀಡಿದ್ದಲ್ಲಿ ಅದ್ಭುತ ಸಾಧನೆ ಮಾಡಲು ಸಾಧ್ಯ ಎಂದು ತಿಳಿಸಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ನಿವೃತ್ತ ಉಪ ಕುಲಪತಿ ಬಿಜಿ ಮೂಲಿಮನಿ ಮಾತನಾಡಿ, ಬಸವ ಸಂದೇಶ ಶಾಲೆಯು ಗ್ರಾಮೀಣ ಭಾಗದಲ್ಲಿ ಕಡಿಮೆ ಖರ್ಚಿನಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಬ್ರಹ್ಮ ವಿದ್ಯಾಶ್ರಮ ಸಿದ್ಧಾರೂಢ ಮಠದ ಶಂಕರಾನಂದ ಸ್ವಾಮೀಜಿ, ಗುರು ಸಿದ್ದೇಶ್ವರ ಸಂಸ್ಥಾನ ಚಿಕ್ಕಮಠ ಹಳ್ಳಿಖೇಡನ ಪಂಡಿತಾರಾಧ್ಯ ಶಿವಾಚಾರ್ಯರು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಶಾಲೆಯ ಅಧ್ಯಕ್ಷ ಹಣಮಂತಪ್ಪ ಸಿ ಹುಲೆಪ್ಪನೋರ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ವಿಭಿನ್ನ ಸಾಂಸ್ಕೃತಿಕ ಕಾರ್ಯಕ್ರಮಗಳು ಪಾಲಕರ, ಸಭಿಕರ ಮನ ಸೆಳೆದವು. ಪ್ರಮುಖರಾದ ಮಡಿವಾಳಪ್ಪ ಮಂಗಲಗಿ, ಸಂಗೀತಾ, ಕಿಶೋರ ಕುಲಕರ್ಣಿ, ಪ್ರಭಾಕರ ಪಾಟೀಲ, ರವಿ ಸ್ವಾಮಿ, ಲೋಕೇಶ ಪಾಟೀಲ, ಶಿವರಾಜ ಮಾಸುಲ್ದಾರ್, ಓಂ ಪ್ರಕಾಶ ಭರಶೆಟ್ಟಿ, ಶಿರೋಮಣಿ ಆಚಾರ್ಯ, ದೇವಿಂದ್ರಕುಮಾರ ಗುತ್ತೇದಾರ್, ಸುಭಾಷ ಕೆನಾಡೆ, ಮುಖ್ಯ ಶಿಕ್ಷಕಿ ತಂಗೆಮ್ಮಾ ಎಸ್. ಮಚಕೂರಿ ಇದ್ದರು.

## ಮಹಿಳೆಯರ ಸಬಲೀಕರಣವೇ ಸಮಾಜದ ಪ್ರಗತಿಯ ಮೂಲ: ಸಚಿವ ಈಶ್ವರ ಖಂಡ್ರೆ

**ಮಲ್ಲಮ್ಮ ನುಡಿ ವಾರ್ತೆ ಬೀದರ**



ಮಹಿಳೆಯರ ಸಬಲೀಕರಣವೇ ಸಮಾಜದ ಪ್ರಗತಿಯ ಮೂಲವಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಹೇಳಿದರು.

ಅವರು ರವಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೀದರ ಸಹಯೋಗದಲ್ಲಿ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಆಯೋಜಿಸಲಾದ ಜಿಲ್ಲಾ ಮಟ್ಟದ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತೊಟ್ಟಿಲು ತೂಗುವ ಕೈ ದೇಶವನ್ನೂ ಆಳಬಲ್ಲದು ಎಂಬ ಮಾತಿನಂತೆ ಮಹಿಳೆಯರು ಇಂದು ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಉಕ್ಕಿನ ಮಹಿಳೆ ಎಂದು ಖ್ಯಾತಿ ಪಡೆದ ಮಾಜಿ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರ ದಿಟ್ಟ ಆಡಳಿತ ದೇಶದ ಇತಿಹಾಸದಲ್ಲಿ ಮಹತ್ವದ ಅಧ್ಯಾಯವಾಗಿದೆ ಎಂದರು.

ಕ್ರೀಡಾ ಕ್ಷೇತ್ರದಲ್ಲಿ ಪಿ.ಟಿ.ಉಷಾ, ಸೈನಾ ನೆಹ್ವಾಲ್ ಸೇರಿದಂತೆ ಅನೇಕ ಮಹಿಳಾ ಕ್ರೀಡಾಪಟುಗಳು ದೇಶಕ್ಕೆ ಕೀರ್ತಿ ತಂದುಕೊಟ್ಟಿದ್ದಾರೆ. ಅಂತರಿಕ್ಷ ಕ್ಷೇತ್ರದಲ್ಲಿ ಕಲ್ಪನಾ ಚಾವ್ಲಾ ಮತ್ತು ಸುನೀತಾ ವಿಲಿಯಮ್ಸ್ ಅವರು ಭಾರತದ ಹೆಸರನ್ನು ವಿಶ್ವದ ಮಟ್ಟದಲ್ಲಿ ಎತ್ತಿಹಿಡಿದಿದ್ದಾರೆ ಎಂದು ಸಚಿವರು ಉಲ್ಲೇಖಿಸಿದರು.

ಕರ್ನಾಟಕ ಕಾಂಗ್ರೆಸ್ ಸರ್ಕಾರ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದು, ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ಕುಟುಂಬದ ಯಜಮಾನಿ ಮಹಿಳೆಗೆ ತಿಂಗಳಿಗೆ ರೂ. 2000 ಆರ್ಥಿಕ ನೆರವು ನೀಡಲಾಗುತ್ತಿದೆ. ಶಕ್ತಿ ಯೋಜನೆಯಡಿ ರಾಜ್ಯದ ಕೋಟ್ಯಂತರ ಮಹಿಳೆಯರು ಉಚಿತವಾಗಿ ಬಸ್ ಪ್ರಯಾಣದ ಸೌಲಭ್ಯ ಪಡೆಯುತ್ತಿದ್ದಾರೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಪೌರಾಡಳಿತ ಹಾಗೂ ಹಜ್ ಸಚಿವರಾದ ರಹಿಂ ಖಾನ್, ಅಧಿಕಾರಿಗಳು ಸೇರಿದಂತೆ ಜಿಲ್ಲೆಯ ಅನೇಕ ಮಹಿಳೆಯರು ಉಪಸ್ಥಿತರಿದ್ದರು.

## ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

### ಅಧಿಕಾರಿಗಳು ಜನರ ಕಷ್ಟಗಳಿಗೆ ಸ್ಪಂದಿಸುವಂತಾಗಬೇಕು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರದ ಯೋಜನೆಗಳು ಮತ್ತು ಸೇವೆಗಳು ಜನರಿಗೆ ತಲುಪಿಸುವ ಹೊಣೆಗಾರಿಕೆ ಅಧಿಕಾರಿಗಳ ಮೇಲಿದೆ. ಜನರ ತೆರಿಗೆ ಹಣದಿಂದ ಸಂಬಳ ಪಡೆಯುವ ಅಧಿಕಾರಿಗಳು ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ ಅವರ ಕಷ್ಟಗಳನ್ನು ಪರಿಹರಿಸುವುದು ತಮ್ಮ ಕರ್ತವ್ಯವೆಂದು ಅರಿತು ಕಾರ್ಯನಿರ್ವಹಿಸಬೇಕು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಹಲವಾರು ಕಡೆಗಳಲ್ಲಿ ಅಧಿಕಾರಿಗಳು ಜನರ ಸಮಸ್ಯೆಗಳ ಕಡೆ ಗಮನ ಹರಿಸದೆ ನಿರ್ಲಕ್ಷ್ಯ ತೋರಿಸುತ್ತಿರುವುದು ಕಂಡುಬರುತ್ತಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಬಡವರು, ರೈತರು ಮತ್ತು ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಕಚೇರಿಗಳ ಸುತ್ತಲು ಸುತ್ತಾಡಬೇಕಾದ ಪರಿಸ್ಥಿತಿ ಉಂಟಾಗಿದೆ. ಸಣ್ಣಸಣ್ಣ ಕೆಲಸಗಳಿಗೂ ಜನರು ದಿನಗಟ್ಟಲೆ ಕಚೇರಿಗಳಲ್ಲಿ ಕಾಯಬೇಕಾಗುವುದು ಸಾಮಾನ್ಯವಾಗಿದೆ. ಕೆಲವೊಮ್ಮೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸರ್ಕಾರದ ಯೋಜನೆಗಳ ಲಾಭವೂ ಜನರಿಗೆ ಸರಿಯಾಗಿ ತಲುಪುವುದಿಲ್ಲ.

ಸರ್ಕಾರವು ಜನಪರ ಆಡಳಿತ ನೀಡಬೇಕಾದರೆ ಅಧಿಕಾರಿಗಳು ಜನರ ಜೊತೆ ಸಹಾನುಭೂತಿ ಮತ್ತು ಹೊಣೆಗಾರಿಕೆಯಿಂದ ನಡೆದುಕೊಳ್ಳಬೇಕು. ಕಚೇರಿಗಳಲ್ಲಿ ಜನರನ್ನು ಗೌರವದಿಂದ ನಡೆಸಿಕೊಳ್ಳುವುದು, ಅವರ ಅರ್ಜಿಗಳನ್ನು ಸಮಯಕ್ಕೆ ಸರಿಯಾಗಿ ಪರಿಶೀಲಿಸುವುದು ಮತ್ತು ಸಮಸ್ಯೆಗಳಿಗೆ ಶೀಘ್ರ ಪರಿಹಾರ ನೀಡುವುದು ಅತ್ಯಂತ ಅಗತ್ಯವಾಗಿದೆ. ಅಧಿಕಾರಿಗಳು ಕಚೇರಿಗಳಲ್ಲಿ ಕುಳಿತುಕೊಳ್ಳುವುದಷ್ಟೇ ಅಲ್ಲದೆ ಗ್ರಾಮಗಳಿಗೆ ಭೇಟಿ ನೀಡಿ ಜನರ ಸಮಸ್ಯೆಗಳನ್ನು ನೇರವಾಗಿ ತಿಳಿದುಕೊಳ್ಳಬೇಕು. ಇದರಿಂದ ಜನರ ನಂಬಿಕೆ ಹೆಚ್ಚುತ್ತದೆ ಮತ್ತು ಸರ್ಕಾರದ ಮೇಲೆ ವಿಶ್ವಾಸವೂ ಬಲವಾಗುತ್ತದೆ. ಜನಸೇವೆಯೇ ಅಧಿಕಾರಿಗಳ ಮುಖ್ಯ ಧ್ಯೇಯವಾಗಬೇಕು.

ಹೀಗಾಗಿ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಅರಿತು ಜನರ ಕಷ್ಟಗಳಿಗೆ ಸ್ಪಂದಿಸುವ ಮನೋಭಾವ ಬೆಳೆಸಿಕೊಳ್ಳುವುದು ಅವಶ್ಯಕವಾಗಿದೆ. ಜನರ ಸಮಸ್ಯೆಗಳನ್ನು ತಕ್ಷಣ ಪರಿಹರಿಸುವ ವ್ಯವಸ್ಥೆ ಬಲಪಡಿಸಿದಾಗ ಮಾತ್ರ ನಿಜವಾದ ಜನಪರ ಆಡಳಿತ ಸಾಧ್ಯವಾಗುತ್ತದೆ.

## ಶರಣಬಸವೇಶ್ವರ ಸ್ವಾಮಿಯ ಮಹಾ ರಥೋತ್ಸವ



**ಮಲ್ಲಮ್ಮ ನುಡಿ ವಾರ್ತೆ ಕುರುಗೋಡು**

. ಇಲ್ಲಿಗೆ ಸಮೀಪದ ಹೆಚ್. ವೀರಾಪುರ ಗ್ರಾಮದಲ್ಲಿ ಶರಣಬಸವೇಶ್ವರ ಸ್ವಾಮಿಯ ಮಹಾ ರಥೋತ್ಸವದ ಸೊಬಗನ್ನು ಕಣ್ತುಂಬಿಕೊಳ್ಳಲು ರವಿವಾರ ಸಂಜೆ ಜನ ಸಮೂಹ ಸೇರಿತ್ತು. ಸಂಜೆಯ ಬಿಸಿಲಿನ ತಾಪದ ನಡುವೆಯೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ರಥೋತ್ಸವದ ಮೆರಗು ಇಮ್ಮಡಿಗೊಳಿಸಿದರು. ಸಂಜೆ 6.05ಕ್ಕೆ ಪ್ರಾರಂಭಗೊಂಡ ರಥೋತ್ಸವ 7.00 ಗಂಟೆಗೆ ಮುಕ್ತಾಯಗೊಂಡಿತು.

ಮಹಾ ರಥೋತ್ಸವಕ್ಕೆ ಸಾಕ್ಷಿಯಾದ ಸುಮಾರು 20 ಸಾವಿರಕ್ಕೂ ಅಧಿಕ ಭಕ್ತರು ಶರಣಬಸವೇಶ್ವರ ಸ್ವಾಮಿಗೆ ಮೊಳಗಿಸಿದ ಜಯಘೋಷಗಳು ಮುಗಿಲುಮುಟ್ಟಿದವು.


ದೇವಸ್ಥಾನದಲ್ಲಿ ರಥೋತ್ಸವದ ಅಂಗವಾಗಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆ ಧಾರ್ಮಿಕ ವಿಧಿವಿಧಾನಗಳು ನೆರವೇರಿದವು. ಬೆಳಗಿನಜಾವ 5 ಗಂಟೆಯಿಂದಲೇ ದೇವರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಸುತ್ತಮುತ್ತಲಿನ ಗ್ರಾಮಗಳಿಂದ ಬಂದಿದ್ದ ಸಾವಿರಾರು ಭಕ್ತರು ಬೆಳಿಗ್ಗೆಯಿಂದ ದೇವಸ್ಥಾನಕ್ಕೆ ಭೇಟಿನೀಡಿ ಸಾಲಿನಲ್ಲಿ ನಿಂತು ಶರಣ ಬಸವೇಶ್ವರ ಸ್ವಾಮಿ ದರ್ಶನಪಡೆದು, ದಾಸೋಹದಲ್ಲಿ ಪ್ರಸಾದವನ್ನು ಸ್ವೀಕಾರ ಮಾಡಿದರು. ಭಕ್ತರು ದೇವಸ್ಥಾನದ ಆವರಣದಲ್ಲಿ ಸೂರ್ಯೋದಯಾದಿ ಮುನ್ನ ದೀಡ್ ನಮಸ್ಕಾರ ಹಾಕಿ ಹರಕೆ ತೀರಿಸಿ ಭಕ್ತರು ಸ್ವಾಮಿಯ ದರ್ಶನ ಪಡೆದು ಧನ್ಯತಾಭಾವ ಮೆರೆದರು. ಕೆಲವು ಭಕ್ತರು ಬೃಹತ್ ಗಾತ್ರದ ಹೂವಿನ ಮಾಲೆಗಳನ್ನು ಮೆರವಣಿಗೆಯಲ್ಲಿ ತಂದು ರಥಕ್ಕೆ ಅರ್ಪಿಸಿ ಭಕ್ತಿ ಮೆರೆದರು. ವಿವಿಧ ಬಣ್ಣದ ಹೂಗಳು ಮತ್ತು ಅಲಂಕಾರಿಕ ವಸ್ತುಗಳು ಮತ್ತು ಗೊಂಬೆಗಳಿಂದ ಅಲಂಕೃತಗೊಂಡಿದ್ದ ರಥವನ್ನು ಶರಣಬಸವೇಶ್ವರ ದೇವಸ್ಥಾನದಿಂದ ಎದುರುಬಸವಣ್ಣ ದೇವಸ್ಥಾನದ ವರೆಗೆ ಎಳೆದೊಯ್ದ ಭಕ್ತರು ಪುನಃ ಸ್ವಸ್ಥಳಕ್ಕೆ ಎಳೆದು ತಂದರು. ರಥ ಸಾಗಿದ ದಾ-ರಿಯುದ್ದಕ್ಕೂ ಭಕ್ತರ ಹರ್ಷೋದ್ಗಾರ, ಶಿಳ್ಳೆ, ಕೇಕೆ ಮುಗಿಲುಮುಟ್ಟಿತ್ತು. ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಅಗಣಿತ ಭಕ್ತರು ಉತ್ತತ್ತಿ, ಹೂ, ಹಣ್ಣು, ಎಸೆದು ಕೃತಾರ್ಥರಾದರು. ಅಕ್ಕಪಕ್ಕದ ಹಾವಿನಹಾಳು, ಚನ್ನಪಟ್ಟಣ, ಎಮ್ಮಿಗನೂರು, ಮುಷ್ಟಗಟ್ಟೆ, ಚಿಟಗಿನಹಾಳು, ಸೋಮಲಾಪುರ, ಕುರುಗೋಡು, ಗೆಣಕಿಹಾಳು, ಕ್ಯಾದಿಗೆಹಾಳು ಮುಂತಾದ ಅಕ್ಕ ಪಕ್ಕದ ಗ್ರಾಮಗಳಿಂದ ಬಂದಿದ್ದ ಭಕ್ತರು ರಥ ಬೀದಿಯ ಅಕ್ಕಪಕ್ಕದ ಕಟ್ಟಡಗಳ ಮೇಲೆ ನಿಂತು ರಥದ ಸಮೀಪ ದರ್ಶನ ಪಡೆದರು. ರಥದ ಕಳಸ ನೋಡಲು ಬಂದಿದ್ದ ಹೊಸದಾಗಿ ಮದುವೆಯಾದ ದಂಪತಿಗಳು ಕೈ-ಕೈ ಹಿಡಿದು ಜಾತ್ರೆಯಲ್ಲಿ ಸುತ್ತಾಟ ನಡೆಸುತ್ತಿದ್ದ ಹಾಗೂ ಮಕ್ಕಳು, ಮಹಿಳೆಯರು ಆಟಿಕೆ ಸಾಮಾನು, ಬಳೆ ಖರೀದಿಸುವ ದೃಶ್ಯ ಕಂಡುಬಂತು.

ಸಂಜೆ 9.00 ಗಂಟೆಗೆ 50ನೇ ವರ್ಷದ ಶರಣಬಸವೇಶ್ವರ ಪುರಾಣ

## ಶರಣನ ರಥೋತ್ಸವದಲ್ಲಿ ಭಕ್ತರ ಜೈಕಾರ

### ದಾಸೋಹ ಮೂರ್ತಿಯ ಸಂಭ್ರಮದ ರಥೋತ್ಸವ

**ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ**



ಪಟ್ಟಣದ ಆರಾಧ್ಯ ದೈವ ಮಹಾ ದಾಸೋಹಿ ಶರಣ ಬಸವೇಶ್ವರ ರಥೋತ್ಸವ ರವಿವಾರ ಸಾಯಂಕಾಲ 6-30ಕ್ಕೆ ಸಾವಿರಾರು ಭಕ್ತ ಸಮುಹದ ಮಧ್ಯೆ ಅದ್ದೂರಿಯಾಗಿ ಜರುಗಿತು.

ದಾಸೋಹ ಮೂರ್ತಿಯ ಜಾತ್ರಾ ಮಹೋತ್ಸವ ನಿಮಿತ್ಯ ನಡೆದ ರಥೋತ್ಸವ ಸಂಭ್ರಮದಲ್ಲಿ ಪಟ್ಟಣವು ಸೇರಿದಂತೆ ವಲಯದ ಹಲವು ಗ್ರಾಮಗಳ ಸಾವಿರಾರು ಭಕ್ತರು ಭಾಗವಹಿಸಿ ರಥೋತ್ಸವದ ದಿವ್ಯ ವೈಭವವನ್ನು ಕಣ್ತುಂಬಿಕೊಂಡರು. ಬೆಳಿಗ್ಗೆಯಿಂದಲೆ ರಾಜಶೇಖರಯ್ಯ ಹಿರೇಮಠ ಹಾಗೂ ಅರ್ಚಕ ವಿನಾಯಕ ಗಣಾಚಾರಿ ನೇತೃತ್ವದಲ್ಲಿ ವಿಶೇಷ ಪೂಜಾ ವಿಧಿ ವಿಧಾನಗಳು ನೆರವೇರಿದವು. ನಾನಾ ವಿಧದ ಪುಷ್ಪಲಂಕಾರದೊಂದಿಗೆ ಸಿಂಗಾರಗೊಂಡ ರಥದ ಉತ್ಸವವು, ತೇರಿಗೆ ಕಳಸಾರೋಹಣವಾಗುತ್ತಿದ್ದಂತೆ ಹಿರೇಮಠದ ಪೀಠಾಧಿಪತಿ ಚನ್ನಬಸವ ಶಿವಾಚಾರ್ಯರು ಉತ್ಸವಕ್ಕೆ ಚಾಲನೆ ನೀಡಿದರು. ದಾಸೋಹ ಮೂರ್ತಿ ಶರಣಬಸವೇಶ್ವರ ಮಾಹಾ ರಾಜಕೀ ಜೈ ಎಂದು ಜೈಕಾರ ಮೊಳಗುತ್ತಾ, ತೇರಿಗೆ ಉತ್ತತ್ತಿ, ಬಾಳೆಹಣ್ಣು ಹಾರಿಸಿ ಸಂಭ್ರಮಿಸಿದ ಭಕ್ತ ಸಮೂಹ ರಥೋತ್ಸವದ ನಂತರ ತೇರಿಗೆ ತೆಂಗು ಒಡೆದು ನಂತರ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪುನಿತ ಭಾವ ಮೆರೆದರು.

ಇದೇ ಸಂದರ್ಭದಲ್ಲಿ ಪುರಾಣ ಪ್ರವಚನಕಾರರಾದ ವೇ. ಮೂ ನಾಗಯ್ಯ ಶಾಸ್ತ್ರಿಗಳು ಹಿರೇಮಠ ವಡಗೇರಿಯವರಿಂದ 21 ದಿನಗಳ ಪರ್ಯಂತ ನಡೆದುಕೊಂಡು ಬಂದ ಶರಣನ ಪುರಾಣ ಸಂಪನ್ನದೊಂದಿಗೆ, ಪುರಾಣ ನಿರಂತರತೆಗೆ ಸಾಂಕೇತಿಕ ಪುನಃರಾರಂಭಗೊಂಡಿತು. ಖ್ಯಾತ ಹಿಂದೂಸ್ಥಾನಿ ಗಾಯಕರಾದ ಬಸವರಾಜ್ ಭಂಟನೂರ ಹಾಗೂ ಯಮನೇಶ ಯಾಳಗಿ ಸಂಗೀತ ಸೇವೆ ನೀಡಿದರು. ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿದ ಸಾವಿರಾರು ಭಕ್ತಸಮುಹದಲ್ಲಿ ಹಿರಿಯರು ಬೆಂಡು ಬತಾಸು ಪಳೀರು ಪರಾಳ ಖರೀದಿಸಿದರೆ, ಮಕ್ಕಳು ಉಯ್ಯಾಲೆ, ಪಲ್ಲಂಗದ ಜಿಗಿತದಾಟದ ಉಲ್ಲಾಸದೊಂದಿಗೆ ಸಿಹಿ ತಿಂಡಿ, ಆಟಿಕೆ ಸಾಮಾನು ಖರೀದಿಸಿ ಸಂಭ್ರಮಿಸಿದರು.

## ವಡಗೇರಾ ಪಟ್ಟಣದ ನೂರಾರು ಭಕ್ತರು ಶ್ರೀಶೈಲಕ್ಕೆ ಪಾದಯಾತ್ರೆ



**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ಭೂ ಕೈಲಾಸ ಸುಕ್ಷೇತ್ರ ಶ್ರೀಶೈಲದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಜಾತ್ರಾ ಮಹೋತ್ಸವ ನಿಮಿತ್ಯ ವಡಗೇರಾ ಪಟ್ಟಣದ ನೂರಾರು ಪುರುಷ ಮತ್ತು ಮಹಿಳಾ ಭಕ್ತಾದಿಗಳು ರೈತ ಸಂಘದ ತಾಲೂಕು ಅಧ್ಯಕ್ಷ ಮಲ್ಲಣ್ಣ ನೀಲಳ್ಳಿ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ 15ನೇ ವರ್ಷದ ಶ್ರೀಶೈಲ ಪಾದಯಾತ್ರೆ ಅಂಗವಾಗಿ ಪಟ್ಟಣದ ಶ್ರೀ ಅಂಬಾ ಮಹೇಶ್ವರಿ ಹಾಗೂ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಭಾನುವಾರದಂದು ಬೆಳಗ್ಗೆ ವಿಶೇಷ ಪೂಜೆ ಸಲ್ಲಿಸಿ ಪಾದಯಾತ್ರಿಗಳನ್ನು ಬಿಳ್ಕೊಡಲಾಯಿತು. ಶ್ರೀಶೈಲ ಪಾದಯಾತ್ರಿಗಳಿಗೆ ಪ್ರಸಾದ ವ್ಯವಸ್ಥೆಯನ್ನು ಪಟ್ಟಣದ ಯುವ ಮುಖಂಡ ರೆಡ್ಡಿ ಯಮನೂರು ಕಲ್ಪಿಸಿದ್ದರು. ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಮಲ್ಲಣ್ಣ ಇಟಗಿ, ಕರವೇ ಮುಖಂಡ ಶರಣು ಇಟಗಿ, ಸಂಗು ಗೌಡ ಮಾಲಿ ಪಾಟೀಲ್, ರಿಷಿಕೇಶ್ ಕುಲಕರ್ಣಿ, ಸಿದ್ಲಿಂಗಪ್ಪ ಪಿಡ್ಡೆ ಗೌಡ, ದೇವು ಬುಸೇನಿ, ಸೈಯ್ಯದ್ ಮರಡಿ, ಭೀಮಶಪ್ಪ ಕೋಮಾರ, ಅಬ್ದುಲ್ ಚಿಗನೂರ, ಗಂಗಾಧರ್ ವಿಶ್ವಕರ್ಮ, ಶಿವು ಗೋನಾಲ್, ಯಲ್ಲಪ್ಪ ಶಿರವಾಳ, ದೇವು ಜಡಿ, ಶರಣು, ಹಾಗೂ ಇನ್ನಿತರರು ಇದ್ದರು.

## ಎನ್. ಎಸ್. ಎಸ್. ಉದ್ಘಾಟನಾ ಸಮಾರಂಭ.



**ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ**

ಎಲ್ಲಾ ವಿದ್ಯಾರ್ಥಿನಿಯರು ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವದರ ಮೂಲಕ ತಮ್ಮ ಬದುಕಿನಲ್ಲಿ ಬದಲಾವಣೆ ತರಬೇಕು ಎನ್‌ಎಸ್‌ಎಸ್. ಕೇವಲ ಹೆಸರಿಗೆ ಮಾತ್ರ ಮಾಡದೆ ಸ್ವಯಂಸೇವಕೀಯರು ಮಾನವೀಯ ಗುಣಗಳನ್ನು ಅಳವಡಿಸಿಕೊಳ್ಳಬೇಕು, ಶರಣರು ಓಡಾಡಿದ ಪುಣ್ಯದ ನೆಲ ಇದೆ ಹಾಗಾಗಿ ಅವರ ಕನಿಷ್ಠ ಒಂದು ವಚನವಾದರೂ ಓದಿಕೊಂಡಿದ್ದರೆ ಸಾಕು ಜೀವನ ಸಾರ್ಥಕವಾಗುತ್ತದೆ ಎಂದು ಚಿಟಗುಪಾ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಚಿತ್ರಶೇಖರ್ ಚಿರಳ್ಳಿ ಹೇಳಿದರು. ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನ ಶಿಕ್ಷಣ ಸಂಸ್ಥೆಯ ಅಡಿಯಲ್ಲಿರುವ ಅಕ್ಕಮಹಾದೇವಿ ಮಹಿಳಾ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ದಲ್ಲಿ ಎನ್. ಎಸ್. ಎಸ್. ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಆಡಳಿತ ಅಧಿಕಾರಿಗಳಾದ ಡಾ. ಮಲ್ಲಿಕಾರ್ಜುನ್ ಲಕಶೆಟ್ಟಿ ಮಾತನಾಡಿ ಶ್ರೀ ಬಸವೇಶ್ವರ ದೇವಸ್ಥಾನ ಶಿಕ್ಷಣ ಸಂಸ್ಥೆ ಎನ್ ಎಸ್ ಎಸ್ ಲಾಂಛನ ಏಳು ಬಣ್ಣಗಳಿಂದ ಕೂಡಿದ್ದು ಒಂದೊಂದು ಬಣ್ಣವೂ ಒಂದೊಂದು ಸಂಕೇತವನ್ನು ನೀಡುತ್ತದೆ ಎಂದರು. ಗೌರವ ಉಪಸ್ಥಿತಿ ಕಾಲೇಜಿನ ಪ್ರಾಚಾರ್ಯರಾದ ಮಾಯ ಮುರಾಳೆ ವಹಿಸಿ ಕೊಂಡು ಮಾತನಾಡಿ ಎನ್‌ಎಸ್‌ಎಸ್. ಅಂದರೆ ಬರೀ ಶಿಬಿರದಲ್ಲಿ ಪಾಲ್ಗೊಳ್ಳುವುದಲ್ಲ ಸಮಾಜ ಜೊತೆ ಬೆರಿದುಕೊಂಡು ಸಮಾಜದಲ್ಲಿರುವ ಆಗುಹೋಗುಗಳ ಬಗ್ಗೆ ಚಿಂತನೆಯನ್ನು ಮಾಡುತ್ತ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ಹೇಳಿದರು. ಎನ್‌ಎಸ್‌ಎಸ್.'ಎ' ಘಟಕದ ಕಾರ್ಯಕ್ರಮ ಅಧಿಕಾರಿಯಾದ ದಶರಥ. ಟಿ. ಹಳ್ಳಿಖೇಡೆ ಸ್ವಾಗತಿಸಿದರು. ಎನ್‌ಎಸ್‌ಎಸ್." 'ಬಿ' ಘಟಕದ ಅಧಿಕಾರಿಯಾದ ಡಾ. ಭುವನೇಶ್ವರಿ ಶ್ರೀವಾಸ್ತವ ವಂದಿಸಿದರು, ಪೂಜಾ ಗಂಗು ನಿರೂಪಿಸಿದರು. ಬಿ ಎ ಸೆಮಿನ ವಿದ್ಯಾರ್ಥಿನಿಯರಾದ ರಾಣಿ ಮತ್ತು ಸಂಗಡಿಗರು ಎನ್‌ಎಸ್‌ಎಸ್. ಗೀತೆ ಹಾಡಿದರು. ಕಾಲೇಜಿನ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತಿರಿದ್ದರು.

## ಅಂತಾರಾಷ್ಟ್ರೀಯ ಮಹಿಳಾದಿನಾಚರಣೆ



**ಮಲ್ಲಮ್ಮ ನುಡಿ ವಾರ್ತೆ ಕಮಲನಗರ**

ಪಟ್ಟಣದಲ್ಲಿ ರವಿವಾರ ಆನಂದ ಕಂಪ್ಯೂಟರ್ ಸೆಂಟರ್‌ನಲ್ಲಿ ಅಂತಾರಾಷ್ಟ್ರೀಯ ಮಹಿಳಾದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಚಾಲಕಿ ಜಯಶ್ರೀ ಅನಿಲ್ ಬೆಲ್ಲೆ ಮಾತನಾಡಿ ಸಾವಿತ್ರಿಫುಲೇ ರವರ ಮುಖ್ಯ ಗುರಿ ಮಹಿಳೆಯರಿಗೆ ಶಿಕ್ಷಣ ನೀಡಲಾಗಿತ್ತು ಅವರು ಭಾರತೀಯ ಸಮಾಜ ಸುಧಾರಕಿ ಮತ್ತು ಶಿಕ್ಷಣ ತಜ್ಞರಾಗಿದ್ದು ಅಂದಿನ ಸಮಾಜದಲ್ಲಿ ಅನೇಕ ಸಮಸ್ಯೆಗಳ ನಡುವೆಯೂ ಧೈರ್ಯದಿಂದ ಅಕ್ಷರ ಕ್ರಾಂತಿ ಆರಂಭಿಸಿದ ಕೀರ್ತಿ ಇವರದ್ದು ಎಂದು ಹೇಳಿದರು. ಈ ಸಂದರ್ಭದಲ್ಲಿ ಪ್ರವೀಣ್ ಕಾಣೆಕರ್ ಮತ್ತು ಕಾವೇರಿ ಹುಲ್ಲಸುರೆ ಇವರು ಮಾತನಾಡಿ ಮಹಿಳಾ ಸಾಧಕಿಯರನ್ನು ಸ್ಮರಿಸಿದರು ಕಾರ್ಯಕ್ರಮ ದಲ್ಲಿ ಜ್ಯೋತಿ ಕಳಸೆ , ಲಕ್ಷ್ಮಿ ಸೋನಾಳೆ , ಅಕ್ಷಯ್ ಸೋಮಾರೆ ಮತ್ತು

## 29 ನೇ ವರ್ಷದ ಪುರಾಣ ಮಹಾಮಂಗಲೋತ್ಸವ



**ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ**

ತಾಲೂಕಿನ ಹುಲೇಗುಡ್ಡ ಗ್ರಾಮದಲ್ಲಿ ಕಲಬುರ್ಗಿ ಶ್ರೀ ಶರಣಬಸವೇಶ್ವರ ಪುರಾಣ ಕಾರ್ಯಕ್ರಮ ಬಹು ವಿಜೃಂಭಣೆಯಿಂದ ಜರುಗಿತು. ಶರಣಬಸವೇಶ್ವರ ಜಾತ್ರೆ ಅಂಗವಾಗಿ ಕುದರಿಮೋತಿಯ ಮೈಸೂರ ಮಠದ ವಿಜಯಮಹಾಂತ ಸ್ವಾಮೀಜಿ, ಚಳಗೇರಿಯ ವೀರಸಂಗಮೇಶ್ವರ ಸ್ವಾಮೀಜಿ, ಯಲಬುರ್ಗಾದ ಬಸವಲಿಂಗೇಶ್ವರ ಸ್ವಾಮೀಜಿ, ಮಂಗಳೂರಿನ ಸಿದ್ದಲಿಂಗ ಸ್ವಾಮೀಜಿ, ಕುಕನೂರಿನ ಮಹಾದೇವ ಸ್ವಾಮೀಜಿ ಅವರು ಶ್ರೀ ಶರಣಬಸವೇಶ್ವರ 29 ನೇ ವರ್ಷದ ಪುರಾಣ ಮಹಾ ಮಂಗಲೋತ್ಸವದಲ್ಲಿ ಭಾಗವಹಿಸಿದ್ದರು. .ಪ್ರವಚನಕಾರ ಮಕ್ಕಳಿಯ ಶಿವಾನಂದ ಸ್ವಾಮೀಜಿ, ಸಂಗೀತ ಬಳಗದ ಕಲಾವಿದರಾದ ಶಂಕ್ರಯ್ಯ ಚಿತ್ತರಗಿಮಠ, ನವಲಿಹಳ್ಳಿಯ ಬಸವರಾಜ ಕನಕಗಿರಿ, ಹುಲೇಗುಡ್ಡದ ಮೃತ್ಯುಂಜಯ ಸಂಗೀತ ಸೇವೆ ನೀಡಿದರು ,ಶ್ರೀ ಶರಣಬಸವೇಶ್ವರ ಮೂರ್ತಿಗೆ ಪೂಜಾ ವಿಧಾನಗಳು ಜರುಗಿದ ಬಳಿಕ ಸಾಮೂಹಿಕ ವಿವಾಹಗಳು ಜರುಗಿದವು. ಈ ವೇಳೆ ಮುಖಂಡರಾದ ಬಾಳಪ್ಪ ಬಂಡ್ಲಿ, ಹನುಮಗೌಡ ಮಾಲಿ ಪಾಟೀಲ, ದುರಗನಗೌಡ ಪೊ.ಪಾಟೀಲ್, ಯಂಕಪ್ಪ ದುಗ್ಗಲರ್, ರಮೇಶ ಛತ್ರದ, ಸಮನಗಮೇಶ ಪೂಜಾರ, ಕುದುರೇಲ್ಲಪ್ಪ ಮಾಲಿಗೌಡ್ರ, ರಮೇಶ ಗೇದಗೇರಿ, ಲಕ್ಷ್ಮಣ ಚಿಂಚಲದ, ಕುದುರೆಲ್ಲಪ್ಪ ಹಳ್ಳಿ, ಶರಣಪ್ಪ ಮಾಲಿಗೌಡ್ರ, ಹನುಮಪ್ಪ ಕರೆಕುರಿ, ಭೀಮಣ್ಣ ಮುರಡಿ, ಹನುಮಪ್ಪ ಮಕ್ಕಳ್ಳಿ ಹಾಗು ಗ್ರಾಮದ ಗುರು ಹಿರಿಯರು ಭಾಗವಹಿಸಿದ್ದರು. ಸುತ್ತಮುತ್ತಲಿನ ಭಕ್ತರು ಹಾಗು ಕಳಸ ಕನ್ನಡಿಯೊಂದಿಗೆ ಸಕಲವಾದ್ಯಗಳೊಂದಿಗೆ ಶ್ರೀ ಶರಣಬಸವೇಶ್ವರ ಜಾತ್ರೆ ಜರುಗಿ ನಂತರ ಅನ್ನ ಪ್ರಸಾದ ಜರುಗಿತು.

## ಕಣ್ಣಿನ ತಪಾಸಣೆ ಉಚಿತ ಶಿಬಿರ




**ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ** ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಯಲಬುರ್ಗಾದಲ್ಲಿ ಎಮ್.ಎಮ್. ಜೋಶಿ ನೇತ್ರ ವಿಜ್ಞಾನ ಸಂಸ್ಥೆ ಕೊಪ್ಪಳ ಇವರ ಸಹಕಾರದಲ್ಲಿ ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬರ ಯಶಸ್ವಿಯಾಗಿ ಜರುಗಿತು. ಈ ವೇಳೆ ರಾಜ್ಯ ಬಿಜೆಪಿ ಪಕ್ಷದ ಕಾರ್ಯಕಾರಣಿ ಸದಸ್ಯ ಬಸವರಾಜ ಗೌರಾ, ತಾಲೂಕು ಕಾಂಗ್ರೆಸ್ ಪಕ್ಷದ ಕಾರ್ಯಾಧ್ಯಕ್ಷ ಡಾ.ಶಿವನಗೌಡ ದಾನರಡ್ಡಿ, ಪ್ರಾ.ಕೃಷಿ ಪತ್ತಿನ ಸಹಕಾರ ಸಂಘದ ಅದ್ಯಕ್ಷ ದೊಡ್ಡಯ್ಯ ಗುರುವಿನ, ಉಪಾದ್ಯಕ್ಷೆ ರೇಣುಕಾ ಉಪ್ಪಾರ, ಮುಖ್ಯ ಕಾರ್ಯನಿರ್ವಾಹಣಾಧಿಧಿಕಾರಿ ಬಸವರಾಜ ಪೋ.ಪಾಟೀಲ್, ಮುಖಂಡರಾದ ಶಂಭು ಜೋಳದ, ಅಂದಯ್ಯ ಕಳ್ಳಿಮಠ, ಅಮರೇಶ ಹುಬ್ಬಳ್ಳಿ, ವಸಂತಕುಮಾರ ಭಾವಿಮನಿ, ಕಳಕಪ್ಪ ತಳವಾರ, ರಮೇಶ ಪಟ್ಟೇದ, ಚಂದ್ರು ಬನ್ನಪ್ಪಗೌಡ್ರ, ಅನ್ನದಾನೇಶ ನೆರೇಗಲ್ಲ, ಶಂಕ್ರಪ್ಪ ಚಲವಾದಿ, ಬಳಿಗೇರಿಮಠ, ಸೇರಿದಂತೆ ಸದಸ್ಯರು, ಸಿಬ್ಬಂದಿಗಳು ಇದ್ದರು. ಈ ವೇಳೆ 120 ಜನರು ತಪಾಸಣೆ ಶಿಬಿರದಲ್ಲಿ ಭಾಗವಹಿಸಿದ್ದರು ಇದರಲ್ಲಿ 35 ಜನರಿಗೆ ಶಸ್ತ್ರ ಚಿಕಿತ್ಸೆ ಮಾಡಲಾಗುವದು ಎಂದು ಸಂಘಟಿಕರು ತಿಳಿಸಿದರು.

**IN THE COURT OF THE ADDL CIVIL JUDGE & J.M.F.C AT BASAVAKALYAN CRl. Misc. No. 26/2026**

**Petitioner**

: Sugandhabai and others

// Versus//

**Respondent**

The Tahasildar, Basavakalyan,

**Sub: Claim: Fore Issue Of Death Certificate.**

**Petition U/Sec. 13(3) Of Birth and Death Registration Act. 1969**

**PAPER PUBLICATION**

Whereas the above named petitioner has field petition under section 13(3) of Birth & Death Registration Act 1969 for issue the direction to respondent to give death certificate of husband Of petitioner by name " Kamalakar s/o Gurunath Panchal who was died on 10/ 05/ 2016 in his house at village Gadlegaon (b), Tq, Basavakalyan, Dist. Bidar.

Hence this paper publication is issued to all concerned person to File necessary Objection If any on 09/04/ 2026 at 11.00. A.M.

Given under my hand seal of of the court on this 3/3/2026

**// By order Of the Court //**
**Chief Ministerial Officer**
**Civil Judge & JMFC Basavakalyan.**



ಕಲಬುರಗಿ: ಶ್ರೀ ಶರಣ ಬಸವೇಶ್ವರ 204ನೇ ಜಾತ್ರಾ ಮಹೋತ್ಸವ ನಿಮಿತ್ತ ಅಲ್ಲಮಪ್ರಭು ಪಾಟೀಲ ಅಭಿಮಾನಿ ಬಳಗದ ವತಿಯಿಂದ ಅನ್ನದಾಸೋಹ ಮಾಡಲಾಯಿತು. ಈ ಸಂದರ್ಭದಲ್ಲಿ ಡಾ.ಅಭಿಜೀತ್ ಪಾಟೀಲ, ಅಭಿಷೇಕ ಪಾಟೀಲ, ಶರಣು ಪಾಟೀಲ್, ಮಹಾಂತೇಶ ಪಾಟೀಲ, ಮಂಜುನಾಥ ಬಿರಾದಾರ, ಗೌಡಪ್ಪ ಪಾಟೀಲ, ಗುರುರಾಜ ಕಲಶೇಟ್ಟಿ, ಶಂಕರ ಸೇರಿದಂತೆ ಅಭಿಮಾನಿ ಬಳಗದವರು ಇದ್ದರು.

# ಕುಡಿಯುವ ನೀರು ಪೂರೈಕೆಗೆ ತೊಂದರೆಯಿಲ್ಲ: ನಾರಾ ಭರತ್ ರೆಡ್ಡಿ




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನೀರು ಸಂಗ್ರಹಾಗಾರ ಕೆರೆಗಳಲ್ಲಿ ಅಗತ್ಯಕ್ಕೆ ಬೇಕಾಗುವಷ್ಟು ನೀರಿದ್ದು, ಬೇಸಿಗೆಯಲ್ಲಿ ಬಳ್ಳಾರಿ ನಗರಕ್ಕೆ ಕುಡಿಯುವ ನೀರಿನ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಆಗುವುದಿಲ್ಲ ಎಂದು ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ಶನಿವಾರ ಸಂಜೆ ನಗರದ ಹೊರ ವಲಯದಲ್ಲಿರುವ ಅಲ್ಲಿಪುರ ಕೆ-ರೆಗೆ ಭೇಟಿ ನೀಡಿ, ಪರಿಶೀಲಿಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ಕಾಲುವೆ ರಿಪೇರಿ, ಕ್ರಸ್ಟ್ ಗೇಟ್ ಅಳವಡಿಕೆ ಕಾಮಗಾರಿ ನಡೆಯುತ್ತಿದೆ, ಕುಡಿಯುವ ನೀರಿಗೆ ಬೇಕಾಗುವಷ್ಟು ಸಂಗ್ರಹ ಜಲಾಶಯದಲ್ಲಿ ಇದೆ, ನಮ್ಮ ಪಾಲಿನ 1.3 ಟಿಎಂಸಿ ನೀರನ್ನು ಮುಂದಿನ ತಿಂಗಳ ಒಳಗೆ ಪಡೆಯಲಾಗುವುದು ಎಂದರು.

ಅಲ್ಲಿಪುರ ಕೆರೆಯ ಬಾಂದು ಹಾಗೂ ಸುತ್ತಮುತ್ತ ಪ್ರದೇಶದ ಅಭಿವೃದ್ಧಿಗೆ ನಗರಾಭಿವೃದ್ಧಿ ಪ್ರಾಧಿಕಾರದ ಅನುದಾನಲ್ಲಿ ಕಾಮಗಾರಿ ಕೈಗೊಳ್ಳಲಾಗುವುದು ಎಂದ ಅವರು 1200 ಕೋಟಿ ರೂ.ಗಳ ನಿರಂತರ ಕುಡಿಯುವ ನೀರಿನ ಯೋಜನೆಯನ್ನು ಪ್ರತ್ಯೇಕವಾಗಿ ಮಾಡಲಾಗುತ್ತಿದ್ದು, ಕೊಳಗಲ್ ಬಳಿ ಬೃಹತ್ ಕೆರೆ ನಿರ್ಮಿಸಲಾಗುವುದು ಎಂದರು.

ಒಳ ಚರಂಡಿಗೆ 380 ಕೋಟಿ: ಬಳ್ಳಾರಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಳ ಚರಂಡಿ ನಿರ್ಮಾಣಕ್ಕಾಗಿ 380 ಕೋಟಿ ರೂ.ಗಳನ್ನು ನೀಡುವಂತೆ ಸಿಎಂ ಅವರಿಗೆ ಮನವಿ ಮಾಡಲಾಗಿತ್ತು, ಬಜೆಟ್ಟಿನಲ್ಲಿ ಘೋಷಣೆ ಆಗಿಲ್ಲ, ಆದರೆ ಹೆಚ್ಚುವರಿ ಯೋಜನೆಯಲ್ಲಿ ಸೇರಿಸಲು ಮಂಜೂರಾತಿ ಸಿಕ್ಕಿದೆ ಎಂದು ಹೇಳಿದರು.

ಅಕ್ರಮ ಯೂರಿಯಾ ಮಾರಾಟದ ಬಗ್ಗೆ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಶಾಸಕ ನಾರಾ ಭರತ್ ರೆಡ್ಡಿ, ಅಕ್ರಮ ಯುರಿಯಾ ಮಾತ್ರವಲ್ಲದೇ ಅಕ್ರಮ ಜೋಳ ಸಂಗ್ರಹ ಮತ್ತು ಮಾರಾಟ ಜಾಲದ ಬಗ್ಗೆಯೂ ಗಂಭೀರ ತನಿಖೆ ನಡೆಸಲಾಗುವುದು ಎಂದರು.

ಈ ಸಂದರ್ಭ ಮೇಯರ್ ಪಿ.ಗಾದೆಪ್ಪ, ಮಾಜಿ ಮೇಯರ್ ಎಂ.ರಾಜೇಶ್ವರಿ, ಪಾಲಿಕೆಯ ಸದಸ್ಯರಾದ ಕುಬೇರಾ, ಪೇರಂ ವಿವೇಕ್, ಪಾಲಿಕೆಯ ಆಯುಕ್ತ ಮಂಜುನಾಥ, ಕಾಂಗ್ರೆಸ್ ಮುಖಂಡರಾದ ಎಂ.ಸುಬ್ಬರಾಯುಡು, ಪರಶುರಾಮುಡು, ಹೊನ್ನೂರಪ್ಪ ಶೇಖರ್, ಪಾಲಿಕೆಯ ಅಧಿಕಾರಿಗಳು ಹಾಜರಿದ್ದರು.

# ಲೋಕಾಯುಕ್ತ : ಅನುಪಯುಕ್ತ ವಸ್ತುಗಳ ಬಹಿರಂಗ ಹರಾಜು

• **ಮಲ್ಲಮ್ಮ ನುಡಿ ವಾರ್ತೆ ಕಾರವಾರ**

ಕಾರವಾರ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರ ಕಚೇರಿಯಲ್ಲಿನ ಹಳೆಯ ದಿನಪತ್ರಿಕೆಗಳನ್ನು ಮಾರ್ಚ್ 24 ರಂದು ಮಧ್ಯಾಹ್ನ 12 ಗಂಟೆಗೆ ಬಹಿರಂಗ ಹರಾಜು ಮಾಡಲಿದ್ದು, ಹರಾಜಿನಲ್ಲಿ ಭಾಗವಹಿಸುವವರು ಮಾರ್ಚ್ 20 ರೊಳಗೆ ಸ್ಪರ್ದಾತ್ಮ ದರಪಟ್ಟಿಯನ್ನು ಸಲ್ಲಿಸಬೇಕು.

ಹಾಗೂ ಕಚೇರಿಯಲ್ಲಿನ ಅನುಪಯುಕ್ತ ಪಿಠೋಪಕರಣಗಳು, ಇಲಾಖಾ ವಾಹನಗಳ ಅನುಪಯುಕ್ತ ಬಿಡಿಭಾಗಗಳು ಮತ್ತು ಟೈರ್, ಟ್ಯೂಬ್‌ಗಳನ್ನು ಏಪ್ರಿಲ್ 8 ರಂದು ಮಧ್ಯಾಹ್ನ 12 ಗಂಟೆಗೆ ಕಾರವಾರ ಲೋಕಾಯುಕ್ತ ಕಚೇರಿ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುತ್ತಿದ್ದು, ಆಸಕ್ತರು ಈ ಹರಾಜಿನಲ್ಲಿ ಭಾಗವಹಿಸಬಹುದು.

ಈ ಬಹಿರಂಗ ಹರಾಜಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಹೊಂದಿದ್ದು, ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಕಚೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ: 08382-295293, 222250, 222022, 220198 ನ್ನು ಸಂಪರ್ಕಿಸುವಂತೆ ಪೊಲೀಸ್ ಆಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಡಗರದಿಂದ ಜರುಗಿದ ಲಕ್ಷ ದೀಪೋತ್ಸವ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ತಾಲೂಕಿನ ವಿಠಲಪುರ ಹತ್ತಿರ ಇರುವ ಲಿಂಗೋಳ ಶ್ರೀ ಮಾತೆ ಮಾಣಿಕೇಶ್ವರಿ ಆಶ್ರಮದಲ್ಲಿ ಮಾತೆ ಮಾಣಿಕೇಶ್ವರಿ ಅಮ್ಮನವರ 6ನೇ ಪುಣ್ಯತಿಥಿ ಅಂಗವಾಗಿ ಜರುಗಿದ ಲಕ್ಷ ದೀಪೋತ್ಸವ ಕಾರ್ಯಕ್ರಮ ಶ್ರೀ ಸದ್ಗುರು ಶಾಂತಿ ಬಾಬಾ ಇವರ ದಿವ್ಯ ಸಾನಿಧ್ಯದಲ್ಲಿ ಲಕ್ಷ ದೀಪೋತ್ಸವ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸಡಗರ ಸಂಭ್ರಮದಿಂದ ಜರುಗಿದವು.

# ಕೈಗಾರಿಕಾ ಉದ್ಯೋಗ ಸೃಷ್ಟಿ ವಿಫಲ: ಶಿರಗೋಳ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ರಾಜ್ಯ ಬಜೆಟ್ ಮೂಲಕ ಯಾದಗಿರಿಗೆ ದೊರಕಬೇಕಾದ ಕೈಗಾರಿಕಾ ಹಾಗೂ ಉದ್ಯೋಗ ಸೃಷ್ಟಿ ಯೋಜನೆಗಳು ದೊರಕಿಲ್ಲ ಎಂದು ಯುವ ಉದ್ಯಮಿ ಮಲ್ಲಿಕಾರ್ಜುನ ಶಿರಗೋಳ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಯಾದಗಿರಿ ಜಿಲ್ಲೆಯ ಯುವ ಪಿಳಿಗೆ ವಲಸೆ ಹೋಗುತ್ತಿರುವುದು ಅತ್ಯಂತ ಕಳವಳದ ಸಂಗತಿಯಾಗಿದೆ. ಇಲ್ಲಿನ ಗುಳೆ ಹೋಗುವುದನ್ನು ತಪ್ಪಿಸಲು ಸರ್ಕಾರ ವಿಶೇಷ ಗಮನ ನೀಡಿ ಬಜೆಟ್ ನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬಹುದಿತ್ತು. ಆದರೆ ಯಾದಗಿರಿಗೆ ಮತ್ತೆ ನಿರಾಸೆಯ ಬಜೆಟ್ ನೀಡಿದ್ದಾರೆ ಎಂದಿದ್ದಾರೆ. ನಿರೀಕ್ಷೆಯಂತೆ ಯಾದಗಿರಿ ನಗರಕ್ಕೆ ಒಳಚರಂಡಿ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹೊರತುಪಡಿಸಿದರೆ ಹತ್ತಿ ಸಂಶೋಧನಾ ಕೇಂದ್ರ ಘೋಷಣೆ ಕುರಿತು ಹೆಚ್ಚು ನಿರೀಕ್ಷೆ ಇತ್ತು ಎಂದು ತಿಳಿಸಿದ್ದಾರೆ.

# ಶ್ರೀಶೈಲ ಪಾದಯಿತ್ರಿಗಳಿಗೆ ದಾಸೋಹ ಸೇವೆ



• **ಮಲ್ಕನ ನುಡಿ ವಾರ್ತೆ ಮಸ್ಕಿ**

ಅಭಿನಂದನ್ ಶಿಕ್ಷಣ ಹಾಗೂ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಶ್ರೀಶೈಲ ಪಾದಯಾತ್ರೆ ಗಳಿಗೆ ಅಭಿನಂದನ್ ಸಂಸ್ಥೆಯಿಂದ ದಾಸೋಹ ಸೇವೆಯನ್ನು ಕೈಗೊಳ್ಳಲಾಯಿತು.

# ಗ್ರಾಮ ಪಂಚಾಯಿತಿ ವತಿಯಿಂದ ಸ್ವಚ್ಛತೆ ಕಾರ್ಯ ಚುರುಕು




• **ಮಲ್ಲಮ್ಮ ನುಡಿ ವಾರ್ತೆ ಕುರುಗೋಡು**

ಸಮೀಪದ ಕೋರ್ಲಗುಂದಿ ಗ್ರಾಮದಲ್ಲಿ ಪ್ರತಿವರ್ಷ ಪದ್ದತಿಯಂತೆ ಈ ವರ್ಷವು ಪವಾಡಪುರುಷ ಶ್ರೀ ಅಡಿವಿತಾತ ಹಾಗು ಶ್ರೀ ಹಾಲುಬಸವೇಶ್ವರಸ್ವಾಮಿಯ ಜೋಡು ರಥೋತ್ಸವ ರವಿವಾರ ಜರುಗುವ ನಿಮಿತ್ತ ಕೋರ್ಲಗುಂದಿ ಗ್ರಾಮಪಂಚಾಯಿತಿ ಆಡಳಿತಾಧಿಕಾರಿ ಗಾದಿಲಿಂಗಪ್ಪ ಅವರ ಮಾರ್ಗದರ್ಶನದ ಮೇರೆಗೆ ಗ್ರಾಮದ ಎಲ್ಲಾ ವಾರ್ಡುಗಳಲ್ಲಿ ಸ್ವಚ್ಚತೆ ಕಾರ್ಯ, ಕಸವಿಲೇವಾರಿ, ಸೇರಿದಂತೆ ಇತರೆ ಕಾರ್ಯಗಳು ಜೋರಾಗಿ ನಡೆದಿವೆ.

ಈ ಕುರಿತು ಕೋರ್ಲಗುಂದಿ ಗ್ರಾಮಪಂಚಾಯಿತಿ ಪಿಡಿಓ ಪ್ರಕಾಶ ಅವರು ಸ್ಥಳಕ್ಕೆ ಬೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ರಾಮದಲ್ಲಿ ವರ್ಷಕ್ಕೊಮ್ಮೆ ಜರುಗುವ ಶ್ರೀ ಅಡವಿತಾತ ಹಾಗು ಶ್ರೀ ಹಾಲುಬಸವೇಶ್ವರಸ್ವಾಮಿಯ ಜೋಡು ರಥೋತ್ಸವವು ಜರುಗುವ ನಿಮಿತ್ತ, ಗ್ರಾಮದ ಎಲ್ಲಾ ವಾರ್ಡುಗಳಲ್ಲಿನ ಚರಂಡಿಗಳಲ್ಲಿ ತುಂಬಿರುವ ಹೂಳು ಸ್ವಚ್ಚತೆ, ರಸ್ತೆಯಲ್ಲಿನ ಕಸವಿಲೇವಾರಿ, ಜಾತ್ರೆಗೆ ಬಂದಂತಹ ಭಕ್ತಾಧಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ಬೀದಿಗಳಲ್ಲಿ ಬೀದಿ ದೀಪ ಅಳವಡಿಕೆ ಸೇರಿದಂತೆ ಇತರೆ ಮೂಲಭೂತ ಸೌಕರ್ಯಗಳನ್ನು ಭರದಿಂದ ಮಾಡಲಾಗಿದೆ ಎಂದು ನುಡಿದರು. ಮಾತ್ರವಲ್ಲದೆ ಊರಿನ ಜನರು ಸಹ ಸ್ವಚ್ಚತೆಗೆ ಕಡೆಗೆ ಹೆಚ್ಚು ಮಹತ್ವ ಕೊಡಬೇಕೆಂದು ಜನತೆಗೆ ಸಲಹೆ ನೀಡಿದರು. ಮತ್ತು ಆರೋಗ್ಯ ಇಲಾಖೆಯ ಆರೋಗ್ಯ ಸಹಾಯಕರಿಂದ ಚರಂಡಿಗಳಿಗೆ ಬ್ಲೀಚಿಂಗ್ ಪೌಡರ್, ಹಾಕಲಾಗಿದೆ ಎಂದು ತಿಳಿಸಿದರು.

ಒಟ್ಟಾರೆ ಗ್ರಾಮದಲ್ಲಿ ಶ್ರೀ ಹಾಲುಬಸವೇಶ್ವರ ಮತ್ತು ಶ್ರೀ ಅಡಿವಿತಾತನವರ ಜೋಡು ರಥೋತ್ಸವ ನಿಮಿತ್ತ ಗ್ರಾಮಪಂಚಾಯಿತಿ ವತಿಯಿಂದ ಸಕಲ ಸಿದ್ದತೆ ಮಾಡಲಾಗಿದೆ ಎಂದು ಗ್ರಾ ಪಂ

# ಎನ್.ಎಸ್.ಎಸ್ ಸಪ್ತಾಹ ಆಚರಣೆ




ಬಳ್ಳಾರಿ, ಜಿಲ್ಲೆಯ ಪ್ರತಿಷ್ಠಿತ ವೀರಶೈವ ವಿದ್ಯಾವರ್ಧಕ ಸಂಘದ ಅಧೀನದಲ್ಲಿರುವ ಹಾನಗಲ್ ಶ್ರೀ ಕುಮಾರೇಶ್ವರ ಪಾಲಿಟೆಕ್ನಿಕ್ ಕಾಲೇಜಿನ ವತಿಯಿಂದ ರಾಷ್ಟೀಯ ಸ್ವಯಂ ಸೇವಾ ಸಪ್ತಾಹವನ್ನು ಹರಗಿನಡೋಣಿಯ ಶ್ರೀ ಬುಗ್ಗ ಸಿದ್ದಲಿಂಗೇಶ್ವರ ಶಾಲೆಯಲ್ಲಿ ಉದ್ಘಾಟಿಸಲಾಯಿತು. ಯೋಜನೆಯನ್ನು ಸ್ವಚ್ಛ ಭಾರತ್ ಅಭಿಯಾನದ ಅಡಿಯಲ್ಲಿ ಹೆಚ್.ಎಸ್.ಕೆ. ಪಾಲಿಟೆಕ್ನಿಕ್ನಾ ಸಿಬ್ಬಂದಿ, ವಿಧ್ಯಾರ್ಥಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಶಾಲೆಯ ಶಿಕ್ಷಕಿಯಾರಾದ ಶ್ರೀಮತಿ ನಿರ್ಮಲಾ ಮತ್ತು ಸಹ ಶಿಕ್ಷಕಿಯರು ಹಾಗೂ ಊರಿನ ಗಣ್ಯ ವ್ಯಕ್ತಿಗಳು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು ಈ ಕಾರ್ಯಕ್ರಮದಲ್ಲಿ ಹಾಜರಿದ್ದ ಗಣ್ಯರು ತಮ್ಮ ಭಾಷಣದಲ್ಲಿ ಗಾಂಧೀಜಿಯವರ ತತ್ವ ಆದರ್ಶಗಳಾದ ಅಹಿಂಸೆ ಸಹನೆ ಮತ್ತು ಸತ್ಯದ ಬಗ್ಗೆ ವಿದ್ಯಾರ್ಥಿಗಳು ತಮ್ಮ ಜೀವನದ್ದುದ್ದಕ್ಕೂ ಅನುಕರಿಸಿ ಸ್ವಚ್ಚತೆಯ ಮಹತ್ವವನ್ನು ಮೈಗೂಡಿಸಿಕೊಳ್ಳಲು ಕರೆ ನೀಡಿದರು.

ಈ ಕಾರ್ಯಕ್ರಮದ ನಿರೂಪಣೆಯನ್ನು ಹೆಚ್.ಎಸ್.ಕೆ. ಪಾಲಿಟೆಕ್ನಿಕ್ನೆ ಎನ್.ಎಸ್.ಎಸ್ ಅಧಿಕಾರಿ ರಾಜೇಶ್ ಕುಮಾರ್ ಜೆ.ಎಂ ಅವರು ಎನ್.ಎಸ್.ಎಸ್ ಮತ್ತು ವಂದನಾರ್ಪಣೆಯನ್ನು ಸಮನ್ವಯ ಅಧಿಕಾರಿ ಕೆ.ಪಂಪನಗೌಡರು ನಡೆಸಿಕೊಟ್ಟರು

# ಪಂಚಾಂಗ ಗಣಿತ ಇದ್ದಂತೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**



ಪಂಚಾಂಗ ಪೂರ್ಣವಾಗಿ ಗಣಿತ ಇದ್ದಂತೆ, ವೈಜ್ಞಾನಿಕವಾಗಿ ಲೆಕ್ಕಹಾಕಿ ಹೇಳುತ್ತಾರೆ ಎಂದು ಬೆಂಗಳೂರಿನ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಆಡಳಿತಾಧಿಕಾರಿ ಸಿ.ನಾಗರಾಜ್ ಅವರು ತಿಳಿಸಿದರು.

ಬಳ್ಳಾರಿ ಕಲ್ಚರಲ್ ಅಕ್ಟಿವಿಟೀಸ್ ಅಸೋಸಿಯೇಷನ್ ವತಿಯಿಂದ ಸದ್ಗುರು ಕಾಲೋನಿಯ ಸದಾನಂದ ಆಶ್ರಮದಲ್ಲಿ ಏರ್ಪಡಿಸಿದ್ದ ಮಠಂ ಗುರುಪ್ರಸಾದ್ ಅವರು ಬರೆದಿರುವ ಶ್ರೀ ಉಮಾ ಮಹೇಶ್ವರ ಪಂಚಾಂಗ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪಂಚಾಂಗ ವರ್ಷದ ಆಗುಹೋಗುಗಳನ್ನು ಹೇಳುತ್ತದೆ. ಗ್ರಹಗಳ ಚಲನಲನ 'ಗಳ ಮೇಲೆ ಹೇಳುತ್ತಾರೆ ಎಂದರು.

ಜೋತಿಷ್ಯ ರತ್ನ ಪಂಡಿತ್ ಮಠಂ ಗುರುಪ್ರಸಾದ್ ಅವರು ಮಾತನಾಡಿ, ಮಾನವ ಜಾತಿ ಹುಟ್ಟಿದ ಮೇಲೆ ಮೊದಲು ಬಂದಿದ್ದೆ ಜೋತಿಷ್ಯ ಶಾಸ್ತ್ರ, ವೇದಾಂತ ಶಾಸ್ತ್ರದಲ್ಲಿ ಜೋತಿಷ್ಯ ಶಾಸ್ತ್ರ ಪ್ರಮುಖವಾಗಿದೆ. 18 ಮಂದಿ ಮಹರ್ಷಿಗಳು ಜೋತಿಷ್ಯ ಶಾಸ್ತ್ರಕ್ಕೆ ಮೂಲ ಪುರುಷರು ಎಂದರು.

ಪಂಚಾಂಗಗಳು ತಿಥಿ, ವಾರ, ನಕ್ಷತ್ರ, ಯೋಗ, ಕರಣವನ್ನು ಒಳಗೊಂಡಿರುತ್ತದೆ. ನವ ನಾಯಕರನ್ನು ಪಂಚಾಂಗ ಹೊಂದಿರುತ್ತದೆ. ಯುಗಾದಿ ದಿನ ಗುರು ವಾರ, ಆ ದಿನದ ವಾರಾದಿದಿನವೇ ರಾಜನಾಗಿ ರುತ್ತಾನೆ, ಈ ವರ್ಷದ ಗುರು ರಾಜನಾಗಿರುತ್ತಾರೆ ಎಂದರು.

ಮಹಾನಗರ ಪಾಲಿಕೆ ಮಹಾಪೌರ ಪಿ.ಗಾದೆಪ್ಪ ಮಾತನಾಡಿ, ಕಳೆದ 8 ವರ್ಷಗಳಿಂದ

ಕನಕ ದುರ್ಗಮ್ಮ ದೇವಸ್ಥಾನದ ಆವರಣದಲ್ಲಿ ಪಂಚಾಂಗ ಪಠಣೆ ಮಾಡಿಕೊಂಡು ಬರುತ್ತಿದ್ದೇವೆ ಎಂದರು.

ಕಾರ್ಯಕ್ರಮ ಸಾನಿಧ್ಯವನ್ನು ಗುರುಚರಣಾನಂದಗಿರಿ ಮಾತಾಜೀ( ಕೊಕ್ಕರಚೇಡು ಶರಣಮ್ಮ ಅವ್ವನವರು) ಸಾನಿಧ್ಯವಹಿಸಿದ್ದರು. ಸದ್ಗುರು ಸದಾನಂದ ಆಶ್ರಮ ಟ್ರಸ್ಟ್ ಅಧ್ಯಕ್ಷರು, ಹಿರಿಯ ನ್ಯಾಯವಾದಿ ವಿವೇಕಾನಂದ ಸ್ವಾಮಿ, ಬಳ್ಳಾರಿ ಕಲ್ಚರಲ್ ಅಕ್ಟಿವಿಟೀಸ್ ಅಸೋಸಿಯೇಷನ್

ಅಧ್ಯಕ್ಷನಾಗಿ ರೆಡ್ಡಿ ಯಶವಂತರಾಜ್, ಗೌರವಾಧ್ಯಕ್ಷರು ಶೀಲಾಬ್ರಹ್ಮಯ್ಯ, ಕಿಷ್ಕಿಂದ ವಿಶ್ವವಿದ್ಯಾಲಯದ ಚಾನ್ಸಲರ್ ಡಾ.ಯಶವಂತ್ ಭೂಪಾಲ್, ಹ್ಯಾಲೀಸ್ ಬ್ಲೂಸ್ಟೀಲ್ ಮಾಲೀಕರಾದ ಕೆ.ಎಂ ಶಿವಮೂರ್ತಿ ಸೇರಿದಂತೆ ಇತರರು ಇದ್ದರು.

# ಸೀ ಬರ್ಡ್ ಸಂತ್ರಸ್ಥರಿಗೆ ಹೆಚ್ಚುವರಿ ಪರಿಹಾರ ವಿತರಿಸಿದ ಕಾಗೇರಿ




• **ಮಲ್ಲಮ್ಮ ನುಡಿ ವಾರ್ತೆ ಕಾರವಾರ**

ಸೀಬರ್ಡ್ ನೌಕಾನಲೆ ಯೋಜನೆಗೆ ಭೂ ಸ್ವಾದೀನಪಡಿಸಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ 18 (1) ಅಡಿಯಲ್ಲಿನ 5 ಪ್ರಕರಣ ಮತ್ತು 28 ಬಿ ಅಡಿಯಲ್ಲಿನ 112 ಪ್ರಕರಣಗಳಿಗೆ ಒಟ್ಟು ರೂ.27.70 ಕೋಟಿಗಳ ಹೆಚ್ಚುವರಿ ಪರಿಹಾರವನ್ನು ಬಿಡುಗಡೆಗೊಳಿಸಿದ್ದು, ಇವುಗಳಲ್ಲಿ ಅಗತ್ಯ ದಾಖಲೆಗಳನ್ನು ಒದಗಿಸಿದ 35 ಪ್ರಕರಣಗಳಲ್ಲಿನ ಫಲಾನುಭವಿಗಳಿಗೆ ರೂ.6.87 ಕೋಟಿ ಪರಿಹಾರವನ್ನು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಶನಿವಾರ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿತರಿಸಿದರು.

ನಂತರ ಮಾತನಾಡಿದ ಅವರು ಸೀಬರ್ಡ್ ನೌಕಾನಲೆ ಯೋಜನೆಗೆ ಭೂ ಸ್ವಾದೀನಪಡಿಸಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಾಕಿ ಪರಿಹಾರದ ಮೊತ್ತವನ್ನು ಪಾವತಿಗೆ ಇರುವ ಸಮಸ್ಯೆಗಳ ಕುರಿತು ಕೇಂದ್ರ ರಕ್ಷಣಾ ಸಚಿವರಿಗೆ ಮನವಿಯನ್ನು ಸಲ್ಲಿಸಿದ್ದು, ಅದರಂತೆ ಇದಕ್ಕಾಗಿ ವಿಶೇಷ ಅಧಿಕಾರಿಯನ್ನು ಸಚಿವರು ನೇಮಕ ಮಾಡಿದ ನಂತರ ಪರಿಹರದ ಮೊತ್ತ ಬಿಡುಗಡೆ ಕಾರ್ಯ ಶೀಘ್ರಗೊಂಡಿದ್ದು, ಇದುವರೆಗೆ ರೂ.35 ಕೋಟಿ ಬಿಡುಗಡೆಗೊಂಡಿದೆ. ಬಾಕಿ ಉಳಿದಿರುವ 215 ಪ್ರಕರಣಗಳಿಗೆ ಬಿಡುಗಡೆಯಗಬೇಕಾದ ರೂ.28.82 ಕೋಟಿ ಮೊತ್ತ ಕೂಡಾ ತ್ವರಿತಗತಿಯಲ್ಲಿ ಬಿಡುಗಡೆಗೊಳ್ಳಲಿದೆ ಎಂದರು.

ಜಿಲ್ಲೆಯಲ್ಲಿ ಕೇಂದ್ರ ಸರ್ಕಾರದ ಕೆಲಸಗಳು ಉತ್ತಮವಾಗಿ ನಡೆ-ಯುತ್ತಿದ್ದು, ರಾಷ್ಟ್ರೀಯ ಹೆದ್ದಾರಿ 52ರ ಹೊಸಳ್ಳಿಯಿಂದ ಯಲ್ಲಾಪುರ ಹಾಗೂ ಮಾಸ್ತಿಕಟ್ಟೆಯಿಂದ ಬಾಳೆಗುಳಿ ವರೆಗಿನ ರಸ್ತೆ ಅಭಿವೃದ್ದಿಗೆ ರೂ.101 ಕೋಟಿ ಅನುದಾನ ಮಂಜೂರಾಗಿದೆ. ಕೊಂಕಣ ರೈಲ್ವೆಯಲ್ಲಿ ಬಾಕಿ ಇರುವ ಭೂ ಸ್ವಾಧೀನ ಪ್ರಕರಣಗಳ ಕುರಿತು ವಿಚಾರಣೆ ತ್ವರಿತಗತಿಯಲ್ಲಿ ನಡೆ-ಯುತಿದ್ದು, ಸಂತ್ರಸ್ಥರಿಗೆ ಶೀಘ್ರದಲ್ಲಿ ಪರಿಹಾರ ದೊರೆಯಲಿದೆ ಎಂದ ಅವರು, ಪ್ರಸ್ತುತ ಸೀಬರ್ಡ್ ಸಂತ್ರಸ್ಥರು ತಮಗೆ ದೊರೆತಿರುವ ಪರಿಹಾರದ ಮೊತ್ತವನ್ನು ಉತ್ತಮ ಕಾರ್ಯಗಳಿಗೆ ಬಳಸಿಕೊಳ್ಳುವಂತೆ ತಿಳಿಸಿದರು.

ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಮಾತನಾಡಿ, ಸೀಬರ್ಡ್ ಯೋಜನೆಗಾಗಿ ಒಟ್ಟು 2400 ಎಕ್ರೆ ಖಾಸಗಿ ಜಮೀನನ್ನು ಮತ್ತು 7000 ಎಕ್ರೆ ಅರಣ್ಯ ಜಮೀನನ್ನು ಸ್ವಾಧೀನಪಡಿಸಕೊಳ್ಳಲಾಗಿದ್ದು, ಸಂತ್ರಸ್ಥರಿಗೆ ಪರಿಹಾರ ಪಾವತಿ ಕುರಿತಂತೆ ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣ ಮತ್ತು ವಿಶೇಷ ಭೂ ಸ್ವಾಧೀನಾಧಿಕಾರಿ ಕಚೇರಿಯಲ್ಲಿ ದಾಖಲಾದ ಪ್ರಕರಣಗಳಿಗೆ ಹೆಚ್ಚುವರಿ ಪರಿಹಾರ ವಿತರಿಸಲಾಗುತ್ತಿದ್ದು, ಇದುವರೆಗೆ ಒಟ್ಟು 647.58 ಕೋಟಿ ಪರಿಹಾರ ಡಿಫೆನ್ಸ್ ಎಸ್ಟೇಟ್ ಆಫೀಸರ್ ಬೆಂಗಳೂರು ಅವರಿಂದ ಬಿಡುಗಡೆಯಾಗಿದೆ ಎಂದರು.

ಜಿಲ್ಲೆಯ ಸಂತ್ರಸ್ಥರಿಗೆ ಪರಿಹಾರದ ಮೊತ್ತವನ್ನು ಒದಗಿಸುವ ಕಾರ್ಯಗಳನ್ನು ಜಿಲ್ಲಾಡಳಿತ ಆದ್ಯತೆಯಲ್ಲಿ ಮಾಡುತ್ತಿದ್ದು, ಸಂತ್ರಸ್ಥರು ಸೂಕ್ತ ದಾಖಲೆಗಳನ್ನು ತ್ವರಿತವಾಗಿ ನೀಡಿದಲ್ಲಿ ಪರಿಹಾರದ ಮೊತ್ತವನ್ನು ಶೀಘ್ರದಲ್ಲಿ ವಿತರಿಸಲು ಸಾಧ್ಯವಾಗಲಿದೆ. ಪರಿಹಾರಪಡೆಯುವಲ್ಲಿ ವಿವಾದಗಳಿದ್ದಲ್ಲಿ ಸದ್ರಿ ಪ್ರಕರಣದ ಮೊತ್ತವನ್ನು ನ್ಯಾಯಾಲಯಕ್ಕೆ ಜಮೆ ಮಾಡಲಾಗುತ್ತಿದೆ ಎಂದ ಅವರು, ಕೊಂಕಣ ರೈಲ್ವೆ ಸಂತ್ರಸ್ಥರ ಭೂ ಸ್ವಾಧೀನ ಕುರಿತ ವಿಚಾರಣೆಯು ತ್ವರಿತಗತಿಯಲ್ಲಿ ನಡೆಯುತ್ತಿದ್ದು, ಜಿಲ್ಲಾಡಳಿತದ ವತಿಯಿಂದ ಶೀಘ್ರದಲ್ಲಿ ಪರಿಹಾರದ ಮೊತ್ತವನ್ನು ದೊರಕಿಸಲು ಪ್ರಯತ್ನಿಸಲಾಗುತ್ತಿದೆ ಎಂದರು.

ವಿಧಾನ ಪರಿಷತ್ ಶಾಸಕ ಗಣಪತಿ ಉಳ್ವೇಕರ, ಜಿ.ಪಂ. ಸಿಇಓ ಡಾ.ದಿಲೀಷ್ ಶಶಿ, ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಸಹಾಯಕ ಆಯುಕ್ತ ಶ್ರವಣ ಕುಮಾರ್, ತರಬೇತಿ ನಿರತ ಐ.ಎ.ಎಸ್. ಅಧಿಕಾರಿ ಝೂಪಿಶಾನ್ ಹಕ್ ಉಪಸ್ಥಿತರಿದ್ದರು.

ಭೂ ಸ್ವಾದೀನ ಸಂತ್ರಸ್ಥರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಆನ್ ಲೈನ್ ಮೂಲಕ ಪರಿಹಾರದ ಮೊತ್ತವನ್ನು ಜಮೆ ಮಾಡಲಾಯಿತು.

## 14 ರಂದು ಜಿಲ್ಲೆಗೆ ಸಿಎಂ ವೈದ್ಯಕೀಯ ಕಾಲೇಜ ಸ್ಥಾಪನೆಗೆ ಶಂಕುಸ್ಥಾಪನೆ

# ಕಾರ್ಯಕ್ರಮದ ಸ್ಥಳ ಪರಿಶೀಲಿಸಿದ ಸಚಿವ ತಿಮ್ಮಾಪೂರ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**



ಜಿಲ್ಲೆಯಲ್ಲಿ ನಿರ್ಮಾಣವಾಗಲಿರುವ ಸರಕಾರಿ ವೈದ್ಯಕೀಯ ಕಾಲೇಜಿನ ಶಂಕುಸ್ಥಾಪನೆ ಕಾರ್ಯಕ್ರಮದ ಹಿನ್ನಲೆಯಲ್ಲಿ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಕಾರ್ಯಕ್ರಮದ ಸ್ಥಳ ಪರಿಶೀಲನೆ ನಡೆಸಿದರು.

ಮುಖ್ಯಮಂತ್ರಿಗಳಿಂದ ನೆರವೇರಲಿರುವ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲು ಅಗತ್ಯ ಎಲ್ಲ ರೀತಿಯ ಸಿದ್ದತೆಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಾರ್ಯಕ್ರಮ ನಡೆಯುವ ಸ್ಥಳ, ವೇದಿಕೆ ನಿರ್ಮಾಣ, ವಾಹನ ನಿಲುಗಡೆ ವ್ಯವಸ್ಥೆ ಹಾಗೂ ಭದ್ರತಾ ವ್ಯವಸ್ಥೆಯ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು. ಕಾರ್ಯಕ್ರಮ ಸುಗಮವಾಗಿ ನಡೆಯಲು ವಿವಿಧ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಲು ಸೂಚಿಸಿದರು.

ಸ್ಥಳ ಪರಿಶೀಲಿಸಿದ ನಂತರ ಮಾತನಾಡಿದ ಸಚಿವರು, ಜಿಲ್ಲೆಯ ಬಹುದಿನಗಳ ಬೇಡಿಕೆಯಾದ ಸರಕಾರ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಶಂಕುಸ್ಥಾಪನೆ ನೆರವೇರಿಸಿ, ಈ ಭಾಗದ ಜನರ ಕನಸು ನನಸು ಮಾಡಲು ಮಾರ್ಚ 14 ರಂದು ಮುಖ್ಯಮಂತ್ರಿಗಳು ಜಿಲ್ಲೆಗೆ ಆಗಮಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಸರಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಹಿನ್ನಲೆಯಲ್ಲಿ ದಿ.ಎಚ್.ವಾಯ್.ಮೇಟಿ ಅವರು ಸಾಕಷ್ಟು ಪ್ರಯತ್ನ ಪಟ್ಟಿದ್ದಾರೆ. ಅವರ ಪ್ರಯತ್ನದ ಫಲವಾಗಿ ಇಂದು ವೈದ್ಯಕೀಯ ಕಾಲೇಜಿಗೆ ಶಂಕುಸ್ಥಾಪನೆ ನೆರವೇರಿಸುವ ಕಾಲ ಬಂದಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಿಯಂತರ ದುರ್ಗಾದಾಸ, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಶಂಕರಲಿಂಗ ಗೋಗಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ರೇಣುಕಾ ಎಂ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ತಹಶೀಲ್ದಾರ ವಾಸುದೇವ ಸ್ವಾಮಿ ಹಾಗೂ ಇತರರು ಇದ್ದರು.

# ಮಕ್ಕಳ ಶಿಕ್ಷಣದಲ್ಲಿ ಪಾಲಕರ ಪ್ರೋತ್ಸಾಹ ತುಂಬಾ ಅಗತ್ಯ: ಚನ್ನಾರೆಡ್ಡಿ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ನಗರದ ಎಸ್. ಡಿ. ಆಂಗ್ಲ ಮಾಧ್ಯಮ ಶಾಲೆಯಲ್ಲಿ ಆಯೋಜಿಸಿದ 6 ನೇ ವರ್ಷದ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಯಾದಗಿರಿ ಮತಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಚೆನ್ನಾರೆಡ್ಡಿ ಪಾಟೀಲ್ ತುನ್ನೂರು ಅವರು ಪ್ರತಿಯೊಬ್ಬ ಪಾಲಕ ಪೋಷಕರು ಮಕ್ಕಳ ಶೈಕ್ಷಣಿಕ ಕಾರ್ಯ ಚಟುವಟಿಕೆಯ ಜವಾಬ್ದಾರಿ ಹೊತ್ತುಕೊಂಡು ಮಕ್ಕಳಿಗೆ ಪ್ರೋತ್ಸಾಹಿಸುವುದು ತುಂಬಾ ಅವಶ್ಯಕತೆ ಇದೆ ಎಂದು ತಿಳಿಸಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿಕೊಂಡು ಮಾತನಾಡಿದ ಗುರ್ಮಿಟಿಕಲ್ ಖಾಸಾ ಮಠದ ಪರಮ ಪೂಜ್ಯ ಶ್ರೀ ಶಾಂತವೀರ ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು ದುರ್ಗಪ್ಪ ಪೂಜಾರಿ ಅವರು ವಯಸ್ಸಿನಲ್ಲಿ ಕಿರಿಯವರಾದರು ಸಾಧನೆಯಲ್ಲಿ ಹಿರಿಯದಾದ ಛಾಪನ್ನು ಮೂಡಿಸುತ್ತಿದ್ದಾರೆ.

ಇಂತಹ ಪ್ರತಿಭೆಗಳು ನಾಡಿನ ಯುವಕರಿಗೆ ಮತ್ತು ಮಕ್ಕಳಿಗೆ ಸ್ಪೂರ್ತಿದಾಯಕ ವ್ಯಕ್ತಿಗಳಾಗುತ್ತಿದ್ದಾರೆ. ಎಂದು ಆಶಿಸಿದರು. ಇದೆ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಶ್ರೀ ದುರ್ಗಪ್ಪ ಹೆಚ್. ಪೂಜಾರಿ ಅವರು ಪ್ರಸ್ತಾವಿಕ ಮಾತನಾಡಿದರು. ಕಾರ್ಯಕ್ರಮದಲ್ಲಿ ಅಹಿಂದ ಮುಖಂಡರಾದ ಶ್ರೀ ಹಣಮೆಗೌಡ ಬಿರನಕಲ್, ಬಿ. ಜೆ. ಪಿ. ಯ ಯುವ ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ಧರ ಸಾಹುಕಾರ, ಶ್ರೀ ಹರಿ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಶ್ರೀ ಸುಭಾಷ್ ಚಂದ್ರು ಮಾನೆಗಾರ್, ಜಿಲ್ಲಾ ಯುವ ಉದ್ಯಮಿ ಶ್ರೀ ಮಲ್ಲಿಕಾರ್ಜುನ್ ಶಿರಗೋಳ, ಶ್ರೀ ಸಿದ್ದು ಪಾಟೀಲ್, ಶ್ರೀ ಅಳ್ಳೆಪ್ಪ ಬಿ. ಪೂಜಾರಿ, ಶ್ರೀ ಪ್ರಶಾಂತ್ ಸುಂಗುಲಕರ್, ಹಾಜರಿದ್ದು ಇದೆ ಸಂದರ್ಭದಲ್ಲಿ 2026 ನೇ ಸಾಲಿನ " ಶಿಕ್ಷಣ ಶ್ರೀ " ರಾಜ್ಯ ಪ್ರಶಸ್ತಿಯನ್ನು ಶ್ರೀ ಲಕ್ಷ್ಮಣ ನಾಯಕ್ ಹಿರಮಣಿ ತಾಂಡಾ, ಶ್ರೀ ಖತಾಲ್ ಹುಸೇನ್ ಪ್ರಮುಖ ಅಗ್ನಿಶಾಮಕ ದಳ ಯಾದಗಿರಿ ಅವರಿಗೆ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಯುವ ಸಾಧಕರಿಗೆ ವಿಶೇಷ ಸನ್ಮಾನ ನೆರವೇರಿಸಲಾಯಿತು.

ನಂತರ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಮನರಂಜನೆಯ ನೃತ್ಯಗಳು ಪ್ರದರ್ಶನಗೊಂಡವು ಇದೆ ಸಂದರ್ಭದಲ್ಲಿ ಶ್ರೀ ಶೇಖ್ ನಜೀರ್, ಶ್ರೀ ಕೃಷ್ಣದಾಸನಕೇರಿ, ಶ್ರೀ ಸಿ.ಎ. ಅಜಿಸಾಬ್ ಸನ್ನದು, ಶ್ರೀ ಅಭಿಷೇಕ್ ಆರ್. ದಾಸನಕೇರಿ, ಶ್ರೀ ಮಹಮ್ಮದ್ ಫೈಜ್ ದರ್ಜಿ, ಮಹಾದೇವ ಶಿರಗೋಳ, ಮರೆಪ್ಪ ಗೌಡಿಗೇರಿ, ರಾಜು ಪೂಜಾರಿ, ಶಿವರಾಜ್ ಪೂಜಾರಿ, ಸುಜ್ಞಾನ ಪೂಜಾರಿ ಹಾಗೂ ಶಾಲಾ ಶಿಕ್ಷಕಿಯರು, ಪಾಲಕರು ಪೋಷಕರು ಹಾಜರಿದ್ದರು.

### ಶಾಲಾ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಶಿಕ್ಷಕ ಬಸವರಾಜ ಹಂಚಲಿ ಸಲಹೆ

# ಹೆತ್ತವರ ನಿರೀಕ್ಷೆಗಳನ್ನು ಹುಸಿಗೊಳಿಸಬೇಡಿ



> “ ಶಿಕ್ಷಣ ಸಂಸ್ಥೆಗಳು ವ್ಯಾಪಾರಿ ಕೇಂದ್ರಗಳಾಗದೆ ವಿದ್ಯಾ ದಾಸೋಹದ ಕೇಂದ್ರಗಳಾಗಬೇಕು ಮಕ್ಕಳಿಗೆ ಕೇವಲ ಶಿಕ್ಷಣ ಕೊಟ್ಟರೆ ಸಾಲದು ಒಳ್ಳೆಯ ಸಂಸ್ಕಾರಗಳೊಂದಿಗೆ ನಮ್ಮ ಶ್ರೇಷ್ಠ ಪರಂಪರೆ ಸಂಸ್ಕೃತಿಯನ್ನು ತಿಳಿಸಿಕೊಡುವ ಕಾರ್ಯವೂ ಆಗಬೇಕು
> **ಪೂಜ್ಯ ಅಟವಿ ಶಿವಲಿಂಗ ಮಹಾಸ್ವಾಮಿಗಳು ಬಣ್ಣದ ಮಠ ಶಿರಶಿ.**

• **ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ**

ನಿಮಗೆ ಒಳ್ಳೆಯ ಶಿಕ್ಷಣ ನೀಡಿ ನಿಮ್ಮ ಭವಿಷ್ಯ ಉಜ್ವಲಗೊಳಿಸಲು ಹೆತ್ತವರು ಹಗಲಿರಳು ಕಷ್ಟಪಡುತ್ತಾರೆ ಅವರ ನಿರೀಕ್ಷೆ ಹುಸಿಗೊಳಿಸಬೇಡಿ, ಕಠಿಣ ಪರಿಶ್ರಮದಿಂದ ಒಳ್ಳೆಯ ಸಾಧನೆ ಮಾಡುವಂಥವರಾಗಿ ಎಂದು ಮಡಿಕೇಶ್ವರ ಸರ್ಕಾರಿ ಪ್ರೌಢಶಾಲೆ ಸಹಶಿಕ್ಷಕ ಬಸವರಾಜ ಹಂಚಲಿ ಹೇಳಿದರು. ತಾಲೂಕಿನ ಬಿಳೇಭಾವಿ ಗ್ರಾಮದ ಶ್ರೀ ಭಾಗ್ಯವಂತಿ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಶನಿವಾರ ಮಾತನಾಡಿದರು. ಹೆತ್ತವರು ಮಕ್ಕಳನ್ನು ಹೀಯಾಳಿಸದೆ ಪ್ರೋತ್ಸಾಹಿಸುವ ಕಾರ್ಯ ಮಾಡಬೇಕು. ಮಕ್ಕಳಿಗೆ ತಂದೆ ತಾಯಿಗಳು ಮಾದರಿಯಾಗಬೇಕು ಅವರನ್ನು ಕೇವಲ ಅಂಕಗಳಿಕೆಗಾಗಿ ಸಿದ್ಧಪಡಿಸದೆ ಒಳ್ಳೆಯ ವ್ಯಕ್ತಿಯನ್ನಾಗಿ ನಿರ್ಮಾಣ ಮಾಡಲು ಪ್ರಯತ್ನಿಸಬೇಕು. ಈ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣದೊಂದಿಗೆ ಸಂಸ್ಕಾರಗಳನ್ನು ಕಲಿಸಿ ಕೊಡುವ ಕಾರ್ಯ ಆಗುತ್ತಿರುವುದು ಶ್ಲಾಘನೀಯ, ನಿಮ್ಮೆಲ್ಲರ ಸಹಕಾರ ಇವರಿಗೆ ಇರಲಿ ಎಂದರು. ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ, ನೇತ್ರ ತಜ್ಞ ಡಾ.ಪ್ರಭುಗೌಡ ಲಿಂಗದಳ್ಳಿ ಮಾತನಾಡಿ ಶಿಕ್ಷಣ ಸಮುದಾಯದ ಭವಿಷ್ಯವನ್ನು ನಿರ್ಣಯಿಸುತ್ತದೆ ಅದರ ಕುರಿತು ನಿರ್ಲಕ್ಷ ಬೇಡ, ಗುಣಮಟ್ಟದ ಶಿಕ್ಷಣದೊಂದಿಗೆ ಒಳ್ಳೆಯ ಸಂಸ್ಕಾರಗಳನ್ನೂ ಕಲಿಸಿಕೊಡುವ ಕಾರ್ಯ ಆಗಬೇಕಾಗಿದೆ. ಕೇವಲ ಐದು ವರ್ಷಗಳ ಅವಧಿಯಲ್ಲಿ ಈ ಸಂಸ್ಥೆ ಗಮನಾರ್ಹವಾದ ಸಾಧನೆ ಮಾಡಿದೆ ಇದರ ಆಡಳಿತ ಮಂಡಳಿ ಹಾಗೂ ಶಿಕ್ಷಕರಿಗೆ ಅಭಿನಂದಿಸುತ್ತೇನೆ ಎಂದರು.

ಜಿ.ಪಂ.ಮಾಜಿ ಸದಸ್ಯ ಬಸನಗೌಡ ವಣಕಿಹಾಳ, ಯುವ ಮುಖಂಡ ಸಂಗನಗೌಡ ಪಾಟೀಲ (ಸಾಸನೂರ) ಮಾತನಾಡಿದರು. ಸಮಾರಂಭದ ಸಾನಿಧ್ಯ ವಹಿಸಿದ್ದ ಸಾಸನೂರ ಗುರುಕುಲದ ಪೀಠಾಧಿಪತಿ ಪೂಜ್ಯ ಅಟವಿ ಶಿವಲಿಂಗ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಷ.ಬ್ರ. ಮಹಾಂತಲಿಂಗ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು. ಮಲ್ಲಣ್ಣ ಗು. ಅಸ್ಕಿ ಅಧ್ಯಕ್ಷತೆ ಹಾಗೂ ಸಂಸ್ಥೆಯ ಅಧ್ಯಕ್ಷ ಮಲ್ಲಣ್ಣ ಚಂ.ಪರಸನಳ್ಳಿ ನೇತೃತ್ವ ವಹಿಸಿದ್ದರು. ಜಿಪಂ ಮಾಜಿ ಸದಸ್ಯ ಎಚ್.ಸಿ. ಪೋಲಿಸ ಪಾಟೀಲ ಹಾಗೂ ಡಾ.ಬಿ.ಎಂ.ಅಳ್ಳಿಕೋಟಿ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ರೀಡೆಯಲ್ಲಿ ಉತ್ತಮ ಸಾಧನೆ ತೋರಿದ ಹಾಗೂ ನವೋದಯ, ಸೈನಿಕ ಶಾಲೆಗಳಿಗೆ ಆಯ್ಕೆಯಾದ 100 ಮಕ್ಕಳಿಗೆ ಗೌರವಿಸಲಾಯಿತು. ವೇದಿಕೆ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಿದ್ರಾಮಯ್ಯ ಮಠ ಸ್ವಾಗತಿಸಿದರು. ಶಿಕ್ಷಕ ಮಹೆಮೂದ ಬಾಗಲಕೋಟ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ಬಿ.ಟಿ.ವಜ್ಜಲ,

ಕಾರ್ಯದರ್ಶಿ ಸಿದ್ದನಗೌಡ ಪರಸನಳ್ಳಿ, ಗುರಣ್ಣಗೌಡ ಗುರಡ್ಡಿ, ಸಾಹೇಬಗೌಡ ರಾರಡ್ಡಿ, ಸಿಆರ್ ಸಿ. ರಾಜು ಮೂರುಮಾನ, ಮಲ್ಲನಗೌಡ ಮಾಳಿ, ಸಂಗಮೇಶ ದೇಸಾಯಿ, ಸಾಹೇಬಗೌಡ ವಠಾರ, ಮು. ಗು.ವಿಷ್ಣುನಾಯಕ, ಆಡಳಿತ ಮಂಡಳಿ ಸದಸ್ಯರು, ಶಿಕ್ಷಕ ವರ್ಗ, ಸಿಬ್ಬಂದಿ, ಪಾಲಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ತಾಲೂಕಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ತಾಲೂಕಿನ ಇಂಚೂರ್ , ಲಾಧಾ , ಕುಂಟೆಗಾವ್, ಮೊರಂಬಿ ಗ್ರಾಮದವರೆಗೆ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ಸುಮಾರು 9 ಕಿಮೀ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಇಂಚೂರ್ ಗ್ರಾಮದಲ್ಲಿ ಭೂಮಿ ಪೂಜೆ ಸಂಸದರಾದ ಸಾಗರ ಖಂಡ್ರೆ ನೆರವೇರಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ್ ಖಂಡ್ರೆ ಅವರ ಸುಮಾರು 9 ಕೋಟಿ ಅನುದಾನದಡಿ ಗ್ರಾಮ ರಸ್ತೆ ಯನ್ನು ಎಂ.ಡಿ.ಆರ್ ರಸ್ತೆಯಾಗಿ ಪರಿವರ್ತಿಸಿ, ಏಕಮಾರ್ಗ ರಸ್ತೆಯನ್ನು ಎರಡು ಮಾರ್ಗದ ರಸ್ತೆಯಾಗಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಚಾಲನೆ ನೀಡಿದರು.

ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಸುಗಮ ಸಂಚಾರ ಸೌಲಭ್ಯ ದೊರೆಯಲಿದ್ದು, ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ದಿನನಿತ್ಯದ ಸಂಚಾರಕ್ಕೆ ಇದು ಬಹಳ ಉಪಯುಕ್ತವಾಗಲಿದೆ.

ಕ್ಷೇತ್ರದ ಅಭಿವೃದ್ಧಿಗೆ ಸದಾ ಸಹಕಾರ ನೀಡುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಪಟ್ಟಣ ಪಂಚಾಯಿತಿಗೆ 2.27 ಲಕ್ಷ ರೂ.ಉಳಿತಾಯ ಬಜೆಟ್



• **ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ**

ತಾಲ್ಲೂಕಿನ ಶಿರೂರ ಪಟ್ಟಣ ಪಂಚಾಯಿತಿಯ 2026–27 ನೆಯ ಸಾಲಿನ 2.27 ಲಕ್ಷ ರೂ.ಗಳ ಅಂದಾಜು ಬಜೆಟ್ ಗೆ ಮಂಜೂರಾತಿ ದೊರೆತಿದೆ. ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು ಸ್ಥಳೀಯ ಸಂಸ್ಥೆಗಳ ಪ್ರಮುಖರು, ಪಟ್ಟಣ ಪಂಚಾಯಿತಿ ನಾಮ ನಿರ್ದೇಶನ ಸದಸ್ಯರು ಹಾಗೂ ಪ್ರಮುಖ ಸಾರ್ವಜನಿಕರ ಸಭೆ ಕರೆದು ಚರ್ಚಿಸಿ ತಯಾರಿಸಿ ಸಲ್ಲಿಸಲಾಗಿದ್ದ ಆಯ–ವ್ಯಯ ಅಂದಾಜು ಪತ್ರಿಕೆಯನ್ನು ಪಟ್ಟಣ ಪಂಚಾಯಿತಿ ಆಡಳಿತಾಧಿಕಾರಿಗಳಾಗಿರುವ ತಹಶೀಲ್ದಾರ್ ವಾಸುದೇವ ಸ್ವಾಮಿ ಅಂಗೀಕರಿಸಿ ಮಂಜೂರಾತಿ ನೀಡಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಪಟ್ಟಣ ಪಂಚಾಯಿತಿಗೆ ಎಸ್.ಎಫ್.ಸಿ ಯೋಜನೆಯಡಿ 38 ಲಕ್ಷ ರೂ., ನಗರ ನೀರು ಸರಬರಾಜು ವಿಭಾಗಕ್ಕೆ ಅಗತ್ಯ 1.05 ಕೋಟಿ ಅನುದಾನ, ಬೀದಿ ದೀಪಗಳ ನಿರ್ವಹಣೆಯ 20 ಲಕ್ಷ ರೂ. ವಿದ್ಯುತ್ ಅನುದಾನ ಹಾಗೂ 1.44 ಕೋಟಿ ವೇತನ ಅನುದಾನದ ಆದಾಯ ನಿರೀಕ್ಷಿಸಲಾಗಿದೆ ಎಂದು ಮುಖ್ಯಾಧಿಕಾರಿ ಶಿವಾನಂದ ಆಲೂರ ತಿಳಿಸಿದ್ದಾರೆ. ನೀರಿನ ಶುಲ್ಕದ 28 ಲಕ್ಷ, ಸ್ವಯಂ ಘೋಷಿತ ಆಸ್ತಿ ತೆರಿಗೆಯ 56.25 ಲಕ್ಷ, ಉಪ ಕರಗಳ 12.50 ಲಕ್ಷ, ಖಾತಾ ಬದಲಾವಣೆಯ ಶುಲ್ಕದ 8 ಲಕ್ಷ, ಅಭಿವೃದ್ಧಿ ಶುಲ್ಕದ 5 ಲಕ್ಷ, ಖಾತಾ ಪ್ರತಿಗಳ 2.50 ಲಕ್ಷ, ಸಾರ್ವಜನಿಕರ ವಸೂಲಿಸುವ ಪರವಾನಿಗೆ ಶುಲ್ಕದ 1.50 ಲಕ್ಷ, ಕಟ್ಟಡ ಪರವಾನಗಿಯ 3.50 ಲಕ್ಷ, ತ್ಯಾಜ್ಯ ಸಂಗ್ರಹಣೆ ಹಾಗೂ ತ್ಯಾಜ್ಯ ಉತ್ಪನ್ನಗಳ ಮಾರಾಟ ಶುಲ್ಕದ 12.22 ಲಕ್ಷ, ಸಕ್ಕಿಂಗ್ ಮಶೀನ್ ವಾಹನ ಬಾಡಿಗೆ ಶುಲ್ಕದ 1 ಲಕ್ಷ, ಕೆರೆಗಳ ಅಭಿವೃದ್ಧಿ ಶುಲ್ಕದ 1 ಲಕ್ಷ ಹಾಗೂ 91.57 ಲಕ್ಷ ರೂ.ಗಳ ಇತರೆ ಆದಾಯ ಸೇರಿ ಒಟ್ಟು 5 ಕೋಟಿ 29ಲಕ್ಷ 89 ಸಾವಿರ ರೂ.ಗಳ ಆದಾಯ ನಿರೀಕ್ಷಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ರಾಜಸ್ವ ವೆಚ್ಚದಲ್ಲಿ ಸಿಬ್ಬಂದಿ ವೇತನ, ಬೀದಿ ದೀಪ ಹಾಗೂ ನೀರು ಸರಬರಾಜು ವಿದ್ಯುತ್ ಬಿಲ್ ಪಾವತಿ, ಉದ್ಯಾನವನ ಮತ್ತು ಸ್ಮಶಾನ ಅಭಿವೃದ್ಧಿ, ಚರಂಡಿ ಹಾಗೂ ಸಿಸಿ ರಸ್ತೆಗಳ ಅಭಿವೃದ್ಧಿ, ವಾಹನ ಬಾಡಿಗೆ ಶುಲ್ಕ, ವಾಹನಗಳ ಇಂಧನ ಶುಲ್ಕ, ಹೊರಗುತ್ತಿಗೆ ಸಿಬ್ಬಂದಿ ವೇತನ, ವಾಹನ ವಿಮೆ, ಕಾರ್ಮಿಕರ ಉಪಹಾರ ಮತ್ತು ಕಚೇರಿ ವೆಚ್ಚ, ವಾಹನಗಳ ದುರಸ್ತಿ, ನಿರ್ವಹಣೆ, ಪರಿಶಿಷ್ಟ ಜಾತಿ, ಪಂಗಡ, ಬಡವರು, ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳಿಗೆ ಅನುದಾನ ಮೀಸಲು, ಕ್ರೀಡಾ ಚಟುವಟಿಕೆ, ಘನತ್ಯಾಜ್ಯ ವಸ್ತು ನಿರ್ವಹಣೆಗೆ ಮೀಸಲು ಮತ್ತು 1.50 ಕೋಟಿ ಇತರೆ ವೆಚ್ಚ ಸೇರಿ ಒಟ್ಟು 5 ಕೋಟಿ 27ಲಕ್ಷ 62 ಸಾವಿರ ರೂಪಾಯಿಗಳ ವೆಚ್ಚ ಅಂದಾಜಿಸಲಾಗಿದೆ ಎಂದು ಮುಖ್ಯಾಧಿಕಾರಿ ತಿಳಿಸಿದ್ದಾರೆ ಈ 2.27 ಲಕ್ಷ ರೂಪಾಯಿಗಳ ಉಳಿತಾಯ ಬಜೆಟ್ ಗೆ ಅನುಮೋದನೆ ನೀಡಿರುವ ಆಡಳಿತಾಧಿಕಾರಿ ವಾಸುದೇವ ಸ್ವಾಮಿ, ನಿಯಮಾನುಸಾರ ಕ್ರಮ ಜರುಗಿಸಲು ಮುಖ್ಯಾಧಿಕಾರಿಗೆ ಅಧಿಕಾರ ನೀಡಿದ್ದಾರೆ. ಬಜೆಟ್ ಮಂಜೂರಾತಿ ಕುರಿತ ಸಭೆಯಲ್ಲಿ ಪಪಂ. ಮುಖ್ಯಾಧಿಕಾರಿ ಶಿವಾನಂದ ಆಲೂರ, ವ್ಯವಸ್ಥಾಪಕ ವಿ.ಜಿ.ವರಡಪ್ಪನವರ, ಅಕೌಂಟೆಂಟ್ ಹಣಮಂತ ಹಳ್ಳಿಯವರ ಇದ್ದರು.

# ಡಿಡಿಯು ಸಿಬಿಎಸ್ಇ ಶಾಲೆ ಯಾದಗಿರಿಯಲ್ಲಿ ದಶಮ ತರಗತಿ ವಿದ್ಯಾರ್ಥಿಗಳಿಗೆ ಭಾವಪೂರ್ಣ ಬೀಳ್ಕೊಡುಗೆ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಡಿಡಿಯು ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ಗಳ ಅಂಗ ಸಂಸ್ಥೆಯಾದ ಡಿಡಿಯು ಸಿಬಿಎಸ್‌ಇ ಶಾಲೆ, ಯಾದಗಿರಿಯಲ್ಲಿ ದಶಮ ತರಗತಿ ವಿದ್ಯಾರ್ಥಿಗಳಿಗೆ ಭಾವಪೂರ್ಣ ಬೀಳ್ಕೊಡುಗೆ ಸಮಾರಂಭವನ್ನು ವಿಜೃಂಭಣೆಯಿಂದ ಆಯೋಜಿಸಲಾಯಿತು.

ಕಾರ್ಯಕ್ರಮವು ಆಡಳಿತಾಧಿಕಾರಿ ಮಲ್ಲಿಕಾರ್ಜುನ ಮೆಟಿ ಅವರ ಉಪಸ್ಥಿತಿಯಲ್ಲಿ ನಡೆಯಿತು. ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಡಾ. ವಿನಿತಾ, ಅರ್ಬನ್ ಸೆಂಟರ್ ಯಾದಗಿರಿ ಅವರು ಆಗಮಿಸಿ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಮಾತುಗಳನ್ನು ಹೇಳಿದರು. ಅವರು ವಿದ್ಯಾರ್ಥಿಗಳು ಪರಿಶ್ರಮ, ಶಿಸ್ತು ಮತ್ತು ಆತ್ಮವಿಶ್ವಾಸದೊಂದಿಗೆ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಮುಖ ಸದಸ್ಯರಿಗೆ ಸನ್ಮಾನ ಸಲ್ಲಿಸಲಾಯಿತು. ಡಿಡಿಯು ಐಸಿಎಸ್‌ಇ ಶಾಲೆಯ ಪ್ರಾಂಶುಪಾಲರಾದ ರಾಜೇಶ್ ಕುಮಾರ್, ಡಿಡಿಯು ಸಿಬಿಎಸ್‌ಇ ಶಾಲೆಯ ಬಾಬಿನ್ ರಾಜ್, ಮತ್ತು ವಸತಿ ನಿಲಯ ವಾರ್ಡನ್ ನಿಂಗಣ್ಣ ಹೊಸಮನಿ ಅವರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ವ್ಯವಸ್ಥಾಪಕರಾದ ರಾಜಶೇಖರ್ ಮತ್ತು ರವಿ, ಜೊತೆಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಈ ವರ್ಷ ಡಿಡಿಯು ಸಿಬಿಎಸ್‌ಇ ಮತ್ತು ಐಸಿಎಸ್‌ಇ ಶಾಲೆಗಳಿಂದ ಒಟ್ಟು 113 ವಿದ್ಯಾರ್ಥಿಗಳು ಬೋರ್ಡ್ ಪರೀಕ್ಷೆಯನ್ನು ಬರೆಯಲಿದ್ದಾರೆ.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡು, ತಮ್ಮ ಶಿಕ್ಷಕರು ಸ್ನೇಹಪೂರ್ಣವಾಗಿ ಮಾರ್ಗದರ್ಶನ ನೀಡಿ ತಮ್ಮ ಭವಿಷ್ಯ ನಿರ್ಮಾಣಕ್ಕೆ ಶ್ರಮಪಟ್ಟಿದ್ದಾರೆ ಎಂದು ಕೃತಜ್ಞತೆ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ಭವಿಷ್ಯದಲ್ಲಿ ಯಶಸ್ಸು ಸಾಧಿಸಿ ಮತ್ತೆ ಶಾಲೆಗೆ ಬಂದು ತಮ್ಮ ಯಶೋಗಾಥೆಗಳನ್ನು ಹಂಚಿಕೊಳ್ಳುವುದಾಗಿ ಭರವಸೆ ನೀಡಿದರು.

ಕೊನೆಯಲ್ಲಿ ಆಡಳಿತ ಮಂಡಳಿ ಹಾಗೂ ಶಿಕ್ಷಕರು ವಿದ್ಯಾರ್ಥಿಗಳಿಗೆ ಬೋರ್ಡ್ ಪರೀಕ್ಷೆಯಲ್ಲಿ ಉತ್ತಮ ಯಶಸ್ಸು ದೊರೆಯಲಿ ಎಂದು ಹಾರೈಸಿದರು. ಸಮಾರಂಭವು ಸಂತಸದ ವಾತಾವರಣದಲ್ಲಿ ಗುಂಪು ಛಾಯಾಚಿತ್ರಗಳೊಂದಿಗೆ ಸಮಾಪ್ತಿಯಾಯಿತು.

# ದಲಿತ ಸಮುದಾಯಕ್ಕೆ ಅನ್ಯಾಯ ಮಾಡಿದ ಪೋಲಿಸ್ ಅಧಿಕಾರಿಗಳನ್ನು ತಕ್ಷಣವೇ ಅಮಾನತು ಮಾಡಿ



• **ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ**

ತಾಲೂಕಿನ ನಂ.10 ಮುದ್ದಾಪುರ ಗ್ರಾಮದ ದಲಿತರ ವಿರುದ್ಧ ಕೌಂಟರ್ ಕೇಸಿನಲ್ಲಿ ಶಮಿಲಾದ ಪೊಲೀಸ್ ಅಧಿಕಾರಿಗಳನ್ನು ಅಮಾನತ್ತು ಮಾಡುವಂತೆ ಆಕ್ರೋಶಗೊಂಡು ದಲಿತ ಸಂಘಟನೆಗಳಿಂದ ತೀವ್ರ ಪ್ರತಿಭಟನೆ.

ಈ ಸಂದರ್ಭದಲ್ಲಿ ಗುಡಿಮನೆ ಕರಿಯಪ್ಪ ಮಾತನಾಡಿ ಕೆಲವು ದಿನಗಳ ಹಿಂದೆ ನಂಬರ್ ಟೆನ್ ಮುದ್ದಾಪುರ ಗ್ರಾಮದ ದಲಿತ ಸಮುದಾಯದ 8 ಯುವಕರ ವಿರುದ್ಧ ಕೌಂಟರ್ಕೇಶ್ ಹಾಕುವಂತೆ ಒತ್ತಾಯಿಸಿ ದಲಿತರ ವಿರುದ್ಧ ಸಂವಿಧಾನದಲ್ಲಿ ಅನ್ಯಾಯ ಮಾಡಿದ ದ್ರೋಹಿ ಪೊಲೀಸ್ ಇಲಾಖೆಯ ಮೂವರು ದುಷ್ಟ ಅಧಿಕಾರಿಗಳನ್ನು ಈ ಕೂಡಲೇ ಅಮಾನತ್ತು ಮಾಡಬೇಕೆಂದು ಸಮುದಾಯದ ಜೊತೆಗೂಡಿ ಈ ಧರಣಿಯನ್ನ ಮಾಡಲಾಗಿದೆ ಈ ಧರಣಿ ನಂಬರ್ 10 ಮುದ್ದಾಪುರದಿಂದ ಕಂಪ್ಲಿ ಪೊಲೀಸ್ ಠಾಣೆವರೆಗೂ ಮುಂದೆ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳದಿದ್ದರೆ ಕಂಪ್ಲಿಯಿಂದ ಬಳ್ಳಾರಿ ಕಚೇರಿಗೆ ಪಾದಯಾತ್ರೆ ಮೂಲಕ ಎಲ್ಲಾ ದಲಿತ ಸಮುದಾಯದ ಸಂಘಟನೆಗಳು ಸೇರಿ ಉಪವಾಸ ಸತ್ಯಾಗ್ ಮಾಡುವುದಾಗಿ ತಿಳಿಸಿದರು.

ಪೊಲೀಸ್ ಅಧಿಕಾರ ಸ್ವೀಕಾರ ಮಾಡುವಾಗ ಸಂವಿಧಾನದ ಅಡಿಯಲ್ಲಿ ಸಂವಿಧಾನವನ್ನು ಕಾಪಾಡುತ್ತೇವೆ ಜನರ ಪರ ಇರುತ್ತೇವೆ ಮೇಲ್ವರ್ಗ ಕೆಲವರಿಗೆ ಎನ್ನದೆ ಸರ್ವರಿಗೆ ಸಮಾನವಾಗಿ ಕೆಲಸವನ್ನು ಮಾಡುತ್ತೇವೆ ಎಂದು ಪ್ರಮಾಣ ಸ್ವೀಕಾರ ಮಾಡಿದ ಪೊಲಿಸ್ ಅಧಿಕಾರಿಗಳೇ ದಲಿತ ಕುಟುಂಬಕ್ಕೆ ಆಶೀರ್ವಾದ ಸಂವಿಧಾನವನ್ನೇ ಬದಲಾಯಿಸಿ ಸಂವಿಧಾನದ ವಿರುದ್ಧವಾಗಿ ದಲಿತರಿಗೆ ಅನ್ಯಾಯ ಮಾಡಿರುವುದು ಬಹಳ ಸೋಜಿಗವಾದ ಸಂಗತಿಯಾಗಿದೆ ಇಂಥ ಧಾರಣ ಕೃತ್ಯ ನಡೆದಂತ ಕಂಪ್ಲಿ ಪೊಲೀಸ್ ಠಾಣೆಗೆ ಕಪ್ಪು ಕಳಂಕದಿದೆ ಇಂತಹ ಘಟನೆಗಳು ನಮ್ಮ ಕಂಪ್ಲೀಟ್ ತಾಲೂಕಿನಲ್ಲಿ ಎಲ್ಲಾ ಇಡೀ ಕರ್ನಾಟಕದಲ್ಲಿ ಭಾರತ ದೇಶದಲ್ಲಿ ಯಾವುದೇ ಅಧಿಕಾರಿಗಳು ಇಂಥ ಧೋರಣೆ ಮಾಡಿದರೆ ಅದಕ್ಕೆ ಶಿಕ್ಷೆ ಆಗಲೇಬೇಕು ಎಂದು ಸಂಘಟನೆ ಅವರು ಹಾಕುವ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಗೋಪಾಲ ಗುಡಿಮನಿ ಕರಿಯಪ್ಪ ವಸಂತ್ ರಾಜ್ ಕಹಳೆ ನೀಲಪ್ಪ ಮೂರ್ತಿ ಧನಂಜಯ ಹಾಗೂ ಇತರ ದಲಿತ ಮುಖಂಡರು ಇತರರು ಉಪಸ್ಥಿತರಿದ್ದರು

# ಕನ್ನಡ ಸಂಸ್ಕೃತಿಗೆ ಸ್ಪಂದಿಸಿದ ಆಯವ್ಯಯ: ಖಾಡೆ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಮುಖ್ಯಮಂತ್ರಿ ಸಿದ್ಧರಾಮಯ್ಯ ಶುಕ್ರವಾರ ಮಂಡಿಸಿದ ಪ್ರಸಕ್ತ ಸಾಲಿನ ಆಯವ್ಯಯ ಕನ್ನಡ ಭಾಷೆ, ಜಾನಪದ ಮತ್ತು ಸಂಸ್ಕೃತಿಗೆ ಒತ್ತು ಕೊಟ್ಟಿದೆ ಎಂದು ಸಾಹಿತಿ ಡಾ.ಪ್ರಕಾಶ ಖಾಡೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೊದಲ ಬಾರಿಗೆ ಎಲ್ಲಾ ಜಾನಪದ ಹಾಗೂ ಬುಡಕಟ್ಟು ಕಲಾವಿದರು, ವಿದ್ವಾಂಸರನ್ನೊಳಗೊಂಡ ಸಮಾವೇಶಗಳನ್ನು ಜಾನಪದ ಸಂಗಮ ಹೆಸರಿನಲ್ಲಿ ಆಯೋಜಿಸುತ್ತಿರುವುದು ಸ್ವಾಗತಾರ್ಹವಾಗಿದೆ ಎಂದಿದ್ದಾರೆ.

ಸಂತ ಶಿಶುನಾಳ ಶರೀಫ, ಬೆಳವಡಿ ಮಲ್ಲಮ್ಮ, ಕವಿ ಸಿದ್ದಲಿಂಗಯ್ಯ ಹಾಗೂ ಡಿ.ಆರ್.ನಾರಜ ಅವರ ಹೆಸರಿನಲ್ಲಿ ಟ್ರಸ್ಟ್ ರಚಿಸುತ್ತಿರುವುದು ಹಾಗೂ ಅರ್ಧ ಶತಮಾನದ ದಲಿತ ಸಾಹಿತ್ಯದ ಬೃಹತ್ ಸಂಪುಟಗಳನ್ನು, ಜೊತೆಗೆ ಸಾಹಿತ್ಯ ಅಕಾಡೆಮಿಯಿಂದ ಅನಾಮಿಕ ಸ್ವಾತಂತ್ರ್ಯ ಹೋರಾಟಗಾರರ ಕೃತಿಯನ್ನು ಪ್ರಕಟಿಸುತ್ತಿರುವುದು ದಾಖಲಾರ್ಹ ಕಾರ್ಯವಾಗಿದೆ ಎಂದು ಡಾ.ಖಾಡೆ ಹೇಳಿದ್ದಾರೆ.

ಬಹಳ ಮುಖ್ಯವಾಗಿ ಬೆಂಗಳೂರು, ಕೋಲಾರ, ಮೈಸೂರು, ತುಮಕೂರು, ಧಾರವಾಡವರೆಗಿನ ಚಟುವಟಿಕೆಗಳಿಗೆ ಆದ್ಯತೆ ನೀಡಿರುವ ಪ್ರಸಕ್ತ ಸಾಲಿನ ಆಯವ್ಯಯವು ತುಂಗಭದ್ರ ನದಿ ಈಚೆಗಿನ ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕ ಮತ್ತು ಕರಾವಳಿ ಕರ್ನಾಟಕದ ಕಲೆ, ಸಾಹಿತ್ಯ, ರಂಗಭೂಮಿ ಮತ್ತು ಸಂಸ್ಕೃತಿ ಚಟುವಟಿಕೆಗಳಿಗೆ ಆದ್ಯತೆ ನೀಡಬೇಕಿತ್ತು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

# ವಿದ್ಯಾರ್ಥಿಯೊಬ್ಬನಿಂದ ಸಹಪಾಠಿಗಳ ಮೇಲೆ ಮನಬಂದಂತೆ ಹಲ್ಲೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಬಳ್ಳಾರಿಯ ಗುರುಕುಲ ವಸತಿ ಶಾಲೆಯಲ್ಲಿ –ನಿನ್ನೆ ರಾತ್ರಿ ವಿದ್ಯಾರ್ಥಿಯೊಬ್ಬ ತನ್ನ ಸಹಪಾಠಿಗಳ ಮೇಲೆ ಕಬ್ಬಿಣದ ಸರಳು, ಸ್ಕ್ರೂಡ್ರೈವರ್, ಚಾಕುವಿನಿಂದ ಮನ ಬಂದಂತೆ –ದಾಳಿ ಮಾಡಿದ್ದು, ಈ ಘಟನೆಯಲ್ಲಿ ಒಬ್ಬ ವಿದ್ಯಾರ್ಥಿ ಮೃತ ಪಟ್ಟು, ವಾರ್ಡನ್ ಸೇರಿದಂತೆ 7 ಮಂದಿ ಗಾಯಗೊಂಡಿದ್ದಾರೆ.

ಗಾಯಗೊಂಡಿರುವವರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ. ಈ ದಾಳಿ ನಡೆಸಿದ ವಿದ್ಯಾರ್ಥಿ ಪರಾರಿಯಾಗಿದ್ದು, ದಾಳಿಗೆ ಒಳಗಾದವರು ದಾಳಿ ನಡೆಸಿದ ಆರೋಪಿ ವಿದ್ಯಾರ್ಥಿ ಎಲ್ಲರೂ ಬಳ್ಳಾರಿ ನಗರದ ಗುರುಕುಲ ವಸತಿ ಶಾಲೆಯ 9ನೇ ತರಗತಿ ವಿದ್ಯಾರ್ಥಿಗಳಾಗಿದ್ದಾರೆ.

ಈ ಘಟನೆಯಲ್ಲಿ ಮೃತಪಟ್ಟ ಬಾಲಕನನ್ನು ಆಂಧ್ರ ಪ್ರದೇಶದ ಆದವಾನಿಯ ಹೇಮಂತ್ ಎಂದು ಗುರುತಿಸಲಾಗಿದೆ. ಮೃತದೇಹವನ್ನು



» **ಏಳು ಮಕ್ಕಳಿಗೆ ಗಾಯ.**

» **ಹಾಸ್ಟೆಲ್ ವಾರ್ಡನ್ ಶಿಕ್ಷಕಿ ಮೇಲೂ ಹಲ್ಲೆ**

» **ಬಿ.ಗೋನಾಳ್ ಬಾಲಕನಿಂದ ಹಲ್ಲೆ, ಪರಾರಿ**

» **ಆಂಧ್ರದ ಆಲೂರಿನ ಬಾಲಕ ಹೇಮಂತ ಸಾವು**

ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ–ಕ್ಕೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಗಿದೆ.

ರಾತ್ರಿ ಊಟ ಮುಗಿದ ಬಳಿಕ ವಿದ್ಯಾರ್ಥಿಗಳು ಹಾಸ್ಟೆಲ್ ನಲ್ಲಿ ಮಲಗಿದ್ದರು. ಈ ಸಂದರ್ಭದಲ್ಲಿ ಕ್ಷುಲ್ಲಕ ಕಾರಣಕ್ಕೆ ಆರೋಪಿ ವಿದ್ಯಾರ್ಥಿ ಹಾಗೂ ಇತರರ ನಡುವೆ ಜಗಳ ನಡೆದಿದ್ದು, ಈ ಸಂದರ್ಭದಲ್ಲಿ ಆರೋಪಿತ ವಿದ್ಯಾರ್ಥಿ ಮಂಚದ ರಾಡ್, ಸ್ಕ್ರೂಡ್ರೈವರ್ ಹಾಗೂ ರೇಡಿಯಂ ಕಟರ್ ಚಾಕುವಿನಿಂದ ಸಹಪಾಠಿಗಳ ಮೇಲೆ ದಾಳಿ ನಡೆ ವಾರ್ಡನ್ ಸೇರಿ 7 ಮಂದಿಗೆ ಗಾಯಸಿದ ಎನ್ನಲಾಗಿದೆ. ಈ ದಾಳಿಯಲ್ಲಿ ಹೇಮಂತ್ ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ಕೊಂಡೊಯ್ಯುವಷ್ಟರಲ್ಲೇ ಮೃತಪಟ್ಟಿದ್ದಾನೆ.

ವಿದ್ಯಾರ್ಥಿಗಳ ಗಲಾಟೆ ನೋಡಿ ಹಾಸ್ಟೆಲ್‌ನ ಮಹಿಳಾ ವಾರ್ಡನ್ ಸ್ಥಳಕ್ಕೆ ಬಂದಿದ್ದು, ಅವರ ಮೇಲೂ ವಿದ್ಯಾರ್ಥಿ ದಾಳಿ ಮಾಡಿದ್ದಾನೆ ಎನ್ನಲಾಗಿದೆ. ಈ ವಿದ್ಯಾರ್ಥಿಯ ದಾಳಿಯಲ್ಲಿ ಹಾಸ್ಟೆಲ್‌ನ ಮಹಿಳಾ ವಾರ್ಡನ್ ಸೇರಿದಂತೆ 7 ಮಂದಿ ವಿದ್ಯಾರ್ಥಿಗಳು ಗಾಯಗೊಂಡಿದ್ದು, ಇವರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಹೇಳಲಾಗಿದೆ. ಗಾಯಗೊಂಡಿರುವ ವಿದ್ಯಾರ್ಥಿಗಳು ಹಾಗೂ ವಾರ್ಡನ್ ರವರನ್ನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.


ಈ ಸಂಬಂಧ ಬಳ್ಳಾರಿಯ ಬ್ರೂಸ್‌ಪೇಟೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದಾರೆ.

ಪೋಷಕರ ಆಕ್ರಂದನ

ವಿದ್ಯಾರ್ಥಿಯ ದಾಳಿಯಲ್ಲಿ ಮೃತಪಟ್ಟ ಬಾಲಕ ಹೇಮಂತ್‌ನ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ. ಈ ಘಟನೆಯ ಬಗ್ಗೆ ಮೃತ ಬಾಲಕ ಹೇಮಂತನ ತಂದೆ ಲಕ್ಷ್ಮೀಕಾಂತ್ ವಿಮ್ಸ್ ಆಸ್ಪತ್ರೆಯ ಬಳಿ ಮಾಧ್ಯಮದವರೊಂದಿಗೆ ಮಾತನಾಡಿ, ತಡರಾತ್ರಿ ಹಾಸ್ಟೆಲ್‌ನಿಂದ ಕರೆ ಬಂತು. ನಿಮ್ಮ ಮಗ ಗಂಭೀರ ಗಾಯಗೊಂಡಿ ದ್ದಾನೆ ಎಂದು ತಿಳಿಸಲಾಯಿತು. ನಾವು ತಕ್ಷಣವೇ ಆದವಾನಿಯಿಂದ ಬಳ್ಳಾರಿಗೆ ಬಂದೆವು. ಬಂದು ನೋಡಿದರೆ ಮಗ ಮೃತಪಟ್ಟಿದ್ದಾನೆ ಎಂದು ಕಣ್ಣೀರಿ ಡುತ್ತಾ ಹೇಳಿದರು.

ವಸತಿ ಶಾಲೆಯಲ್ಲಿ ನಡೆದಿರುವ ಈ ಘಟನೆ ಪೋಷಕರಲ್ಲಿ ಆಘಾತ ಮೂಡಿಸಿದೆ. ಘಟನೆಗೆ ಏನು ಕಾರಣ, ಯಾವ ಕಾರಣಕ್ಕೆ ಆರೋಪಿತ ವಿದ್ಯಾರ್ಥಿ ಸಹಪಾಠಿಗಳ ಮೇಲೆ ಹಲ್ಲೆ ನಡೆಸಿದ್ದಾನೆ ಎಂಬ ಉದ್ದೇಶವಾಗಿದೆ.

# ದೇಶ ಕಾಯುವ ಯೋಧರ ಸೇವೆ ಅವಿಸ್ಮರಣೀಯ: ರಾಮಾರೂಢ ಶ್ರೀಗಳು



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ತಮ್ಮ ಜೀವ ಲೆಕ್ಕಿಸದೇ ದೇಶ ರಕ್ಷಣೆಯ ಕಾರ್ಯದಲ್ಲಿ ತೊಡಗಿರುವ ಸೈನಿಕರ ಸೇವೆ ಅವಿಸ್ಮರಣೀಯವಾದುದು ಎಂದು ಬಾಗಲಕೋಟೆ ರಾಮಾರೂಢ ಮಠದ ಪರಮರಾಮಾರೂಢ ಸ್ವಾಮೀಜಿ ಹೇಳಿದರು.

ತಾಲೂಕಿನ ಮುಗಳೊಳ್ಳಿ ಗ್ರಾಮದ ಯೋಧ ಹವಾಲ್ದಾರ ಮಂಜುನಾಥ ಗದಿಗೆಪ್ಪ ಹೆಬ್ಬಾಳ 24 ವರ್ಷ ಸೈನಿಕ ಸೇವೆ ಪೂರೈಸಿ ನಿವೃತ್ತಿ ಹೊಂದಿ ಗುರುವಾರ ಆಗಮಿಸಿದ ಸಂದರ್ಭದಲ್ಲಿ ಗ್ರಾಮಸ್ಥರು ಹಾಗೂ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸನ್ಮಾನ ಸಮಾರಂಭದಲ್ಲಿ ಶ್ರೀಗಳು ಸಾನಿಧ್ಯ ವಹಿಸಿ ಮಾತನಾಡಿದರು.

ಸೈನಿಕರು ದೇಶಪ್ರೇಮ ಹೊಂದಿ ನಿಷ್ಠೆಯಿಂದ ದೇಶ ರಕ್ಷಣೆಯ ಕೆಲಸ ಮಾಡುತ್ತಿರುವುದರಿಂದಲೇ ಇಂದು ನಾವುಗಳೆಲ್ಲ ನಿಶ್ಚಿಂತರಾಗಿ ಜೀವನ ಮಾಡುವಂತಾಗಿದೆ ಎಂದ ಸ್ವಾಮೀಜಿ, ತಮ್ಮ ಮಕ್ಕಳನ್ನು ಸೈನ್ಯಕ್ಕೆ ಕಳುಹಿಸಿ ರಾಷ್ಟ್ರಭಕ್ತಿ ತೋರುವ ತಾಯಂದಿರ ತ್ಯಾಗಕ್ಕೆ ಬೆಲೆ ಕಟ್ಟಲಾಗದು ಎಂದರು.

ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಗೌರವಾಧ್ಯಕ್ಷ ಅರ್ಜುನ ಕೋರಿ, ಅಧ್ಯಕ್ಷ ಗದಿಗೆಪ್ಪ ಅರಕೇರಿ ಮಾತನಾಡಿ, ದೇಶಸೇವೆಯೇ ಸೈನಿಕರಿಗೆ ಪರಮಧ್ಯೇಯವಾಗಿರುತ್ತದೆ. ಯುವಕರು ಸೈನ್ಯ ಸೇರಿ ರಕ್ಷಣಾ ಸೇವೆ ಮಾಡಲು ಮುಂದಾಗಬೇಕು ಎಂದು ಹೇಳಿದರು.

ಕಾಡಯ್ಯ ಹಿರೇಮಠ, ಬಸಯ್ಯ ಹಿರೇಮಠ, ಚಿದಾನಂದ ಹಿರೇಮಠ ಹಾಗೂ ಪುಂಡಲೀಕಪ್ಪ ಕರೆನ್ನವರ ಸ್ವಾಮಿಗಳು ನೇತೃತ್ವ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿವೃತ್ತ ಪಿಎ ಪಾಂಡು ಸುನಗದ, ನಿವೃತ್ತ ಶಿಕ್ಷಕ ಎ.ಎಚ್.ಅತ್ತಾರ, ಸುಬೇದಾರ ಹನುಮಂತ ದಾಸರ, ಹವಾಲ್ದಾರ ನಬಿಸಾಬ್ ನದಾಫ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಮಾಜಿ ಸೈನಿಕರಾದ ಶಂಕರಪ್ಪ ಬಾರಕೇರ, ಅರುಣ ಕೋರಿ, ಯಲ್ಲಪ್ಪ ಹುಂಡೇಕಾರ, ಮಂಜುನಾಥ ಜೋಗಿ, ಚಂದು ಲಮಾಣಿ, ಮಂಜುನಾಥ ಮನಗೂಳಿ, ಬಸವರಾಜ ಬಾಗೇವಾಡಿ, ಯಲ್ಲಪ್ಪ ಕಡೇಮನಿ, ಸಂಗನಗೌಡ ಪಾಟೀಲ, ಮಹಾದೇವಪ್ಪ ಗುನ್ನಿ, ವೇಮನ ಹಳೇಮನಿ, ಪರಸಪ್ಪ ತಳವಾರ, ಪರಶು ಮುಚಕಂಡಿ ಅತಿಥಿಗಳಾಗಿದ್ದರು. ಕಾರ್ಯಕ್ರಮಕ್ಕೂ ಮೊದಲು ಸುಬೇದಾರ ಮಂಜುನಾಥ ಹೆಬ್ಬಾಳ ದಂಪತಿಗಳನ್ನು ಮೆರವಣಿಗೆಯ ಮೂಲಕ ಕಾರ್ಯಕ್ರಮದ ಸ್ಥಳಕ್ಕೆ ಕರೆತರಲಾಯಿತು. ಶಿಕ್ಷಕ ಕುಮಾರ ಹೆಳವರ ಸ್ವಾಗತಿಸಿದರು. ಚಿದಾನಂದ ಕೆಂಚನಗೌಡರ ನಿರೂಪಿಸಿದರು.

# ವೃದ್ಧಾಶ್ರಮದಲ್ಲಿ ಸಚಿವ ಮುನಿಯಪ್ಪರ ಜನ್ಮ ದಿನ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಸಚಿವ ಕೆ. ಹೆಚ್ ಮುನಿಯಪ್ಪ ಅವರ ಹುಟ್ಟುಹಬ್ಬವನ್ನು ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ್ ನೇತೃತ್ವದಲ್ಲಿ ಸಂಗನಕಲ್ಲಿನ ಆದರ್ಶ ಹಿರಿಯ ವಯೋ ವೃದ್ಧಾಶ್ರಮದಲ್ಲಿ ಆಶ್ರಮ ವಾಸಿಗಳಿಗೆ ಹಣ್ಣು ಹಂಪಲು ಹಾಗೂ ಬಟ್ಟೆ ವಿತರಣೆಯ ಮೂಲಕ ಆಚರಿಸಲಾಯ್ತು.

ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ್ ಈ ವೇಳೆ ಮಾತನಾಡಿ, ನನ್ನ ಅಣ್ಣನ ಸಮಾನರಾದ ಕೆ ಹೆಚ್ ಮುನಿಯಪ್ಪ ಅವರು ಸಮುದಾಯದ ಹಿರಿಯ ನಾಯಕರಾಗಿದ್ದು, ಸಮಾಜಕ್ಕೆ ಅವರ ಕೊಡುಗೆ ಅಪಾರವಾಗಿದೆ ಎಂದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಅನೇಕ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು.

# ತೇಜಪೂರ್ಣ ಸೋಮನಾಥ ಜ್ಯೋತಿರ್ಲಿಂಗ ಯಾತ್ರೆ

**ಮಲ್ಲಮ್ಮನುಡಿ ವಾರ್ತೆ ಹುಣಸಗಿ**




ಪಟ್ಟಣದ ನೀಲಕಂಠೇಶ್ವರ ದೇವಸ್ಥಾನ ಆವರಣದಲ್ಲಿ ಶನಿವಾರ ಪರಂಪರಗತ ತೇಜಪೂರ್ಣ ಮೂಲ ಸೋಮನಾಥ ಜ್ಯೋತಿರ್ಲಿಂಗ ಯಾತ್ರೆ ಕಾರ್ಯಕ್ರಮವನ್ನು ಭಕ್ತಿಭಾವದಿಂದ ಹಮ್ಮಿಕೊಳ್ಳಲಾಯಿತು. ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾದ ಸೋಮನಾಥ ಜ್ಯೋತಿರ್ಲಿಂಗದ ಈ ಪವಿತ್ರ ಯಾತ್ರೆ ದೇಶದ ವಿವಿಧ ರಾಜ್ಯಗಳನ್ನು ಸಂಚರಿಸುತ್ತಿದ್ದು, ಹುಣಸಗಿಗೆ ಆಗಮಿಸಿದ ಹಿನ್ನೆಲೆ ಸ್ಥಳೀಯ ಭಕ್ತರಿಗೆ ಶಿವನ ದರ್ಶನವನ್ನು ಸಮೀಪದಿಂದ ಪಡೆಯುವ ಅಪರೂಪದ ಸುವರ್ಣಾವಕಾಶ ದೊರೆಯಿತು.

ಕಾರ್ಯಕ್ರಮದ ಅಂಗವಾಗಿ ಮಹಾಂತ ಸ್ವಾಮಿ ವೃತ್ತದಿಂದ ನೀಲಕಂಠೇಶ್ವರ ದೇವಸ್ಥಾನವರೆಗೆ ಭವ್ಯ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಮಾತೆಯರು ಕುಂಭ ಸೇವೆ ನೆರವೇರಿಸಿ ಭಾಗವಹಿಸಿದರೆ, ಡೊಳ್ಳು ಕುಣಿತ ಹಾಗೂ ಕುದುರೆ ಕುಣಿತದ ಮೂಲಕ ಧಾರ್ಮಿಕ ಉತ್ಸಾಹ ಮೂಡಿಸಲಾಯಿತು. ಭಕ್ತರು "ಓಂ ನಮಃ ಶಿವಾಯ" ಎಂಬ ಶಿವನಾಮ ಸ್ಮರಣೆ ಮಾಡುತ್ತ ಭಕ್ತಿಭಾವದಿಂದ ಮೆರವಣಿಗೆಯಲ್ಲಿ ಪಾಲ್ಗೊಂಡರು. ಈ ಯಾತ್ರೆಯ ಪ್ರಮುಖ ಆಕರ್ಷಣೆಯಾಗಿ ಸುಮಾರು ಸಾವಿರ ವರ್ಷಗಳ ಪುರಾತನವೆಂದು ಪರಿಗಣಿಸಲ್ಪಡುವ ಸೋಮನಾಥ ಜ್ಯೋತಿರ್ಲಿಂಗದ ದರ್ಶನಕ್ಕೆ ಭಕ್ತರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿತ್ತು. ಈ ಸಂದರ್ಭದಲ್ಲಿ ಸ್ವಾಮಿ ಶರಣಾನಂದ ಸ್ವಾಮೀಜಿ ಅವರ ನೇತೃತ್ವದಲ್ಲಿ ರುದ್ರ ಪೂಜೆ ಮತ್ತು ಸತ್ಸಂಗ ಕಾರ್ಯಕ್ರಮ ನಡೆಯಿತು. ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ವತಿಯಿಂದ ಆಯೋಜಿಸಲಾದ ಸತ್ಸಂಗದಲ್ಲಿ ಭಾಗವಹಿಸಿದ ಭಕ್ತರಿಗೆ ಸ್ವಾಮೀಜಿಯವರು ಶಿವನ ಮಂತ್ರಪಠಣವನ್ನು ಸಾಮೂಹಿಕವಾಗಿ ಮಾಡಿಸಿ ಆಧ್ಯಾತ್ಮಿಕ ಸಂದೇಶ ನೀಡಿದರು.

ಸತ್ಸಂಗದಲ್ಲಿ ಭಾಗವಹಿಸಿದ್ದ ಭಕ್ತರು ಭಕ್ತಿಭಾವದಿಂದ ಸೋಮನಾಥ ಜ್ಯೋತಿರ್ಲಿಂಗದ ದರ್ಶನ ಪಡೆದು ಆಶೀರ್ವಾದ ಪಡೆದರು. ಕಾರ್ಯಕ್ರಮದಲ್ಲಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಸ್ವಯಂಸೇವಕ ಆನಂದ ಬಾರಿಗಿಡ ಅವರು ನಿರೂಪಣೆ ನಡೆಸಿದರು.

ಕಾರ್ಯಕ್ರಮದ ವ್ಯವಸ್ಥೆಯನ್ನು ಮಹೇಶ ಸ್ಥಾವರಮಠ, ಬಸವರಾಜ ವೈಲಿ, ನೀಲಕಂಠ ವೈಲಿ ಹಾಗೂ ಮುತ್ತು ಜಂಬಲದ್ದಿನಿ ಅವರು ವಹಿಸಿಕೊಂಡಿದ್ದರು. ಪಟ್ಟಣದ ಮುಖಂಡರು ಆಗಮಿಸಿದ ಭಕ್ತಾದಿಗಳಿಗೆ ಪ್ರಸಾದ ಸೇವೆಯನ್ನು ವ್ಯವಸ್ಥೆ ಮಾಡಿದರು.

ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಪಟ್ಟಣದ ಪ್ರಮುಖ ಮುಖಂಡರಾದ ವಿರೇಶ ಚಿಂಚೋಳಿ, ಸಿದ್ದಣ್ಣ ಮಲಗಲದಿನ್ನಿ, ಚಂದ್ರಶೇಖರ ದಂಡಿನ, ಬಸವರಾಜಸ್ವಾಮಿ ಸ್ಥಾವರಮಠ, ಬಸಣ್ಣ ದೇಸಾಯಿ, ಸಂಗಣ್ಣ ವೈಲಿ, ಶರಣು ದಂಡಿನ, ಆರ್.ಎಂ. ರೇವಡಿ, ಬಾಪೂಗೌಡ ಪಾಟೀಲ, ಬಿ.ಎಲ್. ಹಿರೇಮಠ, ಟಿ.ಎಸ್. ಚಂದಾ, ಮಾಹಾಂತೇಶ ಮಲಗಲದಿನ್ನಿ, ಶಿವಕುಮಾರ ಎಮ್ ಸಗರ ಹಿರೇಮಠ, ಬಸವರಾಜ ಸಜ್ಜನ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಜೊತೆಗೆ ಮಾತೆಯರು ಹಾಗೂ ನೂರಾರು ಭಕ್ತರು ಭಕ್ತಿಭಾವದಿಂದ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಎಸ್ ಡಿ ಎಂ ಸಿ ಸದಸ್ಯರಿಗೆ ಅರಿವಿನ ಕಾರ್ಯಕ್ರಮ




**ಮಲ್ಲಮ್ಮನುಡಿವಾರ್ತೆ ಹುಣಸೂರು**

ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ: ದಕ್ಷಿಣ ಕ್ಲಸ್ಟರ್ ಮಟ್ಟದ ಎಸ್‌ಡಿಎಂಸಿ ಸದಸ್ಯರ ತರಬೇತಿ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ. ಎಚ್ ಪಿ ಬಿ ಎಸ್ ಶಾಲೆಯ ಮುಖ್ಯ ಶಿಕ್ಷಕರಾದ ಸುರೇಶ್ ಉದ್ಘಾಟಿಸಿದರು

ನಂತರ ಮಾತನಾಡಿ ಮೂರು ವರ್ಷಕ್ಕೊಮ್ಮೆ ಪೋಷಕರ ಪಟ್ಟಿ ಹಾಗೂ ಸೂಚನೆ ಫಲಕ ಮೂರು ಜನ ಪತನಿಮಿತ್ತ ಸದಸ್ಯರನ್ನು ಆಯ್ಕೆ ಮಾಡಲಾಗಿದೆ ಹಾಗೂ ದಾಖಲಾತಿಗಳು ಸಂಭವಿಸಿದಂತೆ ಶಾಲಾ ಭೌತಿಕ ಸಂಪತ್ಮೂಲ ರಕ್ಷಣೆ ಶಿಕ್ಷಕರ ಸಹಕಾ ರಾ ದಾನಿಗಳಿಂದ ದೀನಿಗೆ ಸಹಕಾರ ಸಾಮಾನ್ಯ ಕರ್ತವ್ಯ ನಿರ್ವಹಣೆ ಗ್ರಾಮೀಣ ಸಮಿತಿಯ ಮೌಲ್ಯ ಶಿಕ್ಷಣದ ಬಗ್ಗೆ ಸಮುದಾ ಪಾಲ್ಗೊಳ್ಳುವಿಕೆ ಬಗ್ಗೆ ಅರಿವು ಸಭೆಯಲ್ಲಿ ತಿಳಿಸಿದರು ಶಾಲೆಯ ಅಭಿವೃದ್ಧಿಗಾಗಿ ಕಾರ್ಯ ಮತ್ತು ನಿರ್ವಹಣೆ ಅಗತ್ಯ

ಗ್ರಾಮೀಣ ಶಾಲಾ ಮಕ್ಕಳಿಗೆ ಸಮಿತಿ ಪ್ರಾರಂಭಿಸಲಾಯಿತು ಶಾಲಾ ಅಭಿವೃದ್ಧಿಗಾಗಿ ಪೋಷಕರು ಪಾತ್ರ ಎಸ್ ಡಿ ಎಂ ಸಿ ಸಮಿತಿ ಭಾಗ ತುಂಬಾ ಸತ್ಯ ಹಾಗೂ ಶಾಲೆಯ ಮುಖ್ಯ ಶಿಕ್ಷಕರು ಮತ್ತು ಎಸ್ ಡಿ ಎಂ ಸಿ ಸಂಘಟನೆ ತುಂಬಾ ಅನಿವಾರ್ಯವಾಗಿದೆ ಎಂದು ತಿಳಿಸಿದರು ನಂತರ ಶಾಲೆ ಮುಖ್ಯ ಶಿಕ್ಷಕರಾದ ರಾಜೇಶ್ವರಿ ಮಾತನಾಡಿ ಎಸ್ ಡಿ ಎಂ ಸಿ ತರಬೇತಿ ಒಂದು ಮೇಲುಸ್ತವಾರಿ ಸಮಿತಿ ಹಾಗೂ ಮುನ್ನಡಿ ಹಾಗೂ ದಾಖಲಾತಿ ಬಗ್ಗೆ ಪೋಷಕರು ಪ್ರತಿನಿಧಿಗಳು ಶಾಲಾ ಅಭಿವೃದ್ಧಿ ಅನುದಾನದ ಬಗ್ಗೆ ದುರಸ್ತಿ ನಿರ್ವಹಣೆ ಮೂಲ ಶಿಕ್ಷಣ ಬಗ್ಗೆ ತಿಳಿಸಿದರು ಕಾರ್ಯಕ್ರಮದಲ್ಲಿ

ಪ್ರಾಂಶುಪಾಲರಾದ ಭವಾನಿ ಜಿ ಉಪ ಪ್ರಾಂಶುಪಾಲರಾದ ಗೀತಾ ಎಸ್ ಡಿ ಎಂ ಸಿ ಅಧ್ಯಕ್ಷರಾದ ರಘು ಶುಭ ಸಿಆರ ಪಿ ಮಹಮದ್ ಫಾರೂಕ್ ಮುಖ್ಯ ಶಿಕ್ಷಕರಾದ ಮಹೇಶ್ ಉರ್ದು ಶಾಲೆಯ ಮುಖ್ಯ ಶಿಕ್ಷಕರು ರಿಜ್ವಾನ ಬಾನು ಸಾಹಿತಿ ಶಿಕ್ಷಕರಾದ ಡಾ ಮಧು ಪ್ರಸಾದ್ ನರಸಿಂಹಯ್ ಮಮತಾ ಮಂಜುಳಾ ಹಾಗೂ ವಿವಿಧ ಶಾಲೆಯ ಎಸ್ ಡಿ ಎಂ ಸಿ ಸದಸ್ಯರು ಸಭೆಯಲ್ಲಿ ಹಾಜರಿದ್ದರು

# ಮಯಾಂಕ್ ಸ್ವಾಮಿ ಹುಟ್ಟು ಹಬ್ಬ ಆಚರಣೆ



**ಮಲ್ಲಮ್ಮನುಡಿವಾರ್ತೆ ಹುಮನಾಬಾದ**

ತಾಲ್ಲೂಕಿನ ಮೋಳಕೇರಾ ಗ್ರಾಮದಲ್ಲಿ ವರ್ಷಾರಾಣಿ, ಷಣ್ಮುಖಯ್ಯರವರ ಸುಪುತ್ರ ಮಯಾಂಕ್ ಸ್ವಾಮಿಯವರ ಹುಟ್ಟುಹಬ್ಬವನ್ನು ಹೆಣ್ಣುಮಕ್ಕಳು ಕುಂಕುಮ ಹಚ್ಚಿ ಹಾರ ಹಾಕಿ ಆರತಿ ಮಾಡಿದ ನಂತರ ಕೇಕ್ ಕತ್ತರಿಸುವ ಮೂಲಕ ಹುಟ್ಟು ಹಬ್ಬವನ್ನು ಆಚರಿಸಿದರು. ಈ ಸಂದರ್ಭದಲ್ಲಿ ಅಜ್ಜಿ ಸುಭದ್ರಬಾಯಿ ಬಂಡೆನೂರ್ ರವರು ಮಾತನಾಡಿ, ಮಕ್ಕಳು ಯಾವುದೇ ಕಾರಣಕ್ಕೂ ಮೊಬೈಲ್ ಗೀಳಿಗೆ ಒಳಗಾಗಬಾರದು. ಮೊಬೈಲ್ ಬಿಟ್ಟು, ಪುಸ್ತಕ ಹಿಡಿದು ಜ್ಞಾನಮಟ್ಟ ಹೆಚ್ಚಿಸಿಕೊಳ್ಳಬೇಕು ಎಂದರು. ಉತ್ತಮ ಶಿಕ್ಷಣ ಪಡೆದು ತಂದೆ ತಾಯಿಯ ಆಸೆ ಪೂರೈಸಬೇಕು. ಹೆತ್ತವರು, ಶಿಕ್ಷಣ ನೀಡಿದ ಗುರುಗಳು, ಕಲಿತ ಶಾಲೆಗೆ ಕೀರ್ತಿ ತರಬೇಕು' ಎಂದು ತಿಳಿಸಿದರು. ಹಾಗೂ ಆ ತಾಯಿ ಚಾಮುಂಡೇಶ್ವರಿ ಆಯಸ್ಸು ಆರೋಗ್ಯ ಕೊಟ್ಟು ಕಾಪಾಡಲಿ,

ನೀನು ಮಾಡುವ ಕೆಲಸದಲ್ಲಿ ಯಶಸ್ಸು ನಿನ್ನದಾಗಲಿ, ಹಾಗೂ ನೀನು ಕಷ್ಟಪಟ್ಟು ಅಭ್ಯಾಸ ಮಾಡಿ ಉನ್ನತಸ್ಥಾನಕ್ಕೇರಿ ಮುಂದೆ ಬರಬೇಕು, ಯಾವಾಗಲೂ ನೀನು ನಗುನಗುತ್ತ ಸಂತೋಷವಾಗಿರಬೇಕೆಂದು ಮೊಮ್ಮಗನಾದ ಮಯಾಂಕಗೆ ಸುಭದ್ರಬಾಯಿ ಬಂಡೆನೂರ ಕಿವಿ ಮಾತು ಹೇಳಿದರು. ವಿಜಯಲಕ್ಷ್ಮೀ ಬಂಡೆನೂರ್, ಸುರೇಖಾ ಬಂಡೆನೂರ, ಶ್ರಾವಣಿ ಬಂಡೆನೂರ್ ಹಾಗೂ ಉಪಸ್ಥಿತರಿದ್ದರು.

# ಸಾರ್ವಜನಿಕರು, ಸಂಘ ಸಂಸ್ಥೆಗಳೊಂದಿಗೆ ಜಿಲ್ಲಾಡಳಿತ ಸಂವಹನ ಕೊರತೆ: ಭೀಮುನಾಯಕ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಸಾರ್ವಜನಿಕರೊಂದಿಗೆ ಜಿಲ್ಲಾಡಳಿತ ಸಂಪರ್ಕ, ಸಂವಹನ ಇಲ್ಲವಾಗಿದ್ದು, ಜನರು ಮತ್ತು ಅಧಿಕಾರಿಗಳ ಮದ್ಯೆ ದೊಡ್ಡ ಕಂದಕ ಏರ್ಪಟ್ಟಿದೆ ಜಿಲ್ಲೆಯಲ್ಲಿ ಅರಾಜಕತೆ ಅಕ್ರಮಗಳಿಗೆ ದಾರಿ ಮಾಡಿಕೊಟ್ಟಿದೆ ಎಂದು ಕರವೇ ಜಿಲ್ಲಾಧ್ಯಕ್ಷ ಟಿ.ಎನ್. ಭೀಮುನಾಯಕ ಆರೋಪಿಸಿದರು.

ಜಿಲ್ಲಾ ಕಾರ್ಯಾಲಯದಲ್ಲಿ ಜರುಗಿದ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಹಿಂದೆ ಸಂಘ ಸಂಸ್ಥೆಗಳ ಸಭೆಯನ್ನು ಜಿಲ್ಲಾಡಳಿತ ನಡೆಸಿ ವಿಚಾರ ವಿನಿಮಯ ಮಾಡುವ ಮೂಲಕ ಜಿಲ್ಲೆಯ ಏಳ್ಗೆಗೆ ಕ್ರಮ ಕೈಗೊಳ್ಳಲಾಗುತ್ತಿತ್ತು. ಆದರೆ ಇತ್ತೀಚೆಗೆ ಇಂತಹ ಕೆಲಸವನ್ನು ಜಿಲ್ಲಾಡಳಿತ ಮಾಡದೇ ಇರುವುದರಿಂದ ಜಿಲ್ಲೆಯಲ್ಲಿ ಸಂವಹನ ಏರ್ಪಡದೇ ಕಂದಕ ಏರ್ಪಟ್ಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಒಂದೆಡೆ ಜಿಲ್ಲಾಡಳಿತ ನಿರ್ಲಕ್ಷ್ಯಕ್ಕೆ ಜನಪ್ರತಿನಿಧಿಗಳ ಸಾಥ್ ಎಂಬಂತೆ ಯಾವುದೇ ಸಂಘ ಸಂಸ್ಥೆಗಳಿಗೆ ಪರಿಗಣನೆಗೆ ತೆಗೆದುಕೊಳ್ಳದೇ ದಿವ್ಯ ನಿರ್ಲಕ್ಷ್ಯ ದ ಕಾರಣದಿಂದ ಸಮಸ್ಯೆ ಬಿಗಡಾಯಿಸಿದೆ ಎಂದು ಅವರು ಟೀಕಿಸಿದರು. ಅಧಿಕಾರಿಗಳ ಜನಪ್ರತಿನಿಧಿಗಳ ನಿರ್ಲಕ್ಷ್ಯ ಹಾಗೂ ಸಂವಹನದ ಕೊರತೆ ಕಾರಣ ಜಿಲ್ಲೆಯಲ್ಲಿ ಅಕ್ರಮಗಳು ಎಗ್ಗಿಲ್ಲದೇ ನಡೆಯುತ್ತಿದ್ದು, ಅದರಲ್ಲೂ ವಿಶೇಷವಾಗಿ ನಗರದಲ್ಲಿ 'ಸ್ಪಾ' ಹೆಸರಿನಲ್ಲಿ ಮಸಾಜ್ ಮಾಡುವುದಾಗಿ ಹೇಳುತ್ತಿದ್ದು, ಅಕ್ರಮವಾಗಿ ಇಸ್ಪೀಟ್ ಮುಂತಾದ ಅಕ್ರಮ ಚಟುವಟಿಕೆಗಳ ಧಂದೆ ನಡೆಯುತ್ತಿದೆ ಎಂದು ಆರೋಪಿಸಿದರು. ಸಂಬಂಧಿಸಿದ ಇಲಾಖೆಯಗಳಿಂದ ಯಾವುದೇ ಅನುಮತಿ ಇಲ್ಲದೇ ಧಂದೆ ನಡೆಯುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಜಾಣ ಕುರುಡು ಅನುಸರಿಸುತ್ತಾ ಅಕ್ರಮಕ್ಕೆ ಸಹಕಾರ ನೀಡುವುದು ನಡೆಯುತ್ತಿದೆ ಎಂದು ಆರೋಪಿಸಿದರು.

ಇದೆಲ್ಲ ಅಕ್ರಮಗಳು ತಡೆಯಲು ಜಿಲ್ಲಾಡಳಿತ ಜನರು ಹಾಗೂ ಸಂಘ ಸಂಸ್ಥೆಗಳ ಜೊತೆಗೆ ಸಂವಹನ ಹೊಂದುವುದು ಅಗತ್ಯವಾಗಿದೆ ಎಂದು ಅವರು ಹೇಳಿದರು.

**ಕರೆ:**

ಕರವೇ ಕಾರ್ಯಕರ್ತರು ಇಂತಹ ಅಕ್ರಮಗಳ ವಿರುದ್ಧ ದನಿ ಎತ್ತಬೇಕು. ಜೊತೆಗೆ ಸ್ಥಳೀಯ ಸಮಸ್ಯೆಗಳು ಮುಂದಿಟ್ಟುಕೊಂಡು ಜನರ ಸಮಸ್ಯೆಗಳ ಪರಿಹರಿಸಲು ಹೋರಾಟ ರೂಪಿಸಬೇಕೆಂದು ಸಲಹೆ ನೀಡಿದರು.

ಗ್ರಾಮೀಣ ಮಟ್ಟದಲ್ಲಿ ಸಂಘಟನೆ ಬಲಪಡಿಸಲು ಕಾರ್ಯಕರ್ತರು ಮುಂದಾಗಬೇಕು ತಾಲ್ಲೂಕು, ಗ್ರಾಮ ಮಟ್ಟದ ಸಮಸ್ಯೆಗಳನ್ನು ಜಿಲ್ಲಾ ಮಟ್ಟಕ್ಕೆ ಕೊಂಡು ತಂದು ತಾರ್ಕಿಕ ಅಂತ್ಯ ನೀಡಲು ಮುಂದಾಗಬೇಕು ಎಂದು ಕರೆ ನೀಡಿದರು. ನಾಡು ನುಡಿ ರಕ್ಷಣೆಗೆ ಸದಾ ಸಿದ್ದರಿರಬೇಕು, ಸಾಮಾಜಿಕ ಜಾಲತಾಣಗಳಲ್ಲಿ ಹೋರಾಟಗಳ ವಿಡಿಯೋ ಚಿತ್ರಗಳ ಹಂಚಿಕೊಳ್ಳುವ ಮೂಲಕ ಪ್ರಚಾರಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.

**ಕಾರ್ಯಕ್ರಮಗಳಲ್ಲಿ ಭಾಗಿಯಾಗಿ:**

ಮುಂಬರುವ ಮಾರ್ಚ 29 ರಂದು ಬೆಂಗಳೂರಿನಲ್ಲಿ ಕರವೇ ವತಿಯಿಂದ ಕರ್ನಾಟಕ ಪದ್ಮಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ ಅಲ್ಲದೇ ಮುಂಬರುವ ಜೂನ್ 10ಕ್ಕೆ ಕರವೇ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡರ ಹುಟ್ಟುಹಬ್ಬ ಅಂಗವಾಗಿ ವಿವಿಧ ಕಾರ್ಯಕ್ರಮಗಳು ಬೆಂಗಳೂರಿನಲ್ಲಿ ಜರುಗಲಿವೆ ಇವೆಲ್ಲದರಲ್ಲಿ ಭಾಗಿಯಾಗಬೇಕು ಎಂದು ತಿಳಿಸಿದರು.

**ಪದಾಧಿಕಾರಿಗಳ ನೇಮಕ:**

ಇದೇ ಸಂದರ್ಭದಲ್ಲಿ ದಿಲಿಪ್ ಕುಮಾರ ಸೈದಾಪೂರ (ಜಿಲ್ಲಾ ಉಪಾಧ್ಯಕ್ಷ) ಶರಣಪ್ಪ ತಿಂಥಿಣಿ (ಸಂಚಾಲಕರು), ಭೀಮಾಶಂಕರ ಹತ್ತಿಕುಣಿ (ಯುವ ಘಟಕದ ಜಿಲ್ಲಾಧ್ಯಕ್ಷ), ನಿಂಗಪ್ಪ ಗುಡಗುಡಿ (ರೈತ ಘಟಕದ ಜಿಲ್ಲಾಧ್ಯಕ್ಷ) ಸೇರಿದಂತೆ ಇನ್ನಿತರ ತಾಲ್ಲೂಕು ಘಟಕಗಳು ಸೇರಿದಂತೆ ವಿವಿಧ ಸ್ಥಾನಗಳಿಗೆ ನೇಮಕ ಮಾಡಲಾಯಿತು.

ಸಭೆಯಲ್ಲಿ ಸಂತೋಷ ಕುಮಾರ ನಿರ್ಮಲಕರ್, ಮಲ್ಲು ಮಾಳಿಕೇರಿ, ಅಂಬ್ರೇಷ್ ಹತ್ತಿಮನಿ, ಅಬ್ದುಲ್ ಚಿಗಾನೂರ, ಶರಣಬಸಪ್ಪ ಯಲ್ಹೇರಿ, ವೆಂಕಟೇಶ ನಾಯಕ ಬೈರಿಮಡ್ಡಿ, ಚೆನ್ನಬಸಪ್ಪ ತಳವಾರ, ಅಂಬ್ರೇಷ್ ಕಟ್ಟಿಮನಿ, ವಿಶ್ವರಾಜ ಪಾಟೀಲ್, ಸಿದ್ದಪ್ಪ ಕ್ಯಾಸಪನಳ್ಳಿ, ಭೀಮರಾಯ ರಾಮಸಮುದ್ರ, ಅನಿಲ್ ದಾಸನಕೇರಿ, ವಿಜಯಕುಮಾರ ರಾಠೋಡ, ಬಸವರಾಜ ಜಗನ್ನಾಥ, ಅಶೋಕ ನಾಯಕ, ಹಣಮಂತ ತೇಕರಾಳ, ಸುರೇಶ ಬೆಳಗುಂದಿ, ಮಲ್ಲಿಕಾರ್ಜುನ ಕನ್ನಡಿ, ಮಹೇಶ ಠಾಣಗುಂದಿ, ಸೈದಪ್ಪ ಬಾಂಬೆ, ಸಾಗರ ಹುಲೇರಿ, ಮೌನೇಶ ಮಾಧ್ವಾರ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳ ವಿವಿಧ ಪದಾಧಿಕಾರಿಗಳು ಇದ್ದರು.

# ಜೀವನದಲ್ಲಿ ಯಶಸ್ಸು ಕಾಣಲು ಶ್ರಮ ಮುಖ್ಯ: ಗೌಡರ್





• **ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ಜೀವನದಲ್ಲಿ ಯಶಸ್ಸು ಕಾಣಲು ಮೊದಲು ಶ್ರಮಪಡಬೇಕು. ನಂತರ ತಕ್ಕ ಫಲ ದೊರೆಯುವುದು ಎಂದು ಮುದಗಲ್ ನ ಸರ್ಕಾರಿ ಪ್ರೌಢ ಶಾಲಾ ಶಿಕ್ಷಕ ಮಹಾಂತೇಶ ಗೌಡರ್ ಅಭಿಪ್ರಾಯಪಟ್ಟರು.

ಪಟ್ಟಣ ಸಮೀಪದ ಸಜ್ಜಲಗುಡ್ಡ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು ವಿದ್ಯಾರ್ಥಿ ಜೀವನ ಬಂಗಾರವಿದ್ದಂತೆ. ಅದಕ್ಕೆ ಪೂರಕವಾಗಿ ಮಕ್ಕಳು ನಿರಂತರವಾಗಿ ಅಭ್ಯಾಸ ಮಾಡಿ ಜ್ಞಾನ ಸಂಪಾದನೆ ಮಾಡಿದ್ದಲ್ಲಿ ನಿಶ್ಚಿತ ಗುರಿಯನ್ನು ಮುಟ್ಟಿ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ. ಪ್ರತಿಯೊಂದು ವಿದ್ಯಾರ್ಥಿಯು ತಾನು ಯಾರು, ಏನು ಮಾಡಬೇಕು, ಮತ್ತೆ ಏನು ಮಾಡುತ್ತಿದ್ದೇನೆ ಎಂದು ಸ್ವತಃ ತಾನೇ ಪ್ರಶ್ನೆ ಮಾಡಿಕೊಂಡು ಅಭ್ಯಾಸ ಮಾಡಿದ್ದಲ್ಲಿ 10 ನೇ ತರಗತಿಯಲ್ಲಿ ಅಗ್ರ ಶ್ರೇಣಿಯಲ್ಲಿ ಪಾಸಾಗುವುದರಲ್ಲಿ ಯಾವುದೇ ಅನುಮಾನ ಇಲ್ಲ. ಭಯ ಹಾಗೂ ಗೊಂದಲ ಮಕ್ಕಳ ಶೈಕ್ಷಣಿಕ ಹಿನ್ನಡೆಗೆ ಕಾರಣವಾಗಬಹುದು. ಆದ್ದರಿಂದ ಮಕ್ಕಳು ಹೆದರದೆ ಧೈರ್ಯವಾಗಿ ಪರೀಕ್ಷೆಯನ್ನು ಎದುರಿಸಬೇಕು ಎಂದರು. ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಸಜ್ಜಲಗುಡ್ಡದ ಶ್ರೀಗಳಾದ ದೊಡ್ಡಬಸವಾರ್ಯ ಉದ್ಘಾಟಿಸಿದರು. ಈ ವೇಳೆ ಕಳೆದ ವರ್ಷ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಯನ್ನು ಸನ್ಮಾನಿಸಿ ಗೌರವಿಸಿದರು. ಮುಖ್ಯಗುರು ಬಸವರಾಜ ಹಂದ್ರಾಳ ಸೇರಿದಂತೆ ಸಹ ಶಿಕ್ಷಕರು ಇದ್ದರು.

# ಪ್ರವಚನ, ಮಂಗಲ ತುಲಾಭಾರ ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ ಮುದಗಲ್**



ಪಟ್ಟಣದ ಕಿಲ್ಲಾದ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ 8ದಿನ ನಡೆದ ಶರಣರ ಜೀವನ ದರ್ಶನ ಪ್ರವಚನ ಮಂಗಲ ಮತ್ತು ಪೂಜ್ಯರ ತುಲಾಭಾರ ಕಾರ್ಯಕ್ರಮ ಜರುಗಿತು.

ಪ್ರತಿ ವರ್ಷದಂತೆ ಶ್ರೀ ರಾಮಲಿಂಗೇಶ್ವರ ಜಾತ್ರಾಮಹೋತ್ಸವ ಮತ್ತು ಶ್ರೀಶೈಲ ಪಾದಯಾತ್ರೆಗಳ ದಾಸೋಹ ಕಾರ್ಯಕ್ರಮ ನಿಮಿತ್ತ ಹಮ್ಮಿಕೊಂಡಿದ್ದ ಶರಣರ ಜೀವನ ದರ್ಶನ ಪ್ರವಚನ ಕೊನೆ ದಿನ ಪ್ರವಚನಕಾರರು, ನಂದವಾಡಗಿ ಕಿರಿಯ ಪೂಜ್ಯರಾದ ಡಾ. ಅಭಿನವ ಚೆನ್ನಬಸವ ಶಿವಾಚಾರ್ಯರು ತಮ್ಮ ಹಿತ ನುಡಿಗಳಲ್ಲಿ ಗುರು–ಶಿಷ್ಯರ ಸಂಬಂಧ ಪವಿತ್ರವಾದದ್ದು. ನಿಜವಾದ ಭಕ್ತಿಗೆ ಭಗವಂತ ಒಲಿಯುತ್ತಾನೆ. ಮನುಷ್ಯತನ್ನಲ್ಲಿರುವ ದುಗುಡತನ ಕಡಿಮೆ ಮಾಡಿಕೊಳ್ಳಲು ಪ್ರವಚನಗಳನ್ನ ಕೇಳಬೇಕು. ಜಾತ್ರಾ ಮಹೋತ್ಸವಗಳಿಂದ ಪರಸ್ಪರ ಮನುಷ್ಯನ ಭಾಂದವ್ಯ ಬೆಸೆಯುತ್ತದೆ. ಸಿದ್ದರಾಮ ಶರಣರ ಜೀವನದ ಚರಿತ್ರೆ ನೆರೆದ ಜನರಿಗೆ ಮನವರಿಕೆ ಮಾಡಿದರು. ಎಂಟು ದಿನದ ಪ್ರವಚನ ನನಗೆ ಆನಂದ ನೀಡಿದೆ ಎಂದು ಹೇಳಿದರು.

ಪ್ರವಚನ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಡಾ. ಸಿದ್ಧಲಿಂಗ ಮಹಾಸ್ವಾಮೀಜಿ ವಳಬಳ್ಳಾರಿ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಅಂತೂರು–ಬೆಂತೂರು ಬೂಧೀಶ್ವರ ಮಠದ ಡಾ. ರಾಜೋಟೇಶ್ವರ ಶಿವಾಚಾರ್ಯರು, ನಂದವಾಡಗಿ–ಆಳಂದ ಮಹಾಂತೇಶ್ವರ ಮಠದ ಹಿರಿಯ ಪೂಜ್ಯರಾದ ಮಹಾಂತಲಿಂಗ ಶಿವಾಚಾರ್ಯರು ಆಶೀರ್ವಚನ ನೀಡಿದರು. ಕಾರ್ಯಕ್ರಮದ ನಿರೂಪಣೆ ಶಿಕ್ಷಕ ಮಲ್ಲಿಕಾರ್ಜುನ ಗೌಡೂರು, ಅನಿಲಕುಮಾರ ಬುಶೆಟ್ಟಿ ನೆರವೇರಿಸಿದರು.

ತುಲಾಭಾರ ಕಾರ್ಯಕ್ರಮ : ಪ್ರವಚನ ವೇದಿಕೆಯಲ್ಲಿ ಇತ್ತೀಚೆಗೆ ಬಳ್ಳಾರಿ ಕಿಷ್ಕಿಂದಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದ ತ್ರಿಕಾಲ ಲಿಂಗಪೂಜಾ ನಿಷ್ಠರಾದ ವಳಬಳ್ಳಾರಿ ಸುವರ್ಣಾಗಿರಿ ವಿರಕ್ತಮಠದ ಡಾ. ಸಿದ್ಧಲಿಂಗ ಮಹಾಸ್ವಾಮೀಜಿ ಮತ್ತು ನಂದವಾಡಗಿ ಮಹಾಂತೇಶ್ವರ ಮಠ ಹಿರಿಯ ಪೂಜ್ಯರಾದ ತಪೋನಿಧಿ ಮಹಾಂತಲಿಂಗ ಶಿವಾಚಾರ್ಯರಿಗೆ ಶ್ರೀ ರಾಮಲಿಂಗೇಶ್ವರ ದೇವಸ್ಥಾನ ಸಮಿತಿ ವತಿಯಿಂದ ತುಲಾಭಾರ ಸೇವೆ ನೆರವೇರಿಸಿದರು.

ಸಂತೆಕೆಲ್ಲೂರು ಘನಮಠೇಶ್ವರ ಮಠದ ಪೂಜ್ಯರಾದ ಗುರುಬಸವ ಮಹಾಸ್ವಾಮೀಜಿ, ಸಜ್ಜಲಗುಡ್ಡದ ದೊಡ್ಡಬಸವಾರ್ಯ ತಾತನವರು, ಗವಿಸಿದ್ದೇಶ್ವರ ಶಾಖಾಮಠ ಕಡಲಬಾಳು ಮರಿಶಾಂತವೀರ ಸ್ವಾಮೀಜಿ, ತಿಮ್ಮಾಪೂರು ಕಲ್ಯಾಣಾಶ್ರಮದ ಮಹಾಂತಸ್ವಾಮೀಜಿ ಸಾಲಿಮಠ, ದೇವಸ್ಥಾನ ಸಮಿತಿ ಅಧ್ಯಕ್ಷ ಸುರೇಶಗೌಡ ಪಾಟೀಲ್ ಆದಾಪೂರು, ಲಿಂಗಪ್ಪ ಹಣಿಗಿ, ಮಹೇಶಸ್ವಾಮೀ ವಸ್ತ್ರದ್, ಶಿವಪ್ಪ ಸುಂಕದ, ಮಲ್ಲಪ್ಪ ಮಾಟೂರು, ವಿಶ್ವನಾಥದೇಶಾಯಿ, ಉದಯಕುಮಾರ ಕಮ್ಮಾರ, ಕಾಳಪ್ಪ ಬಡಿಗೇರ, ವಾಸು ಸುರಪುರ, ಚಂದ್ರಶೇಖರ ಗಂಗಾವತಿ, ದೇವೆಂದ್ರ ವಕೀಲ, ಅಮರೇಶ ಅಂಗಡಿ ಹಾಗೂ ಸಕಲ ಸದ್ಭಕ್ತರು ಇದ್ದರು.

# ಯೂಥ್ ಫೌಂಡೇಶನ್‌ಯಿಂದ ಮ್ಯಾರಥಾನ್ ಓಟ



**1 ರಿಂದ 18 ವರ್ಷದ ಸ್ಪರ್ಧಿಗಳು**
ಪ್ರಥಮ : ಸಾಗರ್
ದ್ವಿತೀಯ : ಚಂದ್ರಶೇಖರ
ತೃತೀಯ : ಚಂದ್ರಶೇಖರ್

**18 ರಿಂದ 50 ವರ್ಷದ ಸ್ಪರ್ಧಿಗಳು**
ಪ್ರಥಮ : ಎರ್ರಿಸ್ವಾಮಿ
ದ್ವಿತೀಯ : ಅಮರೇಶ್
ತೃತೀಯ : ತಿಪ್ಪೇಶ್ ಹಾಗೂ ಸಣ್ಣ ಈರಪ್ಪ.

• **ಮಲ್ಲಮ್ಮ ನುಡಿ ವಾರ್ತೆ ಕುರುಗೋಡು**

ಚುಮು ಚುಮು ಚಳಿಯ ನಡುವೆ ಶನಿವಾರ ಮುಂಜಾನೆ ರಂಗಿನ ವಾತಾವರಣ. ವಾಹನಗಳಿಂದ ಸದಾ ಗಿಜಿಗಿಡುತ್ತಿದ್ದ ಎಮ್ಮಿಗನೂರು – ಹೆಚ್. ವೀರಾಪುರ ರಸ್ತೆಯಲ್ಲಿ ಜನವೋ ಜನ. ನೆರೆದಿದ್ದವರಲ್ಲಿ ಏನೋ ಉತ್ಸಾಹ, ಉಲ್ಲಾಸ. ನಾ ಮುಂದು ತಾ ಮುಂದು ಎಂದು ಓಡುತ್ತಿದ್ದವರ ಮೈಯಿಂದ ಚಳಿಯಲ್ಲೂ ಹರಿಯುತ್ತಿದ್ದ ಬೆವರ ಹನಿಗಳು.

ಶ್ರೀ ಶರಣಬಸವೇಶ್ವರರ ಪುರಾಣ ಸುವರ್ಣ ಮಹೋತ್ಸವ ಅಂಗವಾಗಿ ಪೊಲೀಸ್ ಇಲಾಖೆ ಕುರುಗೋಡು, ಯೂಥ್ ಫೌಂಡೇಶನ್ ಹೆಚ್. ವೀರಾಪುರ ಸಹಯೋಗದಲ್ಲಿ ಗ್ರಾಮದಲಿ ಶನಿವಾರ ಆಯೋಜಿಸಿದ್ದ ಮ್ಯಾರಥಾನ್ ಓಟದ ದೃಶ್ಯಗಳಿವು.

10 ರಿಂದ 50 ವರ್ಷದವರೂ ಈ ಸ್ಪರ್ಧೆಯಲ್ಲಿ ಓಡಿದರು. ಬಿಳಿ ಬಣ್ಣದ ಟೀ ಶರ್ಟ್ ಟ್ರ್ಯಾಕ್‌ಸೂಟ್, ನಿಕ್ಕರ್–ಬನಿಯನ್ ಧರಿಸಿ ಓಡುತ್ತಿದ್ದವರು ಗ್ರಾಮದ ಜನರ ಗಮನ ಸೆಳೆದರು.

ಇವರೊಂದಿಗೆ ಸ್ಥಳೀಯ ಶಾಲಾ ವಿದ್ಯಾರ್ಥಿಗಳು, ಯುವಕರು , ಹಿರಿಯ ನಾಗರಿಕರು ಸೇರಿದಂತೆ ಸುಮಾರು 100ಕ್ಕೂ ಹೆಚ್ಚು ಸ್ಪರ್ಧಿಗಳು ಮ್ಯಾರಥಾನ್ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿ ತಮ್ಮ ಕ್ರೀಡಾ ಸ್ಫೂರ್ತಿ ಮೆರೆದರು. ಎಮ್ಮಿಗನೂರು ರಸ್ತೆಯ ಮಾರೆಮ್ಮ ದೇವಸ್ಥಾನದ ಬಳಿ ಜಡೇಶ್ ತಾತ, ಮಂಜುನಾಥಸ್ವಾಮಿ, ಎರ್ರೆಪ್ಪಗೌಡ, ಎ. ಜಡೇಶ್, ಕರಿಬಸಪ್ಪ, ಕೃಷ್ಣಮೂರ್ತಿ, ಬಾಪುರ ಮಲ್ಲಿಕಾರ್ಜುನ ಹಸಿರು ನಿಶಾನೆ ತೋರಿ ಚಾಲನೆ ನೀಡಿದರು.

ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನಪತ್ರಿಕೆ ಬಳ್ಳಾರಿ ಸೋಮವಾರ 09.03.2026 

# ಉಪವಾಸ ಆಚರಿಸಿದ ಪುಟ್ಟ ಬಾಲಕ ಸೈಯದ್ ಮೊಹಮ್ಮದ್ ಸಾಕಿಬ್ ಸೈಯದ್ ಮೊಹಮ್ಮದ್ ಸಮೀ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ಪವಿತ್ರ ರಮಜಾನ್ ಮಾಸಾಚರಣೆ ಪ್ರಯುಕ್ತ ಐದು ವರ್ಷದ ಸೈಯದ್ ಮೊಹಮ್ಮದ್ ಸಮೀ ಹಾಗೂ ಏಳು ವರ್ಷದ ಸೈಯದ್ ಮೊಹಮ್ಮದ್ ಸಾಕಿಬ್ ತಂದೆ ಸೈಯದ್ ಸಾಧಿಕ್ ಅಲಿ ರವರ ಪುಟ್ಟ ಬಾಲಕರು ಶನಿವಾರದಂದು ಮೊದಲನೆಯ ಬಾರಿಗೆ ಒಂದು ಉಪವಾಸ (ವೃತ, ರೋಜಾ) ಆಚರಿಸುವುದರ ಮೂಲಕ ಹೆಮ್ಮೆ ಮತ್ತು ಪ್ರಶಂಸೆಗೆ ಪಾತ್ರಳಾಗಿದ್ದಾರೆ.

ಈ ಪುಟ್ಟ ಬಾಲಕರು ಕಂಪ್ಲಿ ಪಟ್ಟಣದ 18ನೇ ವಾರ್ಡ್, ಮುಲ್ಲಾರ ಓಣಿ/ಸುಣಗಾರ ಓಣಿಯ ಮುಲ್ಲಾ ಮೊಹಲ್ಲಾದ ಪೇಶ್ ಇಮಾಮ್ ಹಾಜಿ ಜಿಯಾವುದ್ದಿನ್ ಸಾಹೇಬ್ ರವರ ಮೊಮ್ಮಕ್ಕಳಾಗಿದ್ದಾರೆ.

ಸೈಯದ್ ಮೊಹಮ್ಮದ್ ಸಾಕಿಬ್ ಮತ್ತು ಸೈಯದ್ ಮೊಹಮ್ಮದ್ ಸಮೀ ಎಂಬ ಪುಟ್ಟ ಬಾಲಕರು ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ರಮಜಾನ್ ತಿಂಗಳ ಕಠಿಣ ಉಪವಾಸ ವ್ರತವನ್ನು ಪೂರ್ಣಗೊಳಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾಳೆ.

ಧಾರ್ಮಿಕ ಶ್ರದ್ದೆ ಮತ್ತು ಕುಟುಂಬದ ಪ್ರೇರಣೆಯಿಂದ ಈ ಬಾಲಕಿ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಆಹಾರ ಮತ್ತು ನೀರನ್ನು ತ್ಯಜಿಸಿ ವ್ರತ ಆಚರಿಸುವ ಮೂಲಕ ಧೈರ್ಯ ಪ್ರದರ್ಶಿಸಿದ್ದಾಳೆ.





ಬೆಳಗಿನ ಜಾವ 5–30 ರಿಂದ ಸಂಜೆ 6–30ರ ವರೆಗೆ ಸುಮಾರು 13 ತಾಸಿನ ಉಪವಾಸ ಆಚರಣೆಯನ್ನು ಮಾಡಿ ಧಾರ್ಮಿಕ ಶ್ರದ್ಧೆ ಮತ್ತು ಕುಟುಂಬದ ಪ್ರೇರಣೆಯಿಂದ ಈ ಬಾಲಕರು ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಆಹಾರ ಮತ್ತು ನೀರನ್ನು ತ್ಯಜಿಸಿ ವ್ರತ ಆಚರಿಸುವ ಮೂಲಕ ಧೈರ್ಯ ಪ್ರದರ್ಶಿಸಿದ್ದಾಳೆ.

ಬೆಳಗಿನ ಜಾವ 5–30 ರಿಂದ ಸಂಜೆ 6–30ರ ವರೆಗೆ ಸುಮಾರು 13 ತಾಸಿನ ಉಪವಾಸ ಆಚರಣೆಯನ್ನು ಮೊದಲನೆಯ ಬಾರಿಗೆ ಆಚರಿಸಿ ತನ್ನ ಮೊದಲನೇ ಉಪವಾಸ ರೋಜಾ ಪೂರ್ಣಗೊಳಿಸಿರುತ್ತಾಳೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಇವರು ತೋರಿದ ಶಿಸ್ತು ಮತ್ತು ಭಕ್ತಿಯನ್ನು ಕಂಡು ಸ್ಥಳೀಯ ಸಮುದಾಯದಲ್ಲಿ ಅವರ ಮನೆಯ ಎಲ್ಲಾ ಕುಟುಂಬದವರು, ಬಂಧುಗಳು ಸೇರಿದಂತೆ ಅನೇಕರು ಶ್ಲಾಘಿಸಿದ್ದಾರೆ.

# ದೇವಸಮುದ್ರ ಗ್ರಾಮದಲ್ಲಿ ಬಲಕುಂದೆಪ್ಪ ತಾತನವರ ಸಂಭ್ರಮದ ಮಹಾರಥೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ತಾಲ್ಲೂಕಿನ ದೇವಸಮುದ್ರ ಗ್ರಾಮದಲ್ಲಿರುವ ಶ್ರೀ ಬಲಕುಂದೆಪ್ಪ ತಾತನವರ ಜಾತ್ರಮಹೋತ್ಸವದ ಅಂಗವಾಗಿ ಇಂದು ಸಂಜೆ ತಾತನವರ 12ನೇ ವರ್ಷದ ಮಹಾರಥೋತ್ಸವವು ಕಂಪ್ಲಿ ಭಾಗದಲ್ಲಿ ಹಾಲುಮತ ಸಮಾಜದವರ ಅತ್ಯಂತ ದೊಡ್ಡ ಜಾತ್ರಾಮಹೋತ್ಸವ ಅತ್ಯಂತ ವಿಜೃಂಭಣೆಯಿಂದ ಇಂದು ಶನಿವಾರ ಸಂಜೆ ಜರುಗಿತು.

ಜಾತ್ರಾ ಮಹೋತ್ಸವದ ಅಂಗವಾಗಿ ಹಾಲುಮತ ಸಮಾಜದ ಸದ್ಭಕ್ತರ ಮನೆಗಳಿಂದ ಮೆರವಣಿಗೆಯಲ್ಲಿ ಕುಂಭಗಳನ್ನು ತಂದು ತಾತನವರ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿದ ನಂತರ ಹಾಗೂ ಗ್ರಾಮದ ವಿವಿಧ ಸಮಾಜಗಳ ಮುಖಂಡರು,

ಯುವಕರು ವೈವಿದ್ಯಮಯ ಭಾರಿ ಗಾತ್ರದ ಹೂವಿನ ಹಾರಗಳನ್ನು ಮಂಗಳ ವಾದ್ಯಗಳ ಜೊತೆಗೆ ದೇವಸ್ಥಾನಕ್ಕೆ ತಂದು ರಥೋತ್ಸವಕ್ಕೆ ಕಟ್ಟಿದ ನಂತರ ದೇವಸ್ಥಾನದ ಪೂಜಾರಿಯ ಅಣತಿಯಂತೆ ರಥೋತ್ಸವ ಆರಂಭಗೊಂಡಿತು. ರಥೋತ್ಸವಕ್ಕೆ ಸೇರಿದ್ದ ಮಹಿಳೆಯರು, ಮಕ್ಕಳು ಮತ್ತು ಸಾರ್ವಜನಿಕರು ಹೂ ಹಣ್ಣು ಕಾಯಿ ಎಸೆದು ತಮ್ಮ ಹರಕೆಯನ್ನು ತೀರಿಸಿದರು. ತಾತನ ಹಲವಾರು ಭಕ್ತರು ಮಡಿಯಿಂದ ತಾತನಿಗೆ ದೀಡ್‌ನಮಸ್ಕಾರ ಹಾಕುವ ದೀಡ್‌ನಮಸ್ಕಾರ ಹಾಕುವ ಮೂಲಕ ತಮ್ಮ ಹರಕೆಯನ್ನು ತೀರಿಸಿದರು.



ರಥೋತ್ಸವದ ನಿಮಿತ್ತವಾಗಿ ತಾತನ ಮಠದಲ್ಲಿ ಏರ್ಪಡಿಸಿದ್ದ ಶ್ರೀ ಬಲಕುಂದೆಪ್ಪ ತಾತನವರ ಪುರಾಣ ಪ್ರವಚನವು ಇಂದು ಮಹಾಮಂಗಲ ಗೊಂಡಿತು.


ರಥೋತ್ಸವದಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಕಂಪ್ಲಿ ಪೊಲೀಸರು ವ್ಯಾಪಕ ಬಂದೋಬಸ್ತ್ ಏರ್ಪಡಿಸಿದ್ದರು. ಕಾರ್ಯಕ್ರಮದಲ್ಲಿ ಗ್ರಾಮದ ದೇವಸ್ಥಾನದ ಶಿವಯ್ಯತಾತ, ಗ್ರಾ.ಪಂ.ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಮುಖಂಡರು, ಗ್ರಾಮ ಪಂಚಾಯತಿ ಸದಸ್ಯರು ಸೇರಿದಂತೆ ಗ್ರಾಮದ ವಿವಿಧ ಸಮಾಜಗಳ ಮುಖಂಡರು, ವಿವಿಧ ಸಂಘ–ಸಂಸ್ಥೆಗಳ ಮುಖಂಡರು ಭಾಗವಹಿಸಿದ್ದರು.

# ಭವ್ಯವಾಗಿ ನಡೆದ ಶ್ರೀ ಶಂಕರಲಿಂಗೇಶ್ವರ ರಥೋತ್ಸವ

ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಆಂಧ್ರ– ಕರ್ನಾಟಕ ಗಡಿ ಭಾಗದಲ್ಲಿರುವ ಗುರುಮಠಕಲ್ ತಾಲೂಕಿನ ಇಡ್ಲೂರು ಗ್ರಾಮದ ಪ್ರಸಿದ್ಧ ಶ್ರೀ ಶಂಕರಲಿಂಗೇಶ್ವರ ಜಾತ್ರೆಯ ಅಂಗವಾಗಿ ಭಾನುವಾರ ಭಕ್ತಿಭಾವದ ನಡುವೆ ಭವ್ಯ ರಥೋತ್ಸವ ನಡೆಯಿತು. ಸಾವಿರಾರು ಭಕ್ತರು ಭಾಗವಹಿಸಿ "ಜೈ ಶಂಕರಲಿಂಗೇಶ್ವರ" ಎಂಬ ಜಯಘೋಷಗಳ ನಡುವೆ ತೇರು ಎಳೆಯುವ ಮೂಲಕ ತಮ್ಮ ಭಕ್ತಿಯನ್ನು ವ್ಯಕ್ತಪಡಿಸಿದರು.

ಪ್ರತಿ ವರ್ಷವೂ ಸಂಪ್ರದಾಯದಂತೆ ನಡೆಯುವ ಈ ಜಾತ್ರೆ ಸುತ್ತಮುತ್ತಲಿನ ಹಳ್ಳಿಗಳಲ್ಲಿಯೇ ದೊಡ್ಡ ಜಾತ್ರೆಗಳಲ್ಲಿ ಒಂದಾಗಿ ಪ್ರಸಿದ್ಧಿ ಪಡೆದಿದೆ. ಹೂವು ಮತ್ತು ತಳಿರು ತೋರಣಗಳಿಂದ ಅಲಂಕರಿಸಲ್ಪಟ್ಟ ಭವ್ಯ ತೇರು ಜಾತ್ರೆಯ ಪ್ರಮುಖ ಆಕರ್ಷಣೆಯಾಗಿತ್ತು.



ಭಕ್ತರು ಹೂವು–ಹಣ್ಣುಗಳನ್ನು ಅರ್ಪಿಸುತ್ತಾ ಭಕ್ತಿಭಾವದೊಂದಿಗೆ ರಥೋತ್ಸವದಲ್ಲಿ ಪಾಲ್ಗೊಂಡರು.

ಇದಕ್ಕೂ ಮೊದಲು ಬೆಳಿಗ್ಗೆ ದೇವಾಲಯದಲ್ಲಿ ಶ್ರೀ ಶಂಕರಲಿಂಗೇಶ್ವರರಿಗೆ ವಿಶೇಷ ಪೂಜೆ ಹಾಗೂ ಅಭಿಷೇಕ ನೆರವೇರಿಸಲಾಯಿತು. ನಂತರ ಅರ್ಚಕರು ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ದೇವಾಲಯದಿಂದ ಸುಮಾರು 400 ಮೀಟರ್ ದೂರದಲ್ಲಿರುವ ಬಸವಣ್ಣನ ಗುಡಿಯವರೆಗೆ ತೇ–ೇರು ಸಾಗಿದ್ದು, ಬಳಿಕ ಮತ್ತೆ ದೇವಾಲಯದತ್ತ ಹಿಂತಿರುಗಿತು.

ಈ ಜಾತ್ರೆಗೆ ಯಾದಗಿರಿ ಜಿಲ್ಲೆಯಷ್ಟೇ ಅಲ್ಲದೆ ನೆರೆಯ ಜಿಲ್ಲೆಗಳು ಹಾಗೂ ಆಂಧ್ರ, ತೆಲಂಗಾಣ ರಾಜ್ಯಗಳಿಂದಲೂ ಭಕ್ತರು ಆಗಮಿಸುತ್ತಾರೆ. ವಿಶೇಷವಾಗಿ ಮಹಾನಗರಗಳಲ್ಲಿ ಹೈದರಾಬಾದ್ ಹಾಗೂ ಬೆಂಗಳೂರುಗಳಲ್ಲಿ ಕೆಲಸಕೆಮಾಡುವ ಗ್ರಾಮದ ಯುವಕರು ಪ್ರತಿ ವರ್ಷ ತೇರಿನ ಹೂವಿನ ಸೇವೆ ನೀಡುತ್ತಾರೆ, ಭಕ್ತರು ತಮ್ಮ ಬೆಳೆಗಳಲ್ಲಿ ಒಂದು ಭಾಗವನ್ನು ದಾಸೋಹಕ್ಕೆ ನೀಡುವ ಮೂಲಕ ಸೇವೆಯಲ್ಲಿ ಭಾಗಿಯಾಗುತ್ತಾರೆ. ಭಕ್ತರಿಗೆ ದೇವಾಲಯದ ವತಿಯಿಂದ ಅನ್ನದಾಸೋಹ ವ್ಯವಸ್ಥೆ ಮಾಡಲಾಗಿದ್ದು, ಭಕ್ತರು ಸೇವೆಯಲ್ಲಿ ಭಾಗಿಯಾಗಿದ್ದಾರೆ.

ಜಾತ್ರೆಯ ಅಂಗವಾಗಿ ಎತ್ತಿನ ಜಾತ್ರೆ, ಸಿಹಿತಿಂಡಿ ಅಂಗಡಿಗಳು, ಬಳೆ, ಮಕ್ಕಳ ಆಟಿಕೆಗಳು ಸೇರಿದಂತೆ ವಿವಿಧ ಮಳಿಗೆಗಳು ಮತ್ತು ಜೋಕಾಲಿಗಳು ಜಾತ್ರೆಯ ಕಳೆಗಟ್ಟಿಸಿದವು. ಹಳ್ಳದ ದಂಡೆಯ ಮೇಲೆ ಪ್ರಕೃತಿಯ ಮಧ್ಯೆ ನೆಲೆಸಿರುವ ಪುರಾತನ ಶ್ರೀ ಶಂಕರಲಿಂಗೇಶ್ವರ ದೇವಾಲಯದಲ್ಲಿ ಇಂದು ನಡೆದ ರಥೋತ್ಸವ ಭಕ್ತರಲ್ಲಿ ವಿಶೇಷ ಆಧ್ಯಾತ್ಮಿಕ ಭಾವನೆ ಮೂಡಿಸಿತು.

# ಸಂಘ ಸಂಸ್ಥೆಗಳ ಮಹಾ ಸಂಸ್ಥೆ ವತಿಯಿಂದ ಹೋಳಿ ರಂಗ ಪಂಚಮಿ ಆಚರಣೆ



ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:

ಉತ್ತರ ಕರ್ನಾಟಕ ಸಂಘ ಸಂಸ್ಥೆಗಳ ಮಹಾ ಸಂಸ್ಥೆಯ ವತಿಯಿಂದ ಬೆಂಗಳೂರಿನ ರಾಮ ಮಂದಿರ ಮೈದಾನದಲ್ಲಿ ಅದ್ದೂರಿ ಹೋಳಿ ರಂಗ ಪಂಚಮಿ ಕಾರ್ಯಕ್ರಮ ಆಚರಿಸಲಾಯಿತು.ಕಾಮದಹನ ಮಾಡಿ ಬಣ್ಣದೋಕುಳಿ ಆಡುವ ಮೂಲಕ ಮಹಿಳೆಯರು ಮಕ್ಕಳು ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಮಹಾ ಸಂಸ್ಥೆಯ ಅಧ್ಯಕ್ಷ ಶಿವಕುಮಾರ ಮೇಟಿ ಮಾತನಾಡಿ, ನಮ್ಮ ಮಹಾ ಸಂಸ್ಥೆ ವತಿಯಿಂದ ಪ್ರತಿ ವರ್ಷ ಬೆಂಗಳೂರಿನಲ್ಲಿ ಕಾಮ ದಹನ ಮಾಡುವ ಮೂಲಕ ಹೋಳಿ ಆಚರಿಸಿ, ನಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗುವ ಕೆಲಸ ಮಾಡುತ್ತಿದ್ದೇವೆ. ಉತ್ತರ ಕರ್ನಾಟಕ ಭಾಗದಲ್ಲಿ ಕುಳ್ಳು ಕಟ್ಟಿಗೆ ಕದ್ದು ಕಾಮಣ್ಣನ ಸುಡುವುದೇ ಸಂಭ್ರಮವಾಗಿರುತ್ತದೆ. ಬೆಂಗಳೂರಿನಲ್ಲಿರುವ ನಾವೆಲ್ಲ ಇಲ್ಲಿಯೂ ನಮ್ಮ ಭಾಗದ ಸಂಸ್ಕೃತಿ ಸಂಭ್ರಮ ಉಳಿಸಿಕೊಂಡು ಹೋಗೋಣ ಎಂದರು.

ಮಹಾ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶಂಕರ ಪಾಗೋಜಿ ಮಾತನಾಡಿ ಉತ್ತರ ಕರ್ನಾಟಕ ಭಾಗದ ಸಾಂಸ್ಕೃತಿಕ ಹಬ್ಬಗಳಾದ ರಂಗ ಪಂಚಮಿ, ಬನ್ನಿ ಹಬ್ಬ, ರೊಟ್ಟಿ ಪಂಚಮಿ ಹಬ್ಬಗಳನ್ನು ಆಚರಿಸುತ್ತ ಬೆಂಗಳೂರಿನಲ್ಲಿಯೂ ನಮ್ಮ ಸಂಸ್ಕೃತಿಯನ್ನು ಜೀವಂತವಾಗಿಡುವ ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಮುಂದಿನ ಪೀಳಿಗೆಗೆ ನಮ್ಮ ಭಾಗದ ಸಂಸ್ಕೃತಿ ಹಾಗೂ ಹಬ್ಬಗಳನ್ನು ಪರಿಚಯಿಸುವ ಕೆಲಸ ಮಾಡಲಾಗುತ್ತಿದೆ ಎಂದು ಹೇಳಿದರು.

ಚಲನಚಿತ್ರ ನಟಿ ಶ್ರೀದೇವಿ ಮೆಳ್ಳಿಗಟ್ಟಿ ಮಾತನಾಡಿ, ನಾವೆಲ್ಲರೂ ಒಗ್ಗಟ್ಟನ್ನು ತೋರಿಸಲು ಸೇರಿರುವುದು ಸಂತಸದ ವಿಷಯ, ಎಲ್ಲಿ ಸಾಧ್ಯವೋ ಅಲ್ಲಿ ನಮ್ಮ ಸಂಸ್ಕೃತಿಯನ್ನು ಪ್ರದರ್ಶನ ಮಾಡಬೇಕು. ನಮ್ಮ ಸಂಸ್ಕೃತಿ ಉಳಿಸಿಕೊಂಡು ಹೋಗುವಲ್ಲಿ ಮಹಿಳೆಯರ ಪಾತ್ರ ದೊಡ್ಡದಿದೆ. ಹಬ್ಬ ಹರಿದಿನಗಳ ಆಚರಣೆ ಮಾಡುವುದರಿಂದ ನಮ್ಮ ಸಂಬಂಧಗಳು ಗಟ್ಟಿಯಾಗುತ್ತವೆ ಎಂದು ಹೇಳಿದರು. ಮಹಾ ಸಂಸ್ಥೆಯ ಸಂಘಟನಾ ಕಾರ್ಯದರ್ಶಿ ಎಸ್. ಜೆ. ಮೇಟಿ ಮಾತನಾಡಿ, ಬೆಂಗಳೂರಿನಲ್ಲಿ ಸುಮಾರು ಇಪ್ಪತ್ತೈದು ಲಕ್ಷ ಜನ ಉತ್ತರ ಕರ್ನಾಟಕ ಭಾಗದ ಜನರಿದ್ದೇವೆ. ನಾವು ಒಗ್ಗಟ್ಟಿನಿಂದ ಇದ್ದರೆ ನಮ್ಮ ಭಾಗದ ಅಭಿವೃದ್ಧಿ ಮಾಡಲು ಸಾಧ್ಯವಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಬಸಯ್ಯ ನಂದಿಕೋಲ್, ಖಜಾಂಚಿ ಜಯಪ್ರಕಾಶ ಜಾಲಿಗಿಡದ, ಪದಾಧಿಕಾರಿಗಳಾದ ಶಾಂತೇಶ್ ಹಿರೇಮಠ, ದೇವರಾಜ ಕವಳಿಕಾಯಿ, ಅಶೋಕ ನೀಲೂರ, ಯಲಹಂಕದ ನಮ್ಮ ಉತ್ತರ ಕರ್ನಾಟಕ ಸಂಘದ ಅಧ್ಯಕ್ಷ ಶರಣಪ್ಪ ಸಾಹುಕಾರ, ಶಿವಕುಮಾರ ಸರಶೆಟ್ಟಿ, ವೀರೇಶ್ ಹೋಟಿ ಸೇರಿದಂತೆ, ಬೆಂಗಳೂರಿನಲ್ಲಿರುವ ಉತ್ತರ ಕರ್ನಾಟಕ ಸಂಘಗಗಳ ಪದಾಧಿಕಾರಿಗಳು ಮಹಿಳೆಯರು ಮಕ್ಕಳು ಹಾಜರಿದ್ದರು.

# ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ರಾತ್ರಿ ತರಗತಿಗೆ ಶಾಸಕ ಶರಣಗೌಡ ಕಂದಕೂರ್ ಭೇಟಿ



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಿದ್ಧಗೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಗುರುಮಠಕಲ್ ಕ್ಷೇತ್ರದ ಶಾಸಕ ಶರಣಗೌಡ ಕಂದಕೂರ್ ಅವರು ಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆಯುತ್ತಿರುವ ರಾತ್ರಿ ವಿಶೇಷ ತರಗತಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿ ಸಂವಾದ ನಡೆಸಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಅಧ್ಯಯನದ ಪ್ರಗತಿಯನ್ನು ವಿಚಾರಿಸಿದ ಅವರು, ಆತ್ಮವಿಶ್ವಾಸ ಹಾಗೂ ನಿರಂತರ ಪರಿಶ್ರಮದಿಂದ ಪರೀಕ್ಷೆಯನ್ನು ಎದುರಿಸಿ ಉತ್ತಮ ಫಲಿತಾಂಶ ಸಾಧಿಸಬೇಕು ಎಂದು ಕರೆ ನೀಡಿದರು. "ಶ್ರಮಪಟ್ಟು ಓದಿದರೆ ಯಾವುದೇ ಗುರಿ ಸಾಧಿಸುವುದು ಅಸಾಧ್ಯವಲ್ಲ. ನಿಮ್ಮ ಯಶಸ್ಸೇ ಕುಟುಂಬದ ಹೆಮ್ಮೆ ಮಾತ್ರವಲ್ಲ, ಸಮಾಜದ ಗೌರವವನ್ನೂ ಹೆಚ್ಚಿಸುತ್ತದೆ" ಎಂದು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶ ನೀಡಿದರು.

ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಉತ್ತಮಗೊಳಿಸುವ ಉದ್ದೇಶದಿಂದ ಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ರಾತ್ರಿ ವೇಳೆ ವಿಶೇಷ ತರಗತಿಗಳನ್ನು ಆಯೋಜಿಸಲಾಗಿದೆ. ಶಿಕ್ಷಕರು ತಮ್ಮ ವೈಯಕ್ತಿಕ ಸಮಯವನ್ನೇ ಮೀಸಲಿಟ್ಟು ವಿದ್ಯಾರ್ಥಿಗಳಿಗೆ ಪಾಠಗಳನ್ನು ಪುನರವಲೋಕನ ಮಾಡಿಸಿ, ಕಠಿಣ ವಿಷಯಗಳನ್ನು ಸರಳವಾಗಿ ವಿವರಿಸುತ್ತಿದ್ದಾರೆ. ಜೊತೆಗೆ ಮಾದರಿ ಪ್ರಶ್ನೆಪತ್ರಿಕೆಗಳ ಮೂಲಕ ಅಭ್ಯಾಸ ಮಾಡಿಸಿ ಪರೀ–ಕ್ಷೆಗೆ ಸಮರ್ಪಕವಾಗಿ ಸಿದ್ಧಗೊಳಿಸುವ ಕಾರ್ಯವನ್ನು ಕೈಗೊಂಡಿದ್ದಾರೆ.

ಈ ಕುರಿತು ಖಖಐಆ ನೋಡಲ್ ಅಧಿಕಾರಿ ಅವರು ಮಾತನಾಡಿ, ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಉತ್ತಮಗೊಳಿಸುವ ಉದ್ದೇಶದಿಂದ ಹಲವಾರು ಶಾಲೆಗಳಲ್ಲಿ ರಾತ್ರಿ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ. ವಿದ್ಯಾರ್ಥಿಗಳು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಉತ್ತಮ ಸಾಧನೆ ಮಾಡಬೇಕು. ಶಿಕ್ಷಕರ ಸಮರ್ಪಣೆ ಹಾಗೂ ಪೋಷಕರ ಸಹಕಾರದಿಂದ ಉತ್ತಮ ಫಲಿತಾಂಶ ಸಾಧ್ಯವಾಗುತ್ತದೆ ಎಂದು ಹೇಳಿದರು.

ಶಾಲೆಯಲ್ಲಿ ಜಾರಿಯಲ್ಲಿರುವ ಈ ರಾತ್ರಿ ಶಾಲೆ ಯೋಜನೆ ವಿದ್ಯಾರ್ಥಿಗಳಲ್ಲಿ ಹೊಸ ಆತ್ಮವಿಶ್ವಾಸ ಮೂಡಿಸಿದ್ದು, ಪರೀಕ್ಷೆಗೆ ತಯಾರಾಗುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಶಿಕ್ಷಕರ ಸಮರ್ಪಣೆ ಹಾಗೂ ವಿದ್ಯಾರ್ಥಿಗಳ ಪರಿಶ್ರಮದಿಂದ ಈ ಬಾರಿ ಶಾಲೆ ಉತ್ತಮ ಫಲಿತಾಂಶ ಸಾಧಿಸುವ ನಿರೀಕ್ಷೆ ವ್ಯಕ್ತವಾಗಿದೆ.

ರಾತ್ರಿ ತರಗತಿಗೆ ಭೇಟಿ ನೀಡಿದ ಶಾಸಕ ಶರಣಗೌಡ ಕಂದಕೂರ್ ಅವರು ಶಿಕ್ಷಕರ ಸಮರ್ಪಣಾ ಮನೋಭಾವವನ್ನು ಮೆಚ್ಚಿ, ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣಕ್ಕಾಗಿ ಕೈಗೊಂಡಿರುವ ಈ ಪ್ರಯತ್ನ ಶ್ಲಾಘನೀಯವಾಗಿದೆ ಎಂದು ಹೇಳಿದರು. ಶಿಕ್ಷಣ ಕ್ಷೇತ್ರಕ್ಕೆ ಅಗತ್ಯವಿರುವ ಎಲ್ಲ ರೀತಿಯ ಸಹಕಾರವನ್ನು ನೀಡುವುದಾಗಿ ಅವರು ಭರವಸೆ ನೀಡಿದರು. ವಿದ್ಯಾರ್ಥಿಗಳು ಸಹ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಹೆಚ್ಚಿನ ಪರಿಶ್ರಮದಿಂದ ಅಧ್ಯಯನ ಮಾಡಿ ಉತ್ತಮ ಸಾಧನೆ ಮಾಡಲು ಸಜ್ಜಾಗಿದ್ದಾರೆ.

# ಶ್ರೀಶರಣಬಸವೇಶ್ವರ ಮಹಾರಥೋತ್ಸವ



ಮಲ್ಲಮ್ಮನುಡಿ ವಾರ್ತೆ ಕುಕನೂರ

ತಾಲೂಕಿನ ಕೊನಾಪುರ ಗ್ರಾಮದಲ್ಲಿರುವ ಶ್ರೀ ಶರಣಬಸವೇಶ್ವರ ಮಹಾ ರಥೋತ್ಸವ ಭಾನುವಾರ ಸಂಜೆ ಅಪಾರ ಭಕ್ತ ಸಮೂಹದ ನಡುವೆ ಸಂಪನ್ನಗೊಂಡಿತು. ಜಾತ್ರಾ ಮಹೋತ್ಸವದ ಪ್ರಯುಕ್ತ ಗ್ರಾಮದಲ್ಲಿ ಶನಿವಾರ ಮಹಿಳೆಯರಿಂದ ಕುಂಭಮೇಳ ಜರುಗಿದ್ದು ಗ್ರಾಮದ ಕಲಾವಿದರು ಡೊಳ್ಳು , ಮಜಲುಗಳೊಂದಿಗೆ ವಿಜ್ಜಂಬನೆಯಿಂದ ಜಾತ್ರಾ ಮಹೋತ್ಸವ ಆಯೋಜಿಸಲಾಯಿತು. ರಥೋತ್ಸವ ಪ್ರಕಟ ಬೆಳಿಗ್ಗೆ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಪೂಜಾ ಕಾರ್ಯಗಳು ಜರುಗಿದ್ದು. ಮೊದಲು ಶರಣಬಸವೇಶ್ವರ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವ ಕಿಚ್ಚರಗಿಸುವಂತೆ ಬಳಗಾನೂರು ಚಿಕ್ಕಯನಕೊಪ್ಪ ಶರಣರು ಆಗ್ನೇ ಮಾಡಿದ್ದು ಅವರ ಆಜ್ಞೆಯಂತೆ ಇಂದಿಗೂ ಸಹ ಧಾರ್ಮಿಕ ಕಾರ್ಯಗಳು ದೊರಕುತ್ತಿದ್ದು ಮೊದಲ ಲಘು ರಥೋತ್ಸವ ಆಯೋಜಿಸಲಾಗುತ್ತಿತ್ತು 2018 ರಿಂದ ಮಹಾ ರಥೋತ್ಸವವನ್ನು ಸಹ ಶರಣರ ಆಜ್ಞೆಯಂತೆ ನೆರವೇರಿಸುತ್ತಾ ಬಂದಿದ್ದು ಭಾನುವಾರ ಸಹ ಭಕ್ತರ ಸಮ್ಮುಖದಲ್ಲಿ ಮಹಾರಥೋತ್ಸವ ಸಂಪನಗೊಂಡಿತು. ಕೋನಪುರ ಗ್ರಾಮ ಸದ್ಧರ್ಮ ಡೊಳ್ಳು ಬಾರಿಸುವ ಗ್ರಾಮವೆಂದೆ ಪ್ರಸಿದ್ಧಿ ಹೊಂದಿದ್ದು, ಸ್ವಗ್ರಾಮದ ನಂದಿಕೋಲು ಹಾಗೂ ಬಳಕೆರೆ ಗ್ರಾಮದಿಂದ ತೇರಿನ ಹಗ್ಗ ಬಂದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಜಾತ್ರಾ ಮಹೋತ್ಸವವು ಹರಗಿನದೋಣಿ ಶ್ರೀಪಂಚವಣಿಗೆ ಸಂಸ್ಥಾನ ಹಿರೇಮಠದ ಶ್ರೀಗಳಾದ ಪೂಜ್ಯ ಸಿದ್ದಲಿಂಗೇಶ್ವರ ಸ್ವಾಮೀಜಿ ಮಹಾ ರಥೋತ್ಸವಕ್ಕೆ ಚಾಲನೆ ನೀಡಿದರು. ಕುಕನೂರು ಪಟ್ಟಣದ ಮುಂಡರಗಿ ಅನ್ನದಾನಿಶ್ವರ ಶಾಖಾ ಮಠದ ಪೂಜ್ಯರಾದ ಡಾ. ಮಹದೇವ ಮಹಾಸ್ವಾಮಿಗಳು, ಗುದ್ನೆಪ್ಪನಮಠದ ನೀಲಗುಂದ ಪ್ರಭುಲಿಂಗ ದೇವರು ಸಾನಿಧ್ಯ ವಹಿಸಿದ್ದರು.ಮಹೋತ್ಸವದ ಪ್ರಯುಕ್ತ ದೇವಸ್ಥಾನಕ್ಕೆ ಬಂದ ಭಕ್ತಾದಿಗಳಿಗೆ ಮಹಾದಾಸೋಹದಲ್ಲಿ ಸಿಹಿ ಬೂಂದಿ, ಜಿಲೇಬಿ, ಬಾದುಷಾ, ಮಾದಲಿ, ಕರ್ಚಿಕಾಯಿ, ತುಪ್ಪ, ಕಾರಬೊಂದಿ, ರೊಟ್ಟಿ ಚಪಾತಿ, ದಾಲ್, ಒಂಬತ್ತನೇ ಕಾಯಿ ಪಲ್ಯ, ಕಾಳೂ ಪಲ್ಲೆ, ಮೊಸರು, ಅನ್ನ,ಸಾಂಬಾರ್ ಉಪ್ಪಿನಕಾಯಿ ಸೇರಿದ ತರಹೇವಾರಿ ಭೋಜನದ ಅನ್ನ ಸಂತರ್ಪಣೆ ಆ ಯೋಜನೆ ಮಾಡಲಾಯಿತು. ಈ ಸಂದರ್ಭದಲ್ಲಿ ಗುದ್ನಯ್ಯ ಕೆಂಭಾವಿ ಮಠ, ಹುಚ್ಚೀರಪ್ಪ ಗೌಡ್ರು, ರುದ್ರಯ್ಯ ಕೆಂಭಾವಿ ಮಠ, ಗೌಡಪ್ಪ ಗೌಡ್ರು, ಶರಣಪ್ಪ ಕೌಡಿವಾಲರ,, ಚಿಕ್ಕಸಂಗಯ್ಯ ಹಗಸಿಮರದ, ಹುಚ್ಚಪ್ಪ ಅಗಸಿ ಮುಂದಲ, ಅರುಣ ಕುಮಾರ ಬಡಿಗೇರ,ಶಿವಯ್ಯ ಚೆಂಬಾವಿ ಮಠ, ಗ್ರಾಮದ ಪ್ರಮುಖರು, ತ್ರಿವಿಧ ಸಂಘಟನೆಗಳ ಸದಸ್ಯರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

# ಸಮಾಜದ ಅಭಿವೃದ್ಧಿಗೆ ಮಹಿಳೆಯರು ಮಹತ್ವದ ಕೊಡುಗೆ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಮಾರ್ಚ.8 :– ಮಹಿಳೆಯರು ಇಂದು ಶಿಕ್ಷಣ, ಉದ್ಯೋಗ, ರಾಜಕೀಯ ಹಾಗೂ ಕ್ರೀಡಾ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮ ಸಾಮರ್ಥ್ಯವನ್ನು ತೋರಿಸಿ ಸಮಾಜದ ಅಭಿವೃದ್ಧಿಗೆ ಮಹತ್ವದ ಕೊಡುಗೆ



ನೀಡುತ್ತಿದ್ದಾರೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಹೇಳಿದರು.

ಅವರು ರವಿವಾರ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಆಯೋಜಿಸಿದ 2025–26ನೇ ಸಾಲಿನ ಬೀದರ ಜಿಲ್ಲಾ ಮಟ್ಟದ ಮಹಿಳಾ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು. ಕ್ರೀಡೆಗಳು ಮಹಿಳೆಯರ ಆರೋಗ್ಯ, ಆತ್ಮವಿಶ್ವಾಸ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇಂತಹ ಕ್ರೀಡಾಕೂಟಗಳು ಗ್ರಾಮೀಣ ಹಾಗೂ ನಗರ ಭಾಗಗಳ ಮಹಿಳೆಯರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆಯಾಗುತ್ತವೆ. ಜಿಲ್ಲೆಯ ಮಹಿಳಾ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಬೇಕು ಎಂದು ಸಚಿವರು ಹಾರೈಸಿದರು. ಈ ಸಂದರ್ಭದಲ್ಲಿ ಪೌರಾಡಳಿತ ಹಾಗೂ ಹ 'ಜ್ ಸಚಿವರಾದ ರಹೀಮ ಖಾನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ಯುವಜನ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಪ್ರಕಾಶ, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಸೇರಿದಂತೆ ಅನೇಕ ಮಹಿಳಾ ಕ್ರೀಡಾಪಟುಗಳು ಉಪಸ್ಥಿತರಿದ್ದರು.

# ಪೆಟ್ರೋಲ್ ಬಂಕ್ ಚಾಲನೆ



(ವರದಿ:ಪರಮೇಶ ರಾಂಪುರೆ)

ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ತಾಲೂಕಿನ ರಾಷ್ಟ್ರೀಯ ಹೆದ್ದಾರಿ–50ರ (ಓಊ–50) ಡಿಗ್ಗಿ ಬಳಿ ನೂತನವಾಗಿ ನಿರ್ಮಿಸಲಾದ 'ಸಿದ್ಧಾಂತ್ ಎನರ್ಜಿ ಸ್ಟೇಷನ್' ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಇಂದು ಭಾನುವಾರ ಅತ್ಯಂತ ಸಂಭ್ರಮ ಹಾಗೂ ಸಡಗರದಿಂದ ಲೋಕಾರ್ಪಣೆಗೊಂಡಿತು.

ಟೋಣ್ಣೆ ಪರಿವಾರದ ವತಿಯಿಂದ ಸಾರ್ವಜನಿಕರ ಸೇವೆಗೆ ಮುಕ್ತಗೊಂಡ ಈ ಸುಸಜ್ಜಿತ ಇಂಧನ ಕೇಂದ್ರದ ಉದ್ಘಾಟನೆಯನ್ನು ಪರಿಸರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರು ಸಸಿ ಹಚ್ಚುವ ಮೂಲಕ ಚಾಲನೆ ನೀಡಿ ಮಾತನಾಡಿದರು, ಇಂದಿನ ವೇಗದ ಬದುಕಿನಲ್ಲಿ ಇಂಧನ ಶಕ್ತಿಯ ಮಹತ್ವ ಅಪಾರವಾಗಿದೆ. ಅಭಿವೃದ್ಧಿಯ ಪಥದಲ್ಲಿ ಸಾಗಲು ಇಂಧನದ ಅವಶ್ಯಕತೆ ಮತ್ತು ಅದರ ಸದುಪಯೋಗದ ಬಗ್ಗೆ ಪ್ರತಿಯೊಬ್ಬರಿಗೂ ಅರಿವಿರಬೇಕು. ಈ ಭಾಗದಲ್ಲಿ ಇಂತಹ ಸುಸಜ್ಜಿತ ಬಂಕ್ ಸ್ಥಾಪನೆಯಾಗಿರುವುದು ಶ್ಲಾಘನೀಯ," ಎಂದು ತಿಳಿಸಿದರು.

ಗ್ರಾಹಕರಿಗೆ ಗುಣಮಟ್ಟದ ಸೇವೆಯ ಭರವಸೆ: ಪ್ರಕಾಶ ಟೋಣ್ಣೆ

ಕಾರ್ಯಕ್ರಮದ ಆರಂಭದಲ್ಲಿ ಪ್ರಸ್ತಾವಿಕವಾಗಿ ಮಾತನಾಡುತ್ತಾ ಎಲ್ಲರನ್ನು ಸ್ವಾಗತಿಸಿದ ಪ್ರಕಾಶ ಟೋಣ್ಣೆ ಅವರು, ನಮ್ಮ ಸಿದ್ಧಾಂತ್ ಎನರ್ಜಿ ಸ್ಟೇಷನ್‌ನಲ್ಲಿ ಗ್ರಾಹಕರಿಗೆ ಅತ್ಯಂತ ಶುದ್ಧ ಹಾಗೂ ಉತ್ತಮ ಗುಣಮಟ್ಟದ ಇಂಧನವನ್ನು ಒದಗಿಸಲಾಗುತ್ತದೆ. ಕೇವಲ ಇಂಧನ ಮಾತ್ರವಲ್ಲದೆ, ಇಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದ್ದು, ಗ್ರಾಹಕರಿಗೆ ಅತ್ಯುತ್ತಮ ಸೇವೆ ನೀಡಲು ನಾವು ಬದ್ಧರಾಗಿದ್ದೇವೆ," ಎಂದು ಭರವಸೆ ನೀಡಿದರು.ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ಮಾತನಾಡಿ, ಹಳ್ಳಿಗಳಲ್ಲಿ ಇಂತಹ ಸೌಲಭ್ಯಗಳು ಬರುವುದರಿಂದ ರೈತರಿಗೆ ಮತ್ತು ವಾಹನ ಸವಾರರಿಗೆ ಅನುಕೂಲವಾಗುತ್ತದೆ, ಇದು ಭಾಗದ ಅಭಿವೃದ್ಧಿಯ ಸಂಕೇತವಾಗಿದೆ ಎಂದು ಆಶೀರ್ವಚನ ನೀಡಿದರು.

ಬೆಳಗ್ಗೆ ಇಂದ ಪೂಜಾ ವಿಧಿವಿಧಾನ ಕಾರ್ಯಕ್ರಮದ ಆರಂಭದಲ್ಲಿ ಪೂಜ್ಯ ಗುರು ಬಸವ ಪಟ್ಟದ್ದೇವರು ಶ ಸನ್ನಿಧಾನದಲ್ಲಿ ಧಾರ್ಮಿಕ ವಿಧಿವಿಧಾನಗಳೊಂದಿಗೆ ಬಂಕ್ ಪೂಜೆ ಮಾಡಲಾಗಿತು.ಗಿಡ ನೆಡುವ ಮೂಲಕ ಪರಿಸರ ಪ್ರೇಮ: ಉದ್ಘಾಟನೆಯ ಅಂಗವಾಗಿ ಗಣ್ಯರು ಬಂಕ್ ಆವರಣದಲ್ಲಿ ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆಯ ಸಂದೇಶ ಸಾರಿದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವರಾದ ರಾಜಶೇಖರ ಪಾಟೀಲ ಹುಮನಾಬಾದ, ಔರಾದ ತಹಸೀಲ್ದಾರ ಮಹೇಶ, ಕಮಲನಗರ ತಹಸೀಲ್ದಾರ ಅಮಿತ ಕುಮಾರ ಕುಲಕರ್ಣಿ, ಇಓ ಹನಮಂತರಾಯ ಕೌಟಗೆ, ಪ್ರವೀಣ ಪಾಟೀಲ, ಲಿಂಗಾನಂದ ಮಹಾಜನ, ಸಂತೋಷ ಬಿರಾದಾರ ಹಾಗೂ ಟೋಣ್ಣೆ ಪರಿವಾರದ ಹಿತೈಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಪ್ರಾ.ಶಿವಾಜಿ ಆರ್. ಎಚ್ ಕಾರ್ಯಕ್ರಮ ನಿರೂಪಣೆ ಮಾಡಿದರು.

# ಮಹಿಳೆಯರ ಸ್ವಾವಲಂಬಿ ಬದುಕಿಗೆ ಪಂಚ ಗ್ಯಾರಂಟಿ ಸಹಕಾರಿ



• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ರಾಜ್ಯದಲ್ಲಿ ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಪಂಚ ಗ್ಯಾರಂಟಿ ಯೋಜನೆಗಳು ಸಹಕಾರಿಯಾಗಿವೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಉಪಾಧ್ಯಕ್ಷರಾದ ಎಸ್.ಬಿ. ಖಾದ್ರಿ ಅವರು ಹೇಳಿದರು. ದಿನಾಂಕ :ಮಾರ್ಚ್.08.2026ರಂದು ತಾಲೂಕು ಪಂಚಾಯತ್ ಮಂಥನ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಹಾಗೂ ಎನ್ ಆರ್ ಎಲ್ ಎಂ ಸಂಜೀವಿನಿ ಯೋಜನೆ ವತಿಯಿಂದ ಭಾನುವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ಸಸಿಗೆ ನೀರೆರೆಯುವ ಮೂಲಕ ಚಾಲನೆ ನೀಡಿ ಮಾತನಾಡಿದರು. ಮಹಿಳೆಯರ ಬಗ್ಗೆ ವಿಶೇಷ ಒತ್ತು ನೀಡಿ ರಾಜ್ಯ ಸರಕಾರ ಜಾರಿಗೆ ತಂದಿರುವ ಯೋಜನೆಗಳ ಸದುಪಯೋಗ ಆಗಬೇಕು. ಗ್ಯಾರಂಟಿ ಯೋಜನೆಗಳ ಬಗ್ಗೆ ಸ್ವಸಹಾಯ ಸಂಘದ ಮಹಿಳೆಯರು ಹೆಚ್ಚು ಪ್ರಚಾರ ಮೂಡಿಸಿ ಯೋಜನೆಯಿಂದ ಹೊರಗುಳಿದವರನ್ನು ಯೋಜನೆಯತ್ತ ಕರೆತರುವ ಕೆಲಸ ಮಾಡಬೇಕು ಎಂದರು.

ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ಬಡ ಮಹಿಳೆಯರು ಹಾಗೂ ನಗರ ಪ್ರದೇಶಕ್ಕೆ ವಿದ್ಯಾಭ್ಯಾಸಕ್ಕೆ ತೆರಳುವ ವಿದ್ಯಾರ್ಥಿನಿಯರಿಗೆ ಶಕ್ತಿ ಯೋಜನೆ ತುಂಬಾ ಅನುಕೂಲವಾಗಿದೆ. ಮಹಿಳೆಯರು ಸ್ವಂತ ಕಿರು ಉದ್ಯಮ ಆರಂಭಿಸಲು ಗೃಹಲಕ್ಷ್ಮೀ ಯೋಜನೆ ನೆರವಾಗಿದೆ ಎಂದು ತಿಳಿಸಿದರು. ಎಸ್ ಕೆ ಎನ್ ಜಿ ಕಾಲೇಜು ಪ್ರಾಧ್ಯಾಪಕಿ ಡಾ.ಮಮ್ತಾಜ್ ಬೇಗಂ ಅವರು ವಿಶೇಷ ಉಪನ್ಯಾಸ ನೀಡಿ' ಮಹಿಳೆಯರ ಬಿಕ್ಕಟ್ಟು, ಸವಾಲುಗಳು ಪ್ರಭುತ್ವ ಹಾಗೂ ಸಮಾಜಕ್ಕೆ ತಿಳಿಪಡಿಸುವ ಕೆಲಸ ನಿರಂತರವಾಗಿರಬೇಕು. ಕಲ್ಯಾಣ ಕರ್ನಾಟಕ ಭಾಗದಲ್ಲೇ ಅತಿ ಹೆಚ್ಚು ತಾಯಂದಿರ ಮರಣ ಹಾಗೂ ಅಪೌಷ್ಟಿಕತೆ ಇದ್ದು, ನಿಯಂತ್ರಣವಾಗುವ ಕೆಲಸ ಆಗಬೇಕು. ಸಮಾಜದಲ್ಲಿ ಮಹಿಳೆಯರ ಬಗ್ಗೆ ನೆಲೆಯೂರಿರುವ ಮಾನಸಿಕ ತಿಳುವಳಿಕೆ ಬದಾಲಾಗಬೇಕು. ಲಿಂಗ ತಾರತಮ್ಯ ಇಲ್ಲದೆಯೇ ಸಮಾನತೆಯ ಸಮಾಜ ನಿರ್ಮಾಣವಾಗಬೇಕು ಎಂದರು.

ಪ್ರತಿಯೊಬ್ಬ ಮಹಿಳೆಯೂ ಪ್ರಜ್ಞಾವಂತರಾಗಿ ಕಾನೂನಿನ ತಿಳುವಳಿಕೆ ಹಾಗೂ ಅರಿವು ಹೊಂದಿದರೆ ಮಹಿಳಾ ಸಬಲೀಕರಣಕ್ಕೆ ನಾಂದಿ ಆಡಬಲ್ಲದು. ಮಹಿಳೆಯರು ಸಾಮಾಜಿಕ, ರಾಜಕೀಯ, ಧಾರ್ಮಿಕ ಹಾಗೂ ಕಾನೂನಿನ ಪ್ರಜ್ಞೆ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಮರೆಡ್ಡಿ ಪಾಟೀಲ್ ಅವರು ಮಾತನಾಡಿ, ಮಹಿಳೆಯರಿಗೆ ಸರಕಾರ ಜಾರಿಗೆ ತಂದಿರುವ ಎಲ್ಲ ಯೋಜನೆಗಳ ಸದುಪಯೋಗ ಪಡಿಸಿಕೊಳ್ಳಬೇಕು. ಇದರ ಜೊತೆಗೆ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು ಎಂದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ಮಹಿಳೆಯರು ಕೇಕ್ ಕತ್ತರಿಸುವ ಮೂಲಕ ಚಾಲನೆ ನೀಡಿದರು. ನಂತರ ಮಹಿಳೆಯರು ಕೋಲಾಟ, ಭಕ್ತಿಗೀತೆ ಹಾಡಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಜಿಲ್ಲಾ ಸಮಿತಿ ಸದಸ್ಯರಾದ ಆನಂದ ಅಸ್ರೋಡಿಕರ್, ತಾಲೂಕು ಅಧ್ಯಕ್ಷರಾದ ಡಾ.ವೆಂಕಟೇಶಬಾಬು, ತಾಲೂಕು ಸಮಿತಿ ಸದಸ್ಯರಾದ ಗಡ್ಡಿ ನಾಗಮ್ಮ, ಮುಸ್ತಾಪ, ದಾವಲ್ ಸಾಬ್, ಮಂಜುನಾಥ, ಪರಶುರಾಮ, ಸಬ್ಜಾವಲಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ವಿದ್ಯಾವತಿ, ವಿಷಯ ನಿರ್ವಾಹಕರಾದ ರವೀಂದ್ರ ಕುಲಕರ್ಣಿ, ತಾಲೂಕು ಒಕ್ಕೂಟದ ಅಧ್ಯಕ್ಷರಾದ ರಮಜಾನಬೀ, ಎನ್ ಆರ್ ಎಲ್ ಎಂ ವಿಭಾಗದ ಸಂಯೋಜಕರಾದ ಮಲ್ಲಿಕಾರ್ಜುನ, ಮದ್ದಾನೇಶ, ಹಿರಿಯರಾದ ಈರಮ್ಮ, ಬಸಮ್ಮ, ಎನ್ ಆರ್ ಎಲ್ ಎಂ ಸಂಜೀವಿನಿ ಯೋಜನೆಯ ಎಂ.ಬಿ.ಕೆ, ಎಲ್ ಸಿಆರ್ ಪಿ, ಪಶುಸಖಿ, ಕೃಷಿ ಸಖಿ ಹಾಗೂ ವಿವಿಧ ಒಕ್ಕೂಟದ ಅಧ್ಯಕ್ಷರು, ಸ್ವಸಹಾಯ ಸಂಘದ ಸದಸ್ಯರು ಇದ್ದರು.

# ದ್ವಾರಬಾಗಿಲು ಕಟ್ಟಡ ಕಾಮಗಾರಿ ಭೂಮಿ ಪೂಜೆ ನೆರವೇರಿಸಿದ ಶಾಸಕ ವಿಠ್ಠಲ ಕಟಕಧೋಂಡ

• ಮಲ್ಲಮ್ಮ ನುಡಿ ವಾರ್ತೆ ಚಡಚಣ

ಧೂಳಖೇಡ ಗ್ರಾಮದ ಶ್ರೀ ಶಂಕರಲಿಂಗ ದೇವಸ್ಥಾನದ ಮುಖ್ಯಮಂತ್ರಿವಿಶೇಷಅನುದಾನದ ಅಡಿಯಲ್ಲಿ ದ್ವಾರಬಾಗಿಲು ಕಟ್ಟಡ ಕಾಮಗಾರಿ ಭೂಮಿ ಪೂಜೆಯನ್ನು ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಅವರು ನೆರವೇರಿಸಿ ಮಾತನಾಡಿದ



ಶಾಸಕರು ಶೀಘ್ರದಲ್ಲಿ ವಿಕಾಸಸೌದ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಾಗುವುದು ಎಂದು ಶಾಸಕ ವಿಠ್ಠಲ ಕಟಕಧೋಂಡ ತಿಳಿಸಿದರು. ನೂತನ ತಾಲೂಕಿಗೆ ಬೇಕಾಗಿರುವ ಎಲ್ಲ ಸರಕಾರಿ ಕಛೇರಿ ಹಾಗೂ ಶೀಘ್ರದಲ್ಲಿ ಪ್ರಜಾಸೌಧ ನಿರ್ಮಾಣ, ಕೋರ್ಟ ನಿರ್ಮಾಣ ಮಾಡುವದಾಗಿ ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಅವರು ಹೇಳಿದರು.

ಧೂಳಖೇಡ ಗ್ರಾಮದ ಶ್ರೀ ಶಂಕರಲಿಂಗ ದೇವಸ್ಥಾನವನ್ನು ಮುಖ್ಯಮಂತ್ರಿಯವರ ವಿಶೇಷ ಅನುದಾನದ ಅಡಿಯಲ್ಲಿ ದ್ವಾರಬಾಗಿಲು ಕಟ್ಟಡ ಕಾಮಗಾರಿ ಭೂಮಿ ಪೂಜೆಯನ್ನು ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಅವರು ನೆರವೇರಿಸಿ ಮಾತನಾಡಿದರು.

ಮುಖ್ಯಮಂತ್ರಿಗಳ ಮನವೊಲಿಸಿ ಮೊನ್ನೆ ಮಂಡಿಸಿದ ಬಜೆಟ್‌ನಲ್ಲಿ ಪಟ್ಟಣಕ್ಕೆ ಸರಕಾರಿ ಡಿಗ್ರಿ ಕಾಲೇಜು ಮಂಜೂರು ಮಾಡಿಸಿದ್ದೇನೆ. ಪಂಡರಪೂರದಿಂದ ಗಾಣಗಾಪುರದವರೆಗೆ ದ್ವಿಮುಖ ರಸ್ತೆ ನಿರ್ಮಾಣಕ್ಕೆ ಅನುಮೋದನೆ ದೊರಕಿದೆ ಎಂದರು. ಬೇಸಿಗೆ ಪ್ರಾರಂಭವಾಗಿದ್ದು ಚಡಚಣ ಪಟ್ಟಣ ಸೇರಿದಂತೆ ತಾಲೂಕಿನ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗಬಾರದು ಎಂದು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಮಹಾರಾಷ್ಟ್ರದಿಂದ ಭೀಮಾ ನದಿಗೆ ನೀರು ಬಿಡಿಸಿದ್ದೇನೆ. ಚಡಚಣ ಏತ ನೀರಾವರಿ ಪ್ರಾರಂಭವಾಗಿದ್ದು, ದಿನದ 24 ಗಂಟೆ ಸತತ ಪಟ್ಟಣಕ್ಕೆ ನೀರು ಸರಬರಾಜು ಮಾಡಲಾಗುವದು ಎಂದರು. ಶೀಘ್ರದಲ್ಲಿ ತಾಲೂಕಿಗೆ ಬೇಕಾಗಿರುವ ವಿಕಾಸಸೌದ ಶಂಕುಸ್ಥಾಪನೆಯನ್ನು ಇನ್ನು ಕೆಲವೇ ದಿನಗಳಲ್ಲಿ ನೆರವೇರಿಸಲಾಗುವುದು. ಸಾರ್ವಜನಿಕರ ಸಹಕಾರವಿದ್ದರೆ ಮಾತ್ರ ಮತಷ್ಟು ಅಭಿವೃದ್ಧಿ ಮಾಡಲು ಸಾಧ್ಯ ಎಂದ ಅವರು, ತಾವುಗಳು ಸದಾ ನನಗೆ ಸಹಕಾರ ನೀಡಿದರೆ ನಾನು ತಾಲೂಕಿನ ಸರ್ವಾಂಗೀಣ ಅಭಿವೃದ್ಧಿಯನ್ನು ಮಾಡುತ್ತೇನೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಸುರೇಶಗೌಡ ಪಾಟೀಲ, ದೀಲಿಪ ಶಿವಶರಣ , ದಯಾನಂದ ಪಾಟೀಲ, ಶಿವಬಾಳ ಗೊಲಿ, ಸೋಮುಗೌಡ ಪಾಟೀಲ, ರಾಯಗೊಂಡ ರಗಟ್ಟೆ, ಬಸವರಾಜ ಕೋಳಿ, ಆನಂದ ಬಂಡಿ, ಭೀಮುಸೌಕಾರ ಭೈರಗೊಂಡ,

# ವಿದ್ಯುತ್ ಇಲಾಖೆಯಲ್ಲಿ ಲೈನ್ ಮ್ಯಾನ್ ದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ನಮ್ಮ ಸಮಾಜದಲ್ಲಿ ಹೆಚ್ಚಾಗಿ ಗುರುತಿಸಿಕೊಳ್ಳದ ಎಲೆಮರೆ ಕಾಯಿಯಂತೆ ಕೆಲಸ ಮಾಡುವ, ಅದೆಷ್ಟೋ ನೌಕರರಲ್ಲಿ ವಿದ್ಯುತ್ ಇಲಾಖೆಯ ನೌಕರರು ಕೂಡ ಒಬ್ಬರು, ಇವರಿಗೆ ಪ್ರಶಂಸೆಗಿಂತ ಶಾಪಗಳೆ ಹೆಚ್ಚು, ಅದೇನೆ ಆಗಲಿ ನಿಮ್ಮ ಆರೋಗ್ಯವನ್ನು ಕಾಪಾಡಿಕೊಂಡು, ಉತ್ತಮವಾಗಿ ಬದುಕಿ ಬಾಳಿ, ಯಾ-



ಕೆಂದರೆ ಸಮಾಜ ಕಟ್ಟುವಲ್ಲಿ ನಿಮ್ಮ ಪಾತ್ರ ಬಹಳ ಮುಖ್ಯವಾದದ್ದು ಎಂದು ಹೇಳಿದರು. ಮುಖ್ಯ ಅತಿಥಿಯಾಗಿ ಜಿಎಸ್ಎಸ್ ಸಂಸ್ಥಾಪಕರಾದ ಶ್ರೀಹರಿಡಿ ಎಂದು ತಿಳಿಸಿದ್ದಾರೆ

ಉಪ ವಿಭಾಗ ವತಿಯಿಂದ ಸೆಸ್ಕ್ ಲೈನ್ ಮ್ಯಾನ್ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಸಾಂಕೇತಿಕವಾಗಿ ಗೌರವ ಸಲ್ಲಿಸುವ ನಿಟ್ಟಿನಲ್ಲಿ, ಶಂಕರ್ ಶೆಟ್ಟಿ ಲೈನ್ ಮೆನ್ ಅನ್ನು ಸನ್ಮಾನಿಸಿದರು ಮತ್ತು ಕೇಕ್ ಕಟ್ ಮಾಡುವ ಮೂಲಕ ಲೈನ್ ಮ್ಯಾನ್ ದಿವಸದ ಸಂಭ್ರಮಾಚರಣೆಯನ್ನು ಆಚರಿಸಿದ್ದಾರೆ. ಈ ಕಾರ್ಯಕ್ರಮವನ್ನು ಆಯೋಜಿಸಿದ್ದು, ಅವರಿಗೆ ನಾವು ಎಷ್ಟು ಕೃತಜ್ಞರಾಗಿದ್ದರು ಕೂಡ ಕಡಿಮೆ ಎಂದೂ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಚೆಸ್ಕಾಂ ಎಇಇ ಜಗದೀಶ್ ಅವರು ಉಲ್ಲೆಖಿಸಿದರು

ಕಾರ್ಯಕ್ರಮದಲ್ಲಿ ಹುಣಸೂರು ಉಪವಿಭಾಗದ ಶಾಖಾಧಿಕಾರಿಗಳಾದ ಚನ್ನಕೇಶವ. ಎಸ್, ಮಹೇಶ್, ಶಶಿಧರ್, ಸುಕೃತ್, ಸಂಘ ಸಂಸ್ಥೆಯ ಪದಾಧಿಕಾರಿಗಳಾದ ಬಸವರಾಜ್ ಐ ಸಿ, ಸಿದ್ದೇಶ್ವರ್, ಕೃಷ್ಣಕುಮಾರ್, ಶಾಂತರಾಜ್ ಹಾಗೂ ರೋಟರಿ ಕ್ಲಬ್ ಅಧ್ಯಕ್ಷರಾದ ಹೆಚ್. ಆರ್. ಕೃಷ್ಣಕುಮಾರ್, ಕಾರ್ಯದರ್ಶಿ ಶಾಮಣ್ಣ, ರೋಟರಿ ಇನ್ನರ್ ವೀಲ್ ಅಧ್ಯಕ್ಷರಾದ ಜ್ಯೋತಿ ವಿಶ್ವನಾಥ್ ಹಾಗೂ ಸದಸ್ಯರು ಮತ್ತು ಹುಣಸೂರು ಉಪ ವಿಭಾಗದ ಎಲ್ಲಾ ನೌಕರರು ಭಾಗವಹಿಸಿದ್ದರು.

# ಮಾದಹಳ್ಳಿ ಉಕ್ಕಿನ ಕಂತೆ ಮಠದಲ್ಲಿ ಶ್ರೀ ಗುರುಬೂದಿಸ್ವಾಮಿಗಳ 397ನೇ ಆರಾಧನೆ ಹಾಗೂ ನೂತನ

ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ತಾಲೂಕಿನ ಮಾದಹಳ್ಳಿ ಗ್ರಾಮದಲ್ಲಿರುವ ಐತಿಹಾಸಿಕ ಉಕ್ಕಿನ ಕಂತೆ ಮಠದಲ್ಲಿ ಶ್ರೀ ಗುರುಬೂದಿಸ್ವಾಮಿಗಳ 397ನೇ ಆರಾಧನೆ ಮಹೋತ್ಸವ, ಶ್ರೀಮಠದ ನೂತನ ಕಟ್ಟಡ, ನವೀಕೃತ 16 ಗದ್ದುಗೆಗಳು, ಶತಾಯುಷಿ ಶ್ರೀ ಸಿದ್ದಲಿಂಗ ಸ್ವಾಮಿಗಳ ಸಭಾಂಗಣ ಹಾಗೂ ಬಸವದ್ವಾರ ಉದ್ಘಾಟನೆ ಕಾರ್ಯಕ್ರಮ ಶರಣಸಮಾವೇಶದೊಂದಿಗೆ ಭಕ್ತಿಭಾವದಿಂದ ನೆರವೇರಿತು.

ಮಾದಹಳ್ಳಿ ಮಠದ ಸಾಂಬ ಸದಾಶಿವ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾತನಾಡಿ, ಇಂದಿನ ಸಮಾಜ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದನ್ನು ಅರಿಯಬೇಕಾಗಿದೆ ಎಂದು ಹೇಳಿದರು. ಗುರುಹಿರಿಯರು ಹಾಗೂ ತಂದೆ–ತಾಯಿಗಳಿಗೆ ಗೌರವ ನೀಡುವ ಸಂಸ್ಕೃತಿ ಉಳಿಯಬೇಕು ಎಂದು ಅವರು ತಿಳಿಸಿದರು.

ಮಠಗಳು ಸಮಾಜದ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿವೆ. ಈ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಅಭಿವೃದ್ಧಿ ಕಂಡಿದ್ದರೆ ಅದ–ಕ್ಕೆ ಮಠ–ಮಾನ್ಯಗಳ ಪಾತ್ರ ಅಪಾರವಾಗಿದೆ ಎಂದು ಅವರು ಹೇಳಿದರು. ಇಂದಿನ ಕಾಲದಲ್ಲಿ ಕೊಲೆ, ದರೋಡೆ ಪ್ರಕರಣಗಳೇ ಸುದ್ದಿಯಾಗುತ್ತಿರುವುದು ವಿಷಾದಕರ ಸಂಗತಿ ಎಂದು ಅಭಿಪ್ರಾಯಪಟ್ಟರು.

ಮಹಿಳೆಯರಿಗೆ ಸರ್ಕಾರ ನೀಡುತ್ತಿರುವ ಪ್ರತಿ ತಿಂಗಳು 2000 ಸಹಾಯಧನದ ಕುರಿತು ಮಾತನಾಡಿದ ಅವರು, ರೈತರ ಸಾಲಮನ್ನಾ ಮಾಡಿದ ಅನುಭವವನ್ನು ಸ್ಮರಿಸಿದರು. ಸರ್ಕಾರ ಈಗಾಗಲೇ ದೊಡ್ಡ ಪ್ರಮಾಣದಲ್ಲಿ ಸಾಲ ಮಾಡಿಕೊಂಡಿದ್ದು, ಮುಂದಿನ ದಿನಗಳಲ್ಲಿ ಆರ್ಥಿಕ ಪರಿಸ್ಥಿತಿಯ ಬಗ್ಗೆ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಅವರಿಗೆ ಸಲಹೆ ನೀಡಿದರು. ಕೇಂದ್ರ ಸರ್ಕಾರ ವಿವಿಧ ಯೋಜನೆಗಳಿಗೆ–12 ಲಕ್ಷ




72 ಸಾವಿರ ಕೋಟಿ ನೀಡಿದ್ದು, ಅದನ್ನು ಜನರಿಗೆ ತಲುಪಿಸುವ ಜವಾಬ್ದಾರಿ ನಮ್ಮದಾಗಿದೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಮಾತನಾಡಿ, ಇದು ಧಾರ್ಮಿಕ ಹಾಗೂ ಸಂಘಟನಾ ಸಭೆಯಾಗಿದ್ದು, ಲಿಂಗಾಯತ ಮಠಗಳಿಂದ ಸಮ ಸಮಾಜ ನಿರ್ಮಾಣವಾಗಬೇಕು ಎಂದು ಹೇಳಿದರು. ಬಸವಣ್ಣರು ಸಮಾಜದಲ್ಲಿ ಸಮಾನತೆ ಮತ್ತು ಸಹೋದರತ್ವದ ಸಂದೇಶವನ್ನು ಸಾರಿದರು. ಅದೇ ರೀತಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಕೂಡ ಮಹಿಳೆ–ಪುರುಷ ಸಮಾನತೆಯ ಪರಿಕಲ್ಪನೆಯನ್ನು ಪ್ರತಿಪಾದಿಸಿದರು ಎಂದು ಹೇಳಿದರು. ಲಿಂಗಾಯತ ಧರ್ಮ ಮಾನವ ಧರ್ಮವಾಗಿದ್ದು, ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಶ್ರೇಷ್ಠ ಧರ್ಮ ಎಂದು ಅವರು ಅಭಿಪ್ರಾಯಪಟ್ಟರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿ, ಮಠ ಪರಂಪರೆ ಹಾಗೂ ಗುರು ಪರಂಪರೆ ಭಾರತೀಯ ಸಂಸ್ಕೃತಿಯ ಪ್ರಮುಖ ಅಂಶವಾಗಿದೆ ಎಂದು ಹೇಳಿದರು. ಸುಮಾರು 700 ವರ್ಷಗಳ ಇತಿಹಾಸ ಹೊಂದಿರುವ ಈ ಮಠ ಸಮಾಜಮುಖಿ ಕಾರ್ಯಗಳನ್ನು ನಿರಂತರವಾಗಿ ನಡೆಸುತ್ತಿದೆ. ರಾಜ್ಯ ಸರ್ಕಾರ ಗೃಹಲಕ್ಷ್ಮೀ ಯೋಜನೆಯಡಿ ಪ್ರತಿ ತಿಂಗಳು ಮಹಿಳೆಯರಿಗೆ ₹2000 ನೀಡುತ್ತಿದ್ದು, ಇದುವರೆಗೆ 1.54 ಕೋಟಿ ಮಹಿಳೆಯರು ಇದರ ಪ್ರಯೋಜನ ಪಡೆದಿದ್ದಾರೆ ಎಂದು ತಿಳಿಸಿದರು.

ಶಾಸಕ ಜಿಟಿ ಹರೀಶ್ ಗೌಡ ಮಾತನಾಡಿ, ಉಕ್ಕಿನ ಕಂತೆ ಮಠವು ತಾಲೂಕಿನ ಐತಿಹಾಸಿಕ ಮಠವಾಗಿದ್ದು, ಈ ಪುಣ್ಯಭೂಮಿಯಲ್ಲಿ ದಾಸೋಹ ಪರಂಪರೆ ಮುಂದುವರಿದಿದೆ. ಹುಣಸೂರು ತಾಲೂಕಿನಲ್ಲಿ ಉಕ್ಕಿನ ಕಂತೆ ಮಠ ಮತ್ತು ಗಾವಡಗೆರೆ ಮಠ ಎಂಬ ಎರಡು ಪ್ರಮುಖ ಮಠಗಳಿದ್ದು, ಅವುಗಳ ಮೂಲಕ ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಗದ್ಗುರು ಶಿವರಾತ್ರಿದೇಶಿ ಕೇಂದ್ರ ಸ್ವಾಮೀಜಿ, ಕನಕಪುರ ದೇಗುಲ ಮಠದ ಕಿರಿಯ ಸ್ವಾಮೀಜಿ ಚನ್ನಬಸವ ಸ್ವಾಮೀಜಿ, ದೇವನೂರು ಮಠದ ಮಹಾಂತ ಸ್ವಾಮೀಜಿ, ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ರಾಜನಹಳ್ಳಿ ಮಠದ ಪ್ರಸನ್ನನಂದಪುರಿ ಸ್ವಾಮೀಜಿ, ಕಾಗಿನೆಲೆ ಮಠದ ಶಿವಾನಂದಪುರ ಸ್ವಾಮೀಜಿ, ಕುಂದೂರು ಮಠದ ಶರತಚಂದ್ರ ಸ್ವಾಮೀಜಿ ಸೇರಿದಂತೆ ಅನೇಕ ಸ್ವಾಮೀಜಿಗಳು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಶಾಸಕ ಡಿ. ರವಿಶಂಕರ್, ಎಂಎಲ್‌ಸಿ ಮಂಜೇಗೌಡ, ಮಾಜಿ ಸಚಿವ ಸಾರಾ ಮಹೇಶ್, ಮಾಜಿ ಶಾಸಕ ಆಯನೂರು ಮಂಜುನಾಥ್, ಎಂಎಲ್‌ಸಿ ದಿನೇಶ್ ಗೂಳಿಗೌಡ, ಮಾಜಿ ಶಾಸಕರಾದ ಅಶ್ವಿನ್ ಕುಮಾರ್, ಎಂ.ಜೆ. ರವಿಕುಮಾರ್, ಕಾಂಗ್ರೆಸ್ ಮುಖಂಡ ಪ್ರದೀಪ್ ಕುಮಾರ್, ಬಿಜೆಪಿ ಮುಖಂಡ ಯು.ಎಸ್. ಶೇಖರ್, ಯಶಸ್ವಿ ಸೋಮಶೇಖರ್ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಬಸ್ ಅಪಘಾತ, ಪ್ರಾಣಾಪಾಯದಿಂದ ಪಾರು



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣದ ಪೋಲಿಸ್ ಠಾಣೆಯ ಹತ್ತಿರ ಬೈಕ್ ಸವಾರ ಹಾಗೂ ಮಗು ಬಸ್ ಚಕ್ರದಲ್ಲಿ ಸಿಲುಕಿ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಶನಿವಾರ ಜರುಗಿದೆ. ಮುದಗಲ್ ದಿಂದ ತಾವರಗೇರಾ ಪಟ್ಟಣಕ್ಕೆ ತೆರಳುತ್ತಿದ್ದ ಬಸ್ ಗೆ ಹೊಸೂರು ಗ್ರಾಮದ ಬೈಕ್ ಸವಾರ ಹಾಗೂ ಮಗು ವಾಹನದ ಚಕ್ರಕ್ಕೆ ಸಿಲುಕಿಕೊಂಡ ಪರಿಣಾಮವಾಗಿ ಬೈಕ್‌ನಲ್ಲಿದ್ದ ತಂದೆ,ಮಗಳು ಅಪಘಾತದಿಂದ ಪಾರಾಗಿದ್ದಾರೆ.ಮಗುವಿಗೆ ಸಣ್ಣಪುಟ್ಟ ಗಾಯಗಳಾಗಿವೆ.ಈ ಕುರಿತು ಠಾಣೆಯಲ್ಲಿ ಯಾವುದೇ ಪ್ರಕರಣ ದಾಖಲಾಗಿಲ್ಲ.



ಕಲಬುರಗಿ ನಗರದ ಜೇವರ್ಗಿ ರಸ್ತೆಯ ಅಂಡರ್ ಬ್ರೀಜ್ ಹತ್ತಿರ ಇರುವ ಸದ್ಭಾವ ಒಬಿಸಿಟಿ, ಹಾಗೂ ಮೆಟಾಬಾಲಿಕ್ ಆಸ್ಪತ್ರೆಯನ್ನು ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ ನಮೋಶಿ ಅವರು ರಿಬ್ಬಿನ್ ಕತ್ತರಿಸುವ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಆಸ್ಪತ್ರೆಯ ಪ್ರಮುಖರಾದ ಡಾ. ಅಭಿಷೇಕ ಆರ್. ಮಾಲಿಪಾಟೀಲ್, ಡಾ. ಶಿಲ್ಪಾ ಎ ಮಾಲಿಪಾಟೀಲ್, ಡಾ.ಎವಿ ದೇಶಮುಖ, ಹರ್ಷನಂದ ಮಾಲಿಪಾಟೀಲ ವಕಿಲರು ಸೇರಿದಂತೆ ರಾಜಕಿಯ ಮುಖಂಡರು, ಆಸ್ಪತ್ರೆಯ ಸಿಬ್ಬಂದಿಗಳು ಹಾಜರಿದ್ದರು.

# ವೃದ್ಧರೊಂದಿಗೆ ಕೇಕ್ ಕತ್ತರಿಸಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಣೆ

ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ

ಇಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯ–ಕ್ಷೆ ಯಾಸ್ಮೀನ್ ತಾಜ್ ಅವರ ನೇತೃತ್ವದಲ್ಲಿ ತಾಲ್ಲೂಕಿನ ಸುಲ್ತಾನ್ ಪೇಟೆಯಲ್ಲಿರುವ ಶ್ರೀ ಸಾಯಿ ದ್ವಾರಕಮಾಯಿ ವೃದ್ಧಾಶ್ರಮದಲ್ಲಿ ವೃದ್ಧರೊಂದಿಗೆ ಕೇಕ್ ಕತ್ತರಿಸಿ, ಹಣ್ಣು–ಹಂಪಲು ವಿತರಿಸುವ ಮೂಲಕ ಸಾಮಾಜಿಕ ಕಳಕಳಿ ಪ್ರದರ್ಶಿಸಿ ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ವೇಳೆ ಮಾತನಾಡಿದ ಯಾಸ್ಮೀನ್ ತಾಜ್ ಪ್ರಸ್ತುತ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಛಾಪು ಮೂಡಿಸುತ್ತಿದ್ದು, ತಾಯಿ, ತಂಗಿ ಹಾಗೂ ಪತ್ನಿಯಾಗಿ ಕುಟುಂಬದ ಬೆನ್ನೆಲುಬಾಗಿ ನಿಂತು ಉತ್ತಮ ಸೇವೆ ಸಲ್ಲಿಸುತ್ತಾರೆ ಮಹಿಳೆಯರು ತಮ್ಮನ್ನು ಮರೆತು ಕುಟುಂಬ ಕಟ್ಟಲು ಶ್ರಮಿಸುತ್ತಾರೆ.ಸಮಾಜದಲ್ಲಿ ಹೆಣ್ಣುಮಕ್ಕಳಿಗೆ ತಮ್ಮದೇ ಆದ ಗೌರವವಿದ್ದು, ಅವರ ಪಾತ್ರ ಅತ್ಯಂತ




ಮಹತ್ವದ್ದಾಗಿದೆ ಎಂದು ಹೇಳಿದರು.

ಇನ್ನೂ ರಾಜ್ಯದ ಕಾಂಗ್ರೆಸ್ ಸರ್ಕಾರ ಮಹಿಳೆಯರಿಗೆ ಬೆಂಬಲವಾಗಿ ನಿಂತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮಹಿಳಾ ಸಬಲೀಕರಣಕ್ಕಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಮಹಿಳೆಯರು ಸ್ವಾವಲಂಬಿ ಜೀವನ ನಡೆಸಲು ಸರ್ಕಾರ ಶಕ್ತಿ ತುಂಬಿದೆ ಎಂದು ಅವರು ಅಭಿಪ್ರಾಯಪಟ್ಟರು. ಮಹಿಳೆಯರು ಇಂದು ಯಾವ ಕ್ಷೇತ್ರದಲ್ಲೂ ಕಮ್ಮಿಯಿಲ್ಲ. ಇನ್ನಷ್ಟು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಬೆಳೆಯಲು ಮಹಿಳೆಯರು ಮುಂದಾಗಬೇಕು ಎಂದು ಕರೆ ನೀಡಿದರು. ವೃದ್ಧಾಶ್ರಮದಲ್ಲಿರುವ ಹಿರಿಯರೊಂದಿಗೆ ಮಹಿಳಾ ದಿನಾಚರಣೆ ಆಚರಿಸುವುದು ಮನಸ್ಸಿಗೆ ಅಪಾರ ಸಂತೋಷ ತಂದಿದೆ. ಅವರೊಂದಿಗೆ ಕಳೆಯುವ ಕ್ಷಣಗಳು ಮತ್ತು ಅವರ ಮುಖದಲ್ಲಿ ಮೂಡಿದ ಮಂದಹಾಸವೇ ನಿಜವಾದ ಸಂತೋಷ ಎಂದು ಯಾಸ್ಮೀನ್ ತಾಜ್ ಹೇಳಿದರು. ಈ ವೇಳೆ ಜಿಲ್ಲಾ ಮಹಿಳಾ ಕಾಂಗ್ರೆಸ್ ಉಪಾಧ್ಯಕ್ಷೆ ವೆಂಕಟರತ್ನ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ವೆಂಕಟಲಕ್ಷ್ಮಿ, ನಿಮ್ಮಾಕುಲ ಕುಂಟೆ ಮಂಜು, ಒಬಲಮ್ಮ, ನಲ್ಲಪ್ಪನಹಳ್ಳಿ ಮಂಜು, ಐರನ್ ಮಂಜಮ್ಮ ಇತರೆ ಮಹಿಳಾ ಕಾಂಗ್ರೆಸ್ ಕಾರ್ಯಕತೆ–ರ್ಯರು ಉಪಸ್ಥಿತರಿದ್ದರು.

# ದರೂರು ಶ್ರೀ ವೀರಭದ್ರ ಸ್ವಾಮಿ ಪುಣ್ಯಕ್ಷೇತ್ರದಲ್ಲಿ ಹುಂಡಿ ಎಣಿಕೆ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ ಸೇಲ್ವಮನಿ, ಇವರು ಈ ದಿನ ಸಿರುಗುಪ್ಪ ತಾಲೂಕಿನ ದರೂರು ವೀರಭದ್ರ ಸ್ವಾಮಿ ಪುಣ್ಯಕ್ಷೇತ್ರದ ಹುಂಡಿಗಳ ಬೀಗದ ಕೀಲಿಗಳನ್ನು ಬಳ್ಳಾ–ರಿಯ ತಮ್ಮ ಇಲಾಖೆಯಿಂದ ತಂದು ಪ್ರಧಾನ ಅರ್ಚಕರ , ವ್ಯವಸ್ಥಾಪನ ಸಮಿತಿಯ ಹಾಗು ಭಕ್ತರ ಸಮ್ಮುಖದಲ್ಲಿ, ಕರೂರು ಕರ್ನಾಟಕ ಗ್ರಾಮೀಣ ಬ್ಯಾಂಕಿನವರ ಮತ್ತು ಸಿರಿಗೆರೆ ಪೊಲೀಸ್ ಠಾಣೆಯವರ ಸಮ್ಮುಖದಲ್ಲಿ ಎಲ್ಲಾ ಉಂಡೆಗಳ ಕೀಲಿಗಳನ್ನು ತೆಗೆದು ಹಣವನ್ನು ಸಂಪೂರ್ಣವಾಗಿ ಹೇಳಿಕೆ ಮಾಡಿ 507,662/ರೂಪಾಯಿಗಳನ್ನು ಕರೂರು ಗ್ರಾಮದ ಕರ್ನಾಟಕ ಗ್ರಾಮೀಣ ಬ್ಯಾಂಕಿನ ಪುಣ್ಯ ಕ್ಷೇತ್ರದ ಖಾತೆಗೆ ಹಾಕಲಾಯಿತು. ಭಕ್ತರ ಸಮ್ಮುಖದಲ್ಲಿ ಮಾನ್ಯ



ಅಧಿಕಾರಿಗಳು ಎಲ್ಲಾ ಹುಂಡಿಗಳ ಕೀಲಿ ಹಾಕಿಕೊಂಡು ಬಳ್ಳಾರಿಯ ಇಲಾಖೆಗೆ ತಲುಪಿಸಿರುತ್ತಾರೆ.

ಇಂತಿ ವಂದನೆಗಳೊಂದಿಗೆ,

ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ವ್ಯವಸ್ಥಾಪನ ಸಮಿತಿ.

ಪೂಜಾರಿ ವೀರೇಶಯ್ಯ ಸ್ವಾಮಿ, ತಳವಾರ್ ದುರ್ಗಣ್ಣ , ಬಡಿಗೇರ ಪಂಪಾಪತಿ, ಕೆಂಪಣ್ಣನವರ ವೀರೇಶ್ ನಾಯಕ್ , ಕುರುಬರ ಪೂಜಾರಿ ಮಲ್ಲಯ್ಯ, ಮರಿಬಸಪ್ಪ ನಾಯಕ, ವಿನೋದ್ ಗೌಡ, ಮೇಟಿ ಪಂಪನಗೌಡ , ಲೆಂಕೆರ್ ಕಲ್ಲಪ್ಪ ನಾಯಕ, ಎಂ.ವೀರಭದ್ರ ನಾಯಕ್, ಕುರುಬರ ಆಗ್ಲೂರಪ್ಪ , ತಿಪ್ಪೇರುದ್ರ ಗೌಡ, ತಳವಾರ್ ಉಮೇಶ್ ನಾಯಕ್, ದೇವಟ್ಟಿಗೆ ಮಲ್ಲಿಕಾರ್ಜುನ, ಕೆ. ವೀರೇಶ್ ನಾಯಕ್, ಕೆಂಪಣ್ಣನವರ ರುದ್ರ ನಾಯಕ್. ಪುರುಷೋತ್ತಮ್ ಗೌಡ, ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ. ಕಾರ್ಯದರ್ಶಿ ಟೀ. ವೀರನಗೌಡ. ಇದ್ದರು

# ನಕಲಿ ವಿಮಾ ಪಾಲಿಸಿ ನೀಡಿ ಲಕ್ಷಾಂತರ ರೂ. ವಂಚನೆ : ಏಜೆಂಟ್ ಬಂಧನ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಗಾಂಧಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಕಲಿ ವಿಮಾ ಪಾಲಿಸಿಗಳನ್ನು ನೀಡಿ ಗ್ರಾಹಕರಿಗೆ ವಂಚನೆ ಮಾಡಿದ ಪ್ರಕರಣದಲ್ಲಿ ವ್ಯಕ್ತಿಯೊಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.


THE NEW INDIAAS-SURANCE COMPA-NY LTD

ಕಂಪನಿಯ ಹೆಸರಿನಲ್ಲಿ ಕಾರು, ಮೋಟಾರ್ ಸೈಕಲ್ ಹಾಗೂ ಜಾನುವಾರುಗಳಿಗೆ ಸಂಬಂಧಿಸಿದ ನಕಲಿ ವಿಮಾ ಪಾಲಿಸಿಗಳನ್ನು ಕೊಡಿಸಿ, ಗ್ರಾಹಕರಿಂದ ಹಣ ಪಡೆದು ಮೋಸ ಮಾಡಲಾಗಿದೆ ಎಂದು ಕಂಪನಿಯ ಮ್ಯಾನೇಜರ್ ವೆಂಕಟೇಶ್ ಅವರು ಗಾಂಧಿನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರ ಹಿನ್ನೆಲೆಯಲ್ಲಿ ಈ ಕುರಿತು ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 15/2026 ಅಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗಿತ್ತು.

ಪೊಲೀಸರ ತನಿಖೆಯಲ್ಲಿ ಷಣ್ಮುಖ ಅಣ್ಣಿ (34), ಮೋರಗೇರಿ ಗ್ರಾಮ (ಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ) ಮೂಲದ ವ್ಯಕ್ತಿ ಈ ವಂಚನೆ ನಡೆಸಿರುವುದು ಪತ್ತೆಯಾಗಿದೆ. ಆರೋಪಿಯನ್ನು ಮಾರ್ಚ್ 6 ರಂದು ಬಂಧಿಸಿ ನ್ಯಾಯಾಂಗ ಬಂಧನಕ್ಕೆ

ಒಪ್ಪಿಸಲಾಗಿದೆ. ಸುಮಾರು 10 ವರ್ಷಗಳಿಂದ ವಿಮಾ ಕಂಪನಿಯಲ್ಲಿ ಪಾಲಿಸಿ

ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದ ಆರೋಪಿ, ಹಳೆಯ ಪಾಲಿಸಿಗಳನ್ನು PDF ಎಡಿಟರ್ ಅಪ್ಲಿಕೇಶನ್ ಬಳಸಿ ತಿದ್ದುಪಡಿ ಮಾಡಿ ಹಲವರಿಗೆ ನಕಲಿ ಪಾಲಿಸಿಗಳನ್ನು ವಿತರಿಸಿದ್ದಾನೆ ಎಂದು



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಮನ್ ಡಿ ಪನ್ನೇಕರ್ ತಿಳಿಸಿದ್ದಾರೆ.

ಆರೋಪಿಯಿಂದ ವಂಚನೆಗೊಳಗಾದವರ ಸಂಖ್ಯೆ ಹಾಗೂ ವಂಚಿಸಿದ ಹಣದ ಮೊತ್ತದ ಕುರಿತು ತನಿಖೆ ಮುಂದುವರಿದಿದೆ ಎಂದು ತಿಳಿಸಿದ ಪೊಲೀಸ್ ವರಿಷ್ಠಾಧಿಕಾರಿ, ಷಣ್ಮುಖ ಎಂಬಾತನ ಮೂಲಕ

THE NEW INDIAAS-SURANCE COMPA-NY LTD

ಹೆಸರಿನಲ್ಲಿ ಪಾಲಿಸಿ ಪಡೆದವರು ತಮ್ಮ ಪಾಲಿಸಿಯ ನೈಜತೆಯನ್ನು ತಕ್ಷಣ ವಿಮಾ ಕಚೇರಿಯಲ್ಲಿ ಪರಿಶೀಲಿಸಿಕೊಳ್ಳಬೇಕು. ಪಾಲಿಸಿ ನಕಲಿ ಎಂದು ತಿಳಿದಲ್ಲಿ ಗಾಂಧಿನಗರ ಪೊಲೀಸ್ ಠಾಣೆಗೆ ದೂರು ನೀಡುವಂತೆ ಮನವಿ ಮಾಡಿದ್ದಾರೆ. ಈತನನ್ನು ವಿಮಾ ಕಂಪನಿಯು ಏಜೆಂಟ್ ಹುದ್ದೆಯಿಂದ ಉಚ್ಚಾಟಿಸಿದ್ದು, ಸಾರ್ವಜನಿಕರು ಈತನ ಮೂಲಕ ಯಾವುದೇ ಪಾಲಿಸಿ ಮಾಡಿಸದಂತೆ ಎಚ್ಚರಿಕೆಯಿಂದಿರಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ. ಪನ್ನೇಕರ್, ಐಪಿಎಸ್ ತಿಳಿಸಿದ್ದಾರೆ.

## ಶಿಕ್ಷಣದ ಜೊತೆ ಸಂಸ್ಕಾರ ಮುಖ್ಯ



**ಹಗರಿಬೊಮ್ಮನಹಳ್ಳಿ:** ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ ಸಿ.ಬಿ.ಎಸ್.ಇ ಹಗರಿಬೊಮ್ಮನಹಳ್ಳಿಯಲ್ಲಿ ದಿನಾಂಕ 07-03-2026 ರಂದು ಸಂಕಲ್ಪ ಕಾರ್ಯಕ್ರಮ ಆಚರಿಸಲಾಯಿತು.

ಹತ್ತನೇ ತರಗತಿ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಸಂಪೂರ್ಣಗೊಂಡ ಹಿನ್ನೆಲೆಯಲ್ಲಿ ಮುಂದಿನ ಹಂತಕ್ಕೆ ಅಣಿಗೊಳಿಸಿ ಅವರ ಭವಿಷ್ಯ ಉಜ್ವಲವಾಗಿರಲೆಂದು ಶಾಲೆಯ ಸಂಸ್ಕೃತ ಶಿಕ್ಷಕರಾದ ಶ್ರೀ ವಿನಾಯಕ ಭಟ್ಟರ ಮಾರ್ಗದರ್ಶನದೊಂದಿಗೆ ಮಾತಾಪಿತರ ಪಾದಪೂಜೆಯೊಂದಿಗೆ ಕಾರ್ಯಕ್ರಮ ಪ್ರಾರಂಭಿಸಲಾಯಿತು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಗಂಗಾವತಿಯ ನ್ಯಾಯವಾದಿಗಳಾಗಿದ್ದ ಶ್ರೀ ನಾಗರಾಜ್ ಗುತ್ತೇದಾರ್ ಅವರು ಆಗಮಿಸಿದ್ದರು. ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ "ಈಗಿನ ಕಾಲದಲ್ಲಿ ಶಾಲೆಗಳಲ್ಲಿ ಭಾರತೀಯ ಸಂಸ್ಕೃತಿ, ಆದರ್ಶಗಳು, ಮೌಲ್ಯಗಳು ಹಾಗೂ ಸಂಸ್ಕಾರ ಸಿಗುವುದು ಅತಿ ವಿರಳ. ಆದರೆ ಅವೆಲ್ಲವನ್ನು ಒಟ್ಟಿಗೆ ನೀಡುತ್ತಿರುವ ಏಕೈಕ ಶಾಲೆ ರಾಷ್ಟ್ರೋತ್ಥಾನ ಶಾಲೆ" ಇಲ್ಲಿ ಶಿಕ್ಷಣದೊಂದಿಗೆ ಮಕ್ಕಳಿಗೆ ಸಂಸ್ಕಾರ ಲಭಿಸುತ್ತಿರುವುದರಿಂದ ನೀವು ಅದೃಷ್ಟಶಾಲಿಗಳು. ಪ್ರಪಂಚದಲ್ಲಿ ವಂಚನೆ ಇಲ್ಲದ್ದು ತಂದೆಯ ಹೆಗಲು ಹಾಗೂ ತಾಯಿಯ ಮಡಿಲು ಎನ್ನುವುದನ್ನು ದೃಷ್ಟಾಂತದ ಮೂಲಕ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಆಂಗ್ಲ ವಿಭಾಗದ ಮುಖ್ಯಸ್ಥರಾದ ಶ್ರೀ ನಾಗರಾಜ. ಬಿ. ಯವರು ಸ್ವಾಗತಿಸಿದರು. ಶಾಲೆಯ ಪ್ರೌಢ ವಿಭಾಗದ ಶೈಕ್ಷಣಿಕ ಸಂಯೋಜಕರಾದ ಶ್ರೀ ನಾಗರಾಜ್ .ಕೆ ಅವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಸುಮಾರು 350 ಜನರ ಉಪಸ್ಥಿತಿ ಕಾರ್ಯಕ್ರಮಕ್ಕೆ ಶೋಭೆಯನ್ನು ನೀಡಿತು.

## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



**ಚಿಕ್ಕಬಳ್ಳಾಪುರ:** ಇಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಯಾಸ್ಮೀನ್ ತಾಜ್ ಅವರ ನೇತೃತ್ವದಲ್ಲಿ ತಾಲ್ಲೂಕಿನ ಸುಲ್ತಾನ್ ಪೇಟೆಯಲ್ಲಿರುವ ಶ್ರೀ ಸಾಯಿ ದ್ವಾರಕಮಾಯಿ ವೃದ್ಧಾಶ್ರಮದಲ್ಲಿ ವೃದ್ಧರೊಂದಿಗೆ ಕೇಕ್ ಕತ್ತರಿಸಿ,ಹಣ್ಣು-ಹಂಪಲು ವಿತರಿಸುವ ಮೂಲಕ ಸಾಮಾಜಿಕ ಕಳಕಳಿ ಪ್ರದರ್ಶಿಸಿ ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ವೇಳೆ ಮಾತನಾಡಿದ ಯಾಸ್ಮೀನ್ ತಾಜ್ ಪ್ರಸ್ತುತ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಛಾಪು ಮೂಡಿಸುತ್ತಿದ್ದು,ತಾಯಿ,ತಂಗಿ ಹಾಗೂ ಪತ್ನಿಯಾಗಿ ಕುಟುಂಬದ ಬೆನ್ನೆಲುಬಾಗಿ ನಿಂತು ಉತ್ತಮ ಸೇವೆ ಸಲ್ಲಿಸುತ್ತಾರೆ ಮಹಿಳೆಯರು ತಮ್ಮನ್ನು ಮರೆತು ಕುಟುಂಬ ಕಟ್ಟಲು ಶ್ರಮಿಸುತ್ತಾರೆ.ಸಮಾಜದಲ್ಲಿ ಹೆಣ್ಣುಮಕ್ಕಳಿಗೆ ತಮ್ಮದೇ ಆದ ಗೌರವವಿದ್ದು,ಅವರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು.

ಇನ್ನೂ ರಾಜ್ಯದ ಕಾಂಗ್ರೆಸ್ ಸರ್ಕಾರ ಮಹಿಳೆಯರಿಗೆ ಬೆಂಬಲವಾಗಿ ನಿಂತಿದ್ದು,ಮುಖ್ಯಮಂತ್ರಿ ಸಿದ್ದರಾಮಯ್ಯ ಮಹಿಳಾ ಸಬಲೀಕರಣಕ್ಕಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ.ಮಹಿಳೆಯರು ಸ್ವಾವಲಂಬಿ ಜೀವನ ನಡೆಸಲು ಸರ್ಕಾರ ಶಕ್ತಿ ತುಂಬಿದೆ ಎಂದು ಅವರು ಅಭಿಪ್ರಾಯಪಟ್ಟರು.ಮಹಿಳೆಯರು ಇಂದು ಯಾವ ಕ್ಷೇತ್ರದಲ್ಲೂ ಕಮ್ಮಿಯಿಲ್ಲ.ಇನ್ನಷ್ಟು ಸಾಮಾಜಿಕ,ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಬೆಳೆಯಲು ಮಹಿಳೆಯರು ಮುಂದಾಗಬೇಕು ಎಂದು ಕರೆ ನೀಡಿದರು.ವೃದ್ಧಾಶ್ರಮದಲ್ಲಿರುವ ಹಿರಿಯರೊಂದಿಗೆ ಮಹಿಳಾ ದಿನಾಚರಣೆ ಆಚರಿಸುವುದು ಮನಸ್ಸಿಗೆ ಅಪಾರ ಸಂತೋಷ ತಂದಿದೆ. ಅವರೊಂದಿಗೆ ಕಳೆಯುವ ಕ್ಷಣಗಳು ಮತ್ತು ಅವರ ಮುಖದಲ್ಲಿ ಮೂಡಿದ ಮಂದಹಾಸವೇ ನಿಜವಾದ ಸಂತೋಷ ಎಂದು ಯಾಸ್ಮೀನ್ ತಾಜ್ ಹೇಳಿದರು.ಈ ವೇಳೆ ಜಿಲ್ಲಾ ಮಹಿಳಾ ಕಾಂಗ್ರೆಸ್ ಉಪಾಧ್ಯಕ್ಷೆ ವೆಂಕಟರತ್ನ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ವೆಂಕಟಲಕ್ಷ್ಮಿ,ನಿಮ್ಮಾಕುಲ ಕುಂಟೆ ಮಂಜು,ಒಬಲಮ್ಮ,ನಲ್ಲಪ್ಪನಹಳ್ಳಿ ಮಂಜು,ಐರನ್ ಮಂಜಮ್ಮ ಇತರೆ ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

## ಉಚಿತ ಆರೋಗ್ಯ ತಪಾಸಣಾ ಶಿಬಿರ



**ಭಾಲ್ಕಿ:** ಮಹಿಳೆಯರ ಆರೋಗ್ಯವು ಕುಟುಂಬ ಮತ್ತು ಸಮಾಜದ ಯೋಗಕ್ಷೇಮಕ್ಕೆ ಮೂಲಾಧಾರವಾಗಿರುವುದರಿಂದ ಆಧುನಿಕ ಮಹಿಳೆಯರು ಸ್ವಾಸ್ಥ ಆರೋಗ್ಯ ಕಾಪಾಡುವುದು ಅಗತ್ಯ ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸಂಚಾಲಕಿ ರಾಧಾ ಬಹನಜಿ ಅಭಿಪ್ರಾಯಪಟ್ಟರು.

ಪಟ್ಟಣದ ಖಂಡ್ರೆ ಗಲ್ಲಿಯಲ್ಲಿರುವ ಪಾಟೀಲ್ ಮಲ್ಟಿಸ್ಪೇಷಲಿಟಿ ಆಸ್ಪತ್ರೆಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಮಹಿಳೆಯರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಇತ್ತೀಚೆಗೆ ಮಹಿಳೆಯರಿಗೆ ದೈಹಿಕ ಪರಿಶ್ರಮದ ಅಭಾವದಿಂದ ನಾನಾ ಕಾಯಿಲೆಗಳು ಬರುತ್ತಿವೆ.ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಪೌಷ್ಠಿಕ ಆಹಾರ,ದೈಹಿಕ ವ್ಯಾಯಾಮ ಮಾಡುವುದರ ಜೊತೆಗೆ ನಿಯಮಿತ ಆರೋಗ್ಯ ತಪಾಸಣೆ ಮಾಡಿಕೊಳ್ಳುವುದು ಅವಶ್ಯಕ.ಪಾಟೀಲ್ ಆಸ್ಪತ್ರೆಯವರು ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ ಆರೋಗ್ಯ ಶಿಬಿರದ ಲಾಭ ಎಲ್ಲರೂ ಪಡೆದುಕೊಳ್ಳಬೇಕು ಎಂದು ಹೇಳಿದರು. ಡಾ.ಕೃತಿಕಾ ಕನಸೆ,ಡಾ.ನಮ್ರತಾ ಶೆಡೋಳೆ,ವಂದನಾ ಕಾಳೆ,ಐಶ್ವರ್ಯ ಕನಸೆ,ಪೂಜಾ ರಾಠೋಡ,ಉಷಾ ಬನಬರೆತಾಯಿ,ಡಾ.ನಿತೀನ ಪಾಟೀಲ, ಡಾ.ಶಶಿಕಾಂತ ಭೂರೆ, ಡಾ.ವಿಜಯಕುಮಾರ ರಾಠೋಡ, ಡಾ.ಉದ್ಧವ ಕನಸೆ, ಗಣೇಶ, ವೆಂಕಟೇಶ ಬಿರಾದಾರ, ಪ್ರೇಮಕುಮಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಡಾ.ಪಂ.ಪುಟ್ಟರಾಜ ಕವಿ ಗವಾಯಿಗಳ ಕವಿಗೋಷ್ಠಿ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಶ್ರೀ ರಾಜರಾಜೇಶ್ವರಿ ಜಾನಪದ ಸಾಂಸ್ಕೃತಿಕ ಕಲಾಭಿರುಚಿ ಸಂಘ ಅರಳಹಳ್ಳಿ ಇವರ ಸಹಯೋಗದಲ್ಲಿ ದಿನಾಂಕ: 07.03.2026 ಶನಿವಾರ,ಕನ್ನಡ ಜಾಗೃತಿ ಭವನ, ಗಂಗಾವತಿಯಲ್ಲಿ ಜರುಗಿಸಲಾಯಿತು. ಕಾರ್ಯಕ್ರಮವು ಗಾನಯೋಗಿ ಡಾ. ಪ. ಪುಟ್ಟರಾಜ ಗವಾಯಿಗಳ ಭಾವಚಿತ್ರಕ್ಕೆ ಹೂ ಗಳು ಅರ್ಪಿಸಿ ಕೊಪ್ಪಳ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾದ್ಯರಾದ ರುದ್ರಪ್ಪ ಭಂಡಾರಿಯವರಿಂದ ಗಿಡಗಗಳಿಗೆ ನೀರು ಹಾಕುವದರ ಮುಖಾಂತರ ಕಾರ್ಯಕ್ರಮ ಪ್ರಾರಂಬಿಸಲಾಯಿತು.

ಪ್ರಾಸ್ತಾವಿಕ ನುಡಿಯಲ್ಲಿ ಅಶೋಕ ಗುಡಿಕೋಟಿಯವರು ಚುಟುಕು ಸಾಹಿತ್ಯಪರಿಷತ್ತು ನಡೆದು ಬಂದ ಹಾದಿ ಮತ್ತು ಪಂಡಿತ ಪುಟ್ಟರಾಜ ಕವಿ ಗವಾಯಿಗಳ ಸಂಗೀತ ಸಾಹಿತ್ಯ ಸಮಾಜಿ ಕಳಕಳ ಬಗ್ಗೆ ಕವಿಗೋಷ್ಠಿ ಬಗ್ಗೆ ಸ್ವ ವಿಸ್ತಾರವಾಗಿ ವಿವರಿಸಿ ಮುಂದೆ ಮಾಡುವ ತಾಲುಕ ಚುಟುಕು ಸಮ್ಮೇಳನ ಕುರಿತು ಪ್ರಸ್ತಾಪಿಸಿ ಎಲ್ಲರ ಸಹಕಾರ ಇದ್ದರೆ ಮಾಡುವುದಾಗಿ ತಿಳಿಸಿದರು.

ನಂತರ ಉದ್ಘಾಟನೆ ಭಾಷಣವನ್ನು ಜಿಲ್ಲಾದ್ಯಕ್ಷರಾದ ರುದ್ರಪ್ಪ ಭಂಡಾರಿಯವರು ಕೊಪ್ಪಳ ಮತ್ತು ಗಂಗಾವತಿ ಸಾಹಿತ್ಯ ಕ್ಷೇತ್ರ ಹಾಗು ಹೋಗುಗಳ ಬಗ್ಗೆ ಪ್ರಸ್ತೂತ ಬೆಳವಣಗೆ ವಿವರಿಸುತ್ತ ಗಂಗಾವತಿ ಚುಟುಕು ಸಾಹಿತ್ಯಪರಿಷತ್ತ



ಸಮ್ಮೇಳ ಮಾಡಲು ಮುಂದಾಗಲಿ ಸಮ್ಮೇಳನ ಮುಖೇನ ಹಿರಿಯ ಕಿರಿಯ ಸಾಹಿತಿಗಳು ಒಂದಡೆ ಸೇರುವಂತಾಗಲಿ ನಾನು ಕೂಡ ಮುಂಚಿತವಾಗಿ ಬಂದು ಪ್ರತಿಯೊಂದಕ್ಕು ಸಹಕಾರ ನೀಡವದಾಗಿ ಬರವಸೆ ನುಡಿಗಳಾಡಿದರು.

ತದ ನಂತರ ಕವಿಗೋಷ್ಠಿ ಪ್ರಾರಂಭವಾಗಿ ಸುಮಾರು 30 ಕ್ಕು ಹೆಚ್ಚು ಕವಿಗಳು ಭಾಗ ವಹಿಸಿ ತಮ್ಮತಮ್ಮ ಸ್ವರಚಿತ ಕವನಗಳನ್ನು ವಾಚನ ಮಾಡಿದರು ಬಹಳಷ್ಟು ಕವನಗಳು ಪುಟ್ಟರಾಜ ಗವಾಯಿಗಳ ಕುರಿತು ಇದ್ದರು ಉಳಿದ ಕವನಗಳು ಸಾಹಿತ್ಯಾಸಕ್ತರ ಮನ ತಣಿಸಿದವು.

ನಂತರ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಡಾ. ಶಿವುಕುಮಾರ ಮಾಲಿ ಪಾಟಿಲರು ಗವಾಯಿಗಳ ಬಗ್ಗೆ ಗವಾಯಿಗಳಿಗು ತಮಗು ಇರುವ ಅವಿನಾವಭಾವ ಸಂಬಂಧ ಹಾಗು ಕವಿಗೋಷ್ಠಿ ಕುರಿತು ಮಾತನಾಡಿದರು.

ಕವಿಗೋಷ್ಠಿಯ ಅದ್ಯಕ್ಷತೆಯನ್ನುವಹಿಸಿಕೊಂಡಿದ್ದ ಅದ್ಯಕ್ಷಿಯ ಭಾಷಣವನ್ನು ಹಿರಿಯ ಸಾಹಿತಿಗಳಾದ ಎಸ್ ವಿ ಪಾಟಿಲ್ ಗುಂಡೂರವರು ಕವನ ವಾಚನ ಮಾಡಿದ ಕವಿಗಳ ಕವನಗಳ ಬಗ್ಗೆ ಇಲ್ಲಿ ಎಲ್ಲರು ಸಮಾನರು ಯಾರು ದೊಡ್ಡವರು ಚಿಕ್ಕವರಲ್ಲವೆಂದು ಪ್ರೋತ್ಸಾಹದ ದುಷ್ಠಿಯಿಂದ ಸರಳವಾಗಿ ವಿಮರ್ಶಿಸಿ ಕಾವ್ಯ ಅಂದರೆ ಏನು ಕಾವ್ಯ ರಚನೆ ಹೇಗಿರಬೇಕೆಂದು ಹಿರಿಯ ಕವಿಗಳ ಕವಿತೆಗಳ ಬಗ್ಗೆ ತಿಳಿಸಿದರೆ




ಈ ಕವಿಗೋಷ್ಠಿಯಲ್ಲಿ ಉತ್ತಮ ಕವಿತೆ ಮತ್ತು ವಾಚನ ಮಾಡಿದ ಯುವಕವಿ ಎಮ್ ಎಸ್ ನಾರ, ಶ್ರೀಮತಿ ಶಾರಾಧಾ ಬೆಟಗೇರಿ, ಶ್ರೀ ಶರಣಪ್ಪ ವಿದ್ಯಾನಗರ ರವರಿಗೆ ಶ್ರೀ ಡಾ.ಪ.ಪುಟ್ಟರಾಜ ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಲಾಯಿತು.ತಡವಾಗಿ ಬಂದ ಗಂಗಾವತಿಯ ಬಿ ಪ್ರಾಣೇಶರವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತ ಈ ಭಾಗದಲ್ಲಿ ಸಾಹಿತ್ಯಾಸಕ್ತರು ಸಾಹಿತಿಗಳು ಹೆಚ್ಚನ ಸಂಖ್ಯೆಯಲ್ಲಿ ಇದ್ದು ಕಾರ್ಯಕ್ರಮ ಗಳಿಗೆ ಪ್ರೊತ್ಸಾಹ ನಿಡುತ್ತ ಬಂದಿದ್ದಾರೆ ಅದೆ ರಿತಿ ಸಾಹಿತಿಗಳು ಬೆಳಿದಿದ್ದಾರೆ ಆದರೆ ಇತ್ತಿಚಿನ ಯುವ ಕವಿಗಳಿಗೆ ಅದ್ಯಯನದ ಕೊರತೆ ಇದೆ ಬೆರೆಯವರ ಪುಸ್ತಕ ಕವಿತೆಗಳನ್ನು ಓದಿ ಬರೆಯುವದನ್ನು ರೂಡಿ ಮಾಡಿರೆ ಉತ್ತಮವಾದ ಬೆಳವಣಿಗೆ ಎಂದರು.ಕಾರ್ಯಕ್ರಮ ನಿರೂಪಣೆ ಮಂಜುನಾಥ ತಾವರಿಗಿ ನೆರೆವೆರಿಸಿದರೆ ವಂದನಾರ್ಪಣೆಯನ್ನು ಸೋಮ ಶೇಖರ್ ಕಂಚಿ ಮಾಡಿದರುಬೋಜರಾಜ ಕಾರಟಗಿ ಯವರಿಂದ ಸಂಗಿತ ಕಾರ್ಯಕ್ರಮ ನಡೆಯಿತು.

## ಕಟ್ಟಡ ಕಾಮಗಾರಿ ಭೂಮಿ ಪೂಜೆ

• ಮಲ್ಲಮ್ಮ ನುಡಿ ವಾರ್ತೆ ಚಡಚಣ

ಧೂಳಖೇಡ ಗ್ರಾಮದ ಶ್ರೀ ಶಂಕರಲಿಂಗ ದೇವಸ್ಥಾನದ ಮುಖ್ಯಮಂತ್ರಿ ವಿಶೇಷ ಅನುದಾನದ ಅಡಿಯಲ್ಲಿ ದ್ವಾರಬಾಗಿಲು ಕಟ್ಟಡ ಕಾಮಗಾರಿ ಭೂಮಿ ಪೂಜೆಯನ್ನು ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಅವರು ನೆರವೇರಿಸಿ ಮಾತನಾಡಿದ ಶಾಸಕರು ಶೀಘ್ರದಲ್ಲಿ ವಿಕಾಸಸೌದ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಾಗುವುದು ಎಂದು ಶಾಸಕ ವಿಠ್ಠಲ ಕಟಕಧೋಂಡ ತಿಳಿಸಿದರು.

ನೂತನ ತಾಲೂಕಿಗೆ ಬೇಕಾಗಿರುವ ಎಲ್ಲ ಸರಕಾರಿ ಕಛೇರಿ ಹಾಗೂ ಶೀಘ್ರದಲ್ಲಿ ಪ್ರಜಾಸೌಧ ನಿರ್ಮಾಣ, ಕೋರ್ಟ ನಿರ್ಮಾಣ ಮಾಡುವದಾಗಿ ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಅವರು ಹೇಳಿದರು.

ಧೂಳಖೇಡ ಗ್ರಾಮದ ಶ್ರೀ ಶಂಕರಲಿಂಗ ದೇವಸ್ಥಾನವನ್ನು ಮುಖ್ಯಮಂತ್ರಿಯವರ ವಿಶೇಷ ಅನುದಾನದ ಅಡಿಯಲ್ಲಿ ದ್ವಾರಬಾಗಿಲು ಕಟ್ಟಡ



ಕಾಮಗಾರಿ ಭೂಮಿ ಪೂಜೆಯನ್ನು ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಅವರು ನೆರವೇರಿಸಿ ಮಾತನಾಡಿದರು. ಮುಖ್ಯಮಂತ್ರಿಗಳ ಮನವೊಲಿಸಿ ಮೊನ್ನೆ ಮಂಡಿಸಿದ ಬಜೆಟ್‌ನಲ್ಲಿ ಪಟ್ಟಣಕ್ಕೆ ಸರಕಾರಿ ಡಿಗ್ರಿ ಕಾಲೇಜು ಮಂಜೂರು ಮಾಡಿಸಿದ್ದೇನೆ.ಪಂಡರಪೂರದಿಂದ ಗಾಣಗಾಪುರದವರೆಗೆ ದ್ವಿಮುಖ ರಸ್ತೆ ನಿರ್ಮಾಣಕ್ಕೆ ಅನುಮೋದನೆ ದೊರಕಿದೆ ಎಂದರು.

ಈ ಸಂದರ್ಭದಲ್ಲಿ ಸುರೇಶಗೌಡ ಪಾಟೀಲ, ದೀಲಿಪ ಶಿವಶರಣ,ದಯಾನಂದ ಪಾಟೀಲ,ಶಿವಬಾಳ ಗೊಲಿ, ಸೋಮುಗೌಡ ಪಾಟೀಲ, ಭೀಮುಸೌಕಾರ ಭೈರಗೊಂಡ, ಅನೇಕರು ಇದ್ದರು.

## ಜಿಲ್ಲಾ ಮಟ್ಟದ ಮಹಿಳಾ ಕ್ರೀಡಾಕೂಟ

• ಮಲ್ಲಮ್ಮ ನುಡಿ ವಾರ್ತೆ ಹಳಿಯಾಳ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಬೀದರ ನಗರದ ನೆಹರೂ ಕ್ರೀಡಾಂಗಣದಲ್ಲಿ ಆಯೋಜಿಸಲಾದ 2025-26ನೇ ಸಾಲಿನ ಬೀದರ ಜಿಲ್ಲಾ ಮಟ್ಟದ ಮಹಿಳಾ ಕ್ರೀಡಾಕೂಟವನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಮಹಿಳೆಯರು ಇಂದು ಶಿಕ್ಷಣ, ಉದ್ಯೋಗ, ರಾಜಕೀಯ ಹಾಗೂ ಕ್ರೀಡಾ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮ ಸಾಮರ್ಥ್ಯವನ್ನು ತೋರಿಸಿ ಸಮಾಜದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ ಎಂದು ಹೇಳಿದರು. ಕ್ರೀಡೆಗಳು ಮಹಿಳೆಯರ ಆರೋಗ್ಯ, ಆತ್ಮವಿಶ್ವಾಸ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ತಿಳಿಸಿದರು.

ಇಂತಹ ಕ್ರೀಡಾಕೂಟಗಳು ಗ್ರಾಮೀಣ ಹಾಗೂ ನಗರ ಭಾಗಗಳ ಮಹಿಳೆಯರಿಗೆ ತಮ್ಮ ಪ್ರತಿಭೆಯನ್ನು



ಪ್ರದರ್ಶಿಸಲು ಉತ್ತಮ ವೇದಿಕೆಯಾಗುತ್ತವೆ. ಜಿಲ್ಲೆಯ ಮಹಿಳಾ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಬೇಕು ಎಂದು ಸಚಿವರು ಹಾರೈಸಿದರು.

ಕಾರ್ಯಕ್ರಮದಲ್ಲಿ ಸಚಿವರಾದ ಶ್ರೀ ರಹಿಂ ಖಾನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕ್ರೀಡಾ ಇಲಾಖೆ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಅನೇಕ ಮಹಿಳಾ ಕ್ರೀಡಾಪಟುಗಳು ಉಪಸ್ಥಿತರಿದ್ದರು.

## ಮಹಿಳೆಯರು ಆರ್ಥಿಕವಾಗಿ ಸಬಲರಾಗಬೇಕು: ಡಾ. ಆನಂದ ಕೆ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಮಹಿಳೆಯರು ಸ್ತ್ರೀಶಕ್ತಿ ಮತ್ತು ಸ್ವಸಹಾಯ ಸಂಘಗಳಲ್ಲಿ ಕ್ರಿಯಾಶೀಲರಾಗಿ ಆರ್ಥಿಕ ಸಬಲೀಕರಣ ಹೊಂದಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಿಶು ಅಭಿವೃದ್ಧಿ ಯೋಜನೆ, ಸರ್ಕಾ-ರೇತರ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಇಲ್ಲಿನ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರ ಸಾಕಷ್ಟು ಯೋಜನೆ ಜಾರಿಗೊಳಿಸಿದೆ. ಅನೇಕ ಯೋಜನೆಗಳ ಅನುಷ್ಠಾನದ ಮೂಲಕ ಮಹಿಳೆಯರನ್ನು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಸಬಲರನ್ನಾಗಿಸುವ



ಮೂಲಕ ಅವರನ್ನು ಸಬಲೀಕರಣಗೊಳಿಸಲಾಗುತ್ತಿದೆ. ಮಹಿಳೆಯರು ಇಂದು ಎಲ್ಲ ರಂಗಗಳಲ್ಲೂ ದಾಪುಗಾಲನ್ನಿಟ್ಟಿರುವುದು ಸಂತಸದ ಸಂಗತಿ ಎಂದರು.

ಆದರೆ ಸಾಮಾಜಿಕ ಪಿಡುಗಾಗಿರುವ ಬಾಲ್ಯವಿವಾಹ, ವರದಕ್ಷಿಣೆ, ಪ್ರಸವ ಪೂರ್ವ ಲಿಂಗ ಪತ್ತೆ ಹಾಗೂ ಹತ್ಯೆ, ಕೌಟುಂಬಿಕ ಹಿಂಸೆಯಂತಹ ಸಮಸ್ಯೆಗಳನ್ನು ತೊಡೆದು ಹಾಕಲು ಸಾಕಷ್ಟು ಕಾಯ್ದೆ ಕಾನೂನು ಜಾರಿಯಲ್ಲಿದ್ದು, ಸಂಬಂಧಿಸಿದ ಇಲಾಖೆಗಳು ಈ ನಿಟ್ಟಿನಲ್ಲಿ ಕೈ ಜೋಡಿಸುವ ಮೂಲಕ ಈ ಪಿಡುಗುಗಳ ನಿರ್ಮೂಲನೆ ಹಾಗೂ ಕಡಿವಾಣಕ್ಕೆ ಕಟಿಬದ್ಧರಾಗಿ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಮಹಿಳೆಯರು ತಮಗಿರುವ ಆರ್ಥಿಕ ಸೌಲಭ್ಯಗಳ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳ ಮೂಲಕ ತಮಗಿರುವ ಹಕ್ಕು ಮತ್ತು ಕರ್ತವ್ಯಗಳನ್ನು ತಿಳಿದುಕೊಳ್ಳಬೇಕು ಎಂದು ಮಹಿಳೆಯರಿಗೆ ಸಲಹೆ ಮಾಡಿದರು.

ಮಹಿಳೆಯರು ಇಂದು ಬಾಹ್ಯಾಕಾಶ ಸಾಧನೆ ಮಾಡಿದ್ದಾರೆ. ಫ್ಲೈಟ್ ಓಡಿಸುತ್ತಿದ್ದಾರೆ. ಸೈನ್ಯದಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಮಹಿಳಾ ಕ್ರಿಕೆಟ್ ನಲ್ಲಿ ನಮ್ಮದೇಶದ ಮಹಿಳೆಯರು ತೋರಿರುವ ಸಾಧನೆ ಅಪಾರವಾಗಿದೆ ಎಂದು ಮಹಿಳಾ ಸಾಧನೆಗಳನ್ನು ವಿವರಗಳನ್ನು ನೆರೆದ ಮಹಿಳೆಯರ ಮುಂದೆ ತೆರೆದಿಟ್ಟರು.

ಸಾಮಾಜಿಕ ಸ್ಥಳದಲ್ಲಿ ಮಹಿಳೆ ಸ್ವಾವಲಂಬಿಯಾಗಿ ತನ್ನ ಕುಟುಂಬವನ್ನು ಸಮರ್ಪಕವಾಗಿ ನಿಭಾಯಿಸುವ ದೃಷ್ಟಿಯಿಂದ ಹಲವಾರು ಯೋಜನೆಗಳನ್ನು ಸರ್ಕಾರ ಅನುಷ್ಠಾನಕ್ಕೆ ತಂದಿದೆ. ಹಲವು ಸಾಮಾಜಿಕ ಸಮಸ್ಯೆಗಳಿಗೆ ಕಾಯ್ದೆ ಕಾನೂನುಗಳ ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸೇರಿದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಂಗನವಾಡಿ ಮೇಲ್ವಿಚಾರಕರು ಕಾರ್ಯಕರ್ತರು ಹಾಗೂ ಸಹಾಯಕಿರು, ಸಾರ್ವಜನಿಕರು ಉಪಸ್ಥಿತರಿದ್ದರು.

# ಶರಣರ ವಚನ ಮಹತ್ವ ಸೂಫಿಸಂ ತತ್ತ್ವ



**ಧರ್ಮ-ಮರ್ಮ**

• ಡಾ.ಎಂ.ಮಹ್ಮದ್ ಬಾಷ ಗೂಳ್ಯಂ

ಪ್ರಧಾನ ಸಂಪಾದಕ, ಬೆಂಗಳೂರು

ಬಹುಜನರ ಅಭಿಪ್ರಾಯದ ಪ್ರಕಾರ ಸೂಫಿ ಶಬ್ದವು 'ಸೂಫ' ಎಂದರೆ ಉಣ್ಣೆ ಶಬ್ದದಿಂದ ಬಂದಿದೆ. ಸಾಧಕರು ಉಣ್ಣೆಯ ಕಂಬಳಿ ತೊಡುತ್ತಿದ್ದರು. ಈ ಸೂಫ್ ಧಾರಣೆ ಸೂಫಿ ಲೋಕವನ್ನು ಪ್ರವೇಶಿಸುವ ಸಂಸ್ಕಾರದ ಒಂದು ಸಂಕೇತ. ಪ್ರವಾದಿಗಳು ಒಂದು ಯುದ್ಧದಲ್ಲಿ ಈ ತರಹದ ಸೂಫ್ ವಸ್ತ್ರಧಾರಣೆಯನ್ನು ಮಾಡಿದ್ದರೆಂದೂ, ತಮ್ಮನ್ನು ಪ್ರವಾದಿಯ ಜೀವನ ಶೈಲಿಗೆ ಹೊಂದಿಕೊಳ್ಳುವ ಪ್ರಯತ್ನ ಎಂಬುದಾಗಿ ಬಿಂಬಿಸಿದ್ದೂ ಇದೆ.

ಇದರಿಂದ ಸೂಫಿ ಸಿದ್ಧಾಂತವು ತನ್ನ ವ್ಯಾಪಕತೆಯನ್ನು ಪ್ರಚುರಪಡಿಸಲು ಅದು ಪೂರ್ವ ಪ್ರವಾದಿಗಳ ಆಚರಣೆಗಳ ಜೊತೆಗೆ ಸಂಬಂಧ ಕಲ್ಪಿಸಲು ಪ್ರಯತ್ನಿಸಿದ್ದು ಸುಳ್ಳಲ್ಲ. ಹಜರತ್ ಜುನೈದ್ ಬಾಗ್ದಾದಿ ಪ್ರಕಾರ 'ತಸವ್ವುಫ್' ಎಂಟು ವಿಶೇಷತೆಗಳಿಂದ ಕೂಡಿದೆ. ದಾನ ಧರ್ಮ, ಸಂತುಷ್ಟಿ, ಸಹನೆ, ಸಂಕೇತ, ಶ್ರೇಷ್ಠತೆ, ಸೂಫ್ ಧಾರಾಣೆ, ಲೋಕಸಂಚಾರ, ಫಕೀರತ್ವ. ಈಗಾಗಲೇ ವಿವರಿಸಿದಂತೆ 'ಸೂಫ್' ಧಾರಣೆಯು ಲೋಕ ಪರಿತ್ಯಾಗದ ದ್ಯೋತಕ. ಸೂಫ್ ಎಂದರೆ ಉಣ್ಣೆಯ ನಿಲುವಂಗಿ, ಜನರು ಲೋಕ ಪರಿತ್ಯಾಗದ ಉತ್ಸುಕರಾದಾಗ 'ಸೂಫ್' ವೇಷಧಾರಿಗಳಾಗುವರು. ಉದಾಹರಣೆಗೆ ಬಹಲೂಲ್ ಇಬ್ನೆ ಜಹೀಬ್ ಲೋಕ ಪರಿತ್ಯಾಗದ ಸಂಕಲ್ಪ ಮಾಡಿ 'ಸೂಫ್' ವಸ್ತ್ರಧಾರಿಯಾಗಿ ಮದೀನಾದ ಪರ್ವತಗಳ ಕಡೆಗೆ ಸಾಗಿದ್ದನು. ಅಂದಿನಿಂದ 'ಸೂಫ್'ನ ವಸ್ತ್ರಧಾರಣೆ ಲೋಕ ಪರಿತ್ಯಾಗದ



ಸಂಕೇತವಾಯಿತು. ವಿದ್ವಾಂಸ ಮೌಲಾನಾ ಅಬ್ದುಲ್ ರಹಮಾನ್ ಜಾಮಿ ಪ್ರಕಾರ ಈ ಪ್ರಥಮವಾಗಿ 'ಅಬುಹಾಶಿಮ್ ಕೋವಿ' ಅವರನ್ನು ಸಾರ್ವಜನಿಕವಾಗಿ 'ಸೂಫಿ' ಎಂದು ಕರೆಯಲಾಗಿದೆ.

ಸೂಫಿಗಳಿಗೆ ಅಗತ್ಯಕ್ಕಿಂತ ಜಾಸ್ತಿ ಬಟ್ಟೆ ಇದ್ದರೆ ಅದು ಬಾಧೆ ಎನಿಸುತ್ತಿತ್ತು. ಒಂದು ಉಡುಪಿನ ಹೊರತಾಗಿ ಇನ್ನೊಂದು ಉಡುಪು ದೊರೆತರೆ, ಅದು ಸ್ವರ್ಗ ಪ್ರಾಪ್ತಿಯ ಮಾರ್ಗದಲ್ಲಿ ಒಂದು ತಡೆ, ಫಕೀರತ್ವದ ಪ್ರಾಪ್ತಿಯಲ್ಲಿ ಅಂತ್ಯದ ಸೂಚನೆ ಎಂದು ಭಾವಿಸಲಾಗುತ್ತಿತ್ತು. ಜನಪ್ರಿಯ ಸೂಫಿ ಶೇಖ್ ಬಾಎಜಿದ್ ಬಸ್ತಾಮಿ ತಮ್ಮ ಸಮಸ್ತ ಜೀವಿತಾವಧಿಯಲ್ಲಿ ಒಂದೇ ಅಂಗಿಯನ್ನು ಬಳಸುತ್ತಿದ್ದರು. ಅವರ ನಿಧನದ ಬಳಿಕ ಆ ಅಂಗಿಯನ್ನು ಸಂಬಂಧಿತ ವಾರಸುದಾರ ವ್ಯಕ್ತಿಗೆ ಹಿಂತಿರುಗಿಸಲಾಯಿತು. ಇಂಥ ಅಸಂಖ್ಯ ಉದಾಹರಣೆಗಳಿವೆ. ಸೂಫಿಗಳಲ್ಲಿ ತೇಪೆ ಹಾಕಿದ ಉಡುಪನ್ನು ಧರಿಸುವ ಪರಿಪಾಠವಿತ್ತು. ತೇಪೆ ಹಾಕಿದ್ದ ಉಡುಪಿಗೆ 'ಮಖ್ರಾ' ಎಂಬ ಹೆಸರಿದೆ. ಸೂಫಿಗಳ ಪ್ರಕಾರ ಇದು ಗೌರವದ ದ್ಯೋತುಕ. ಇದಕ್ಕೆ ಅರ್ಹರಾದ ವ್ಯಕ್ತಿಗಳೇ ಇದನ್ನು ಧರಿಸಬಹುದೆಂಬ ತರ್ಕವೂ ಇದೆ.

**ಶರಣರ ವಚನ ಸಾಹಿತ್ಯ ಹಾಗೂ ಸಂಕ್ಷಿಪ್ತ ವಿಕಾಸ:** 11ನೇ ಶತಮಾನದಲ್ಲಿ ಉದಯಿಸಿದ ಧರ್ಮ ಪ್ರೇರಿತ, ಸಮಸಮಾಜ ನಿರ್ಮಾಣ ಕಲ್ಪನೆಯ ಶರಣರ ವಚನ ಸಾಹಿತ್ಯವು ದಮನಿತರ, ಶೋಷಿತರ ದನಿಯಾಗಿದೆ. ಸ್ವಂತಿಕೆಯಿಂದ ಮೆರೆದ ಶರಣರ ವಚನಗಳು ಕನ್ನಡ ಸಾಹಿತ್ಯದಲ್ಲಿ ಪ್ರಭಾವಶಾಲಿ ಆತ್ಮವಿಮರ್ಶೆಯ ಮಾಧ್ಯಮವಾಗಿ ಸ್ವತಂತ್ರವಾಗಿ ಬೆಳೆದು ವಿಜೃಂಭಿಸಿವೆ. ಭವಿಷ್ಯ ಸಾಹಿತ್ಯ ಪರಂಪರೆಗಳ ಮೇಲೆ ದಟ್ಟ ಪ್ರಭಾವ ಬೀರಿ ವಿಶ್ವಸಾಹಿತ್ಯದಲ್ಲೂ ಒಂದು ಅವಿಭಾಜ್ಯ ಅಂಗವಾಗಿ ಉಳಿದಿದೆ. ವಚನ ಸಾಹಿತ್ಯವನ್ನು ವಚನಗುರು ದೇವರ ಜೇಡರ ದಾಸಿಮಯ್ಯ, ಮಾದಾರ ಚೆನ್ನಯ್ಯ ಅವರ ಆದಿಯಾಗಿ ಗುರು ಬಸವಣ್ಣ ಹಾಗೂ ಅವರ ಸಮಕಾಲೀನ ಶರಣರು ರಚಿಸಿದ್ದಾರೆ.

ವಚನಗುರು ಮಾದಾರ ಚನ್ನಯ್ಯ ಅವರು 10 ರಿಂದ 11ನೇ ಶತಮಾನದ ಬಸವ ಪೂರ್ವ ಯುಗದಲ್ಲಿಯೇ ಇದ್ದರು ಎನ್ನುತ್ತದೆ ಸಂಶೋಧನೆ. ಲಭ್ಯ ಮಾಹಿತಿ ಪರಕಾರ; ಇವರು ಶಿವಮೊಗ್ಗ ಜಿಲ್ಲೆಯ ಬಿಳಿಗಾವಲು ಗ್ರಾಮದಲ್ಲಿ ಜನಿಸಿದ್ದರು ಎನ್ನಲಾಗಿದೆ. ಮಾದಾರ ಚನ್ನಯ್ಯನವರು ವಚನಕಾರರಲ್ಲಿಯೇ ಮೊದಲಿಗರು ಎಂದು ತಿಳಿಯಲು ಜೇಡರ ದಾಸಿಮಯ್ಯ ತಮ್ಮ ವಚನಗಳಲ್ಲಿ ಸ್ಮರಿಸಿರುವುದನ್ನು ಕಾಣಬಹುದಾಗಿದೆ.

ಮುಂದುವರೆಯುವುದು...

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)